ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ

★

ವಕೀಲನು ಕೇವಲ ಸ್ವಪಕ್ಷ ಸಮರ್ಥಕನಲ್ಲ. ಸತ್ಯ ಶೋಧನೆಯನ್ನು ಮಾಡಲು ನ್ಯಾಯಾಧೀಶನಿಗೆ ನೆರವಾಗಿ ನ್ಯಾಯದಾನದ ಕ್ರಮವು ಸುಗಮವಾಗುವಂತೆ ಅವನು ಸಹಾಯ ಮಾಡುವನು. ಈ ದೃಷ್ಟಿಯಿಂದಲೇ ವಕೀಲರು ತಮ್ಮನ್ನು ಕಂಡುಕೊಳ್ಳಬೇಕು. ಕೋರ್ಟುಗಳಲ್ಲಿ ಪಕ್ಷಕಾರರ ಪರವಾಗಿ ವಾದಿಸುವದಷ್ಟೇ ತಮ್ಮ ಕೆಲಸವೆಂದು ವಕೀಲರು ಭಾವಿಸುವದು ಕ್ಷುದ್ರಬುದ್ಧಿಯ ವಿಚಾರ. ವಕೀಲ ಮತ್ತು ನ್ಯಾಯಾಧೀಶ ಇವರಿಬ್ಬರೂ ಪರಸ್ಪರ ಪೂರಕರಾಗಿರುವರು.

—ನ್ಯಾಯ ಮೂರ್ತಿ ಭಗಲಾ


★



ನ್ಯಾಯಮೂರ್ತಿ ಭಗಲಾ

ಮುಂಬಯಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಭಗಲಾರವರು ಕಳೆದ ವಾರ ಧಾರವಾಡದಲ್ಲಿ ಸೇರಿದ ಕರ್ನಾಟಕ ವಕೀಲರ ಪರಿಷತ್ತನ್ನು ಉದ್ಘಾಟಿಸಿದರು. ಆಗ ಅವರು ವಕೀಲ ವೃತ್ತಿ, ನ್ಯಾಯದಾನದಲ್ಲಿ ಸರಕಾರದ ಹಸ್ತಕ್ಷೇಪ ಮೊದಲಾದವುಗಳ ಬಗ್ಗೆ ಹಲವು ಮನನೀಯ ವಿಚಾರಗಳನ್ನು ವ್ಯಕ್ತಗೊಳಿಸಿದರು.

ಹರಿಯಪ್ಪನ ಅದೃಷ್ಟ (ಕಸ್ತೂರೀ ಕಥೆ) —ಪುಟ ೨



KARMAVEER - KANNADA ILLUSTRATED WEEKLY, HUBLI

ಧರ್ಮಕ್ಷಯ

ಲೇಖಕರು: ಶ್ರೀ. ವೆಂಕಣ್ಣಾಚಾರ್ಯ ಪಪ್ಪು, ಬಿ. ಎ., ಎಲ್‌ಎಲ್. ಬಿ

[ಅಡಿಗೆ ಮನೆ, ಊಟದ ಸಮಯ, ಗುಂಡಮ್ಮನವರು, ಸುರೇಶ್ಮಮತ್ತು ಹಿಮಾ, ಅವರ ಮೊಮ್ಮಕ್ಕಳು. ಸುರೇಶನ ವಯಸ್ಸು ೧೬, ಇಂಗ್ಲೀಷ ಶಾಲೆಯ ಹುಡುಗ. ಹಿಮಾ ವಯಸ್ಸು ೧೩, ಇಂಗ್ಲೀಷ ಶಾಲೆಯ ಹುಡುಗಿ. ಆಧುನಿಕ ಆಚಾರ್ಯರು– ಪಾತ್ರವರ್ಗ]

ಗುಂಡಮ್ಮ:– ಅಯ್ಯ ಅಯ್ಯ.... ಯ್ಯ ಯ್ಯ .... ಘಾತಾತು; ಘಾ..ತಾ–ತು!

ಸುರೇಶ:– ಘಾತಾತು, ಹೌದೊ ಅಲ್ಲೊ ? ಘಾತಚತುರ್ದಶಿ ಮಾಡಿದಳಾತು.

ಗುಂ:– ನಿನ್ನ ಸುಟ್ಟಬರ್ಲೀ!

ಸು:– ಏನಮ್ಮಾ, ೧೯೪೮ ನೇ ಇಸ್ವಿ ಒಳಗ ಇಷ್ಟು ಹಳೆ ಬೈಗಳಾ ಬೈಯೋದು ಅಂದ್ರ ನನ್ನ ಅಪಮಾನಾ ಮಾಡಿದ್ಹಾಂಗ. "ಸುಟ್ಟಬರ್ಲೀ" ಅಂಬೋದು ಹಿಂದಾನ "ಶೂಟ ಮಾಡ್ಲಿ" ಅನ್ನು ಹಾಂಗ ಕೇಳಿದ್ರ, ಅತ್ಯಾಧುನಿಕ ಅಂದರ ಹೊಸಾ ಮುದುಕಿಯರು "ವಿದ್ಯುತ್ ಕರ್ರೆಂಟ್ ಕುಡಸಲೀ" "ಕಾಸ್ಮಿಕ್ ರಶ್ಮಿಸ್ನಾನಾ ಮಾಡಸಲೀ" ಅಂತ ಬೈತಿದ್ರು.

ಗುಂ:— ಹೊಸಾ ಮುದಿಕಿಯರು ಅಂದ್ರೇನು? ನಿನ್ನ ತಲಿ.

ಸು:– ಇನ್ನೊಂದು ಕೇಶವಾ ನಾರಾಯಣಾ ದೈ ನಿನ್ನ ಬೈಗಳ್ನ ಮಾರಕೀಟನ್ಯಾಗಿಟ್ಟು ಮಾರಿದ್ರ ಬಿಸಿಬಿಸಿ ದೋಸಿ ಖರ್ಚಾದ್ಹಾಂಗ ಖರ್ಚಾಗತಾವ.

ಗುಂ:– ನಿನ್ನ ಮಾರಿಗೆ ...ನನಗ.... ಸಿಟ್ಟು ....ತರಸಬ್ಯಾಡಾ. ಸಿಟ್ಟಿಗೆದ್ರ ನಾ ಮನಸೇಳ ಅಲ್ಲಾ.

ಸು:– ಮನಸೇರೊಳಗ ನಿನ್ನ ಯಾರು ಎಣಸತಾರ! ಹುಚ್ಚು ಮುಪ್ಪು ಕೂಡಿದವರ್ನ ಮನಸೇರೊಳಗ ಎಣಸಬಾರದು ಅಂತಾ ಕಾಯದೆ ಆಗೇದ.

ಗುಂ:– ನೀ ಏನು ಶಂಡ ಹುಡುಗs? ಇಷ್ಟೂ ತಿಳಿವಲ್ದರದಂದ್ರ. ಬ್ರಾಂಬರು ಊಟಕ್ಕ ಕೂಡದೇ ಕೂತಬಿಟ್ಟಿ.

ಸು:– ಅಮ್ಮಾ..ನಿನ್ನ ಕಲ್ಪನಾ ತಪ್ಪಾಗೇದ. ನಾನು ಊಟಕ್ಕ ಕೂತಿಲ್ಲಾ. ಊಟಕ್ಕ ಕೂಡೊ ರಂಗ ತಾಲೀಮು ನಡೆಸೇನಿ (ಪಾಯಸ ಸುರಿಯುವನು).

ಗುಂ:– ಲಗೂ ಬರ್‍ರೀ ಆಚಾರ ಹುಡುಗ ರಿಲ್ಲಾ ಅವಿವೇಕ ಅವ. ಶುದ್ಧ ಅವಿವೇಕ. ಎಲಿ ಬಡಸೇನಿ, ಬರ್‍ರಿ, ಲಗೂ ಬರ್‍ರಿ ಎಲಿಮ್ಯಾಲೆ.

[ಆಚಾರ್ಯರು ಅಕ್ಷಂತಿ ಹಚ್ಚಿಕೊಳ್ಳುವ ದನ್ನು ಮರೆತು ಗಡಿಬಿಡಿಯಿಂದ ಪಾಯಸದಲ್ಲಿ ಕಾಲಿಟ್ಟು ಕೂಡ್ರುವರು.]

ಆಚಾರ್ಯರು:– (ಊಟವನ್ನು ಶುರುವು ಮಾಡಿ) ಗುಂಡಮ್ಮನವರs, ಧರ್ಮಹೋತು? (ಸುರೇಶನ ಕಡೆಗೆ ಮೋರೆ ಮಾಡಿ) ಧರ್ಮಲ್ಯಾಂಡ ಹೋಗಿ ಧರ್ಮಲಂಡ ಆಗೇದ ನಮ್ಮ ದೇಶಾ. ಗುಂಡಮ್ಮನವರ, ನಿಮ್ಮಂಥವರ್‍ಯ ಇದ್ದೀರಿ ಅಂತ ಏನೊ ಚೂರುಪಾರು ಧರ್ಮ ಕ್ಷಾಯಾ. ಈಗ ನೋಡ್ರಿ, ಗುಡಿ ಗುಂಡಾರದಾಗ ಹರಿಜನಪ್ರವೇಶ, ಬ್ರಾಂಬರು ಹರಿಜನರಾಕಿನ್ನ ಲಗ್ನ ಮಾಡಿಕೋಬಹುದು, ಹರಿಜನ ಬಾಂಧವ ಬ್ರಾಂಬರ ಹುಡುಗನ್ನ ದತ್ತಕ ತಗೊಬಹುದು. ಸುರೇಶಗ "ರಂಡೆಗಂಡಾ" ಅಂತ ಬೈದಿದ್ದೆಲ್ಲಾ ಇನ್ನ ಮ್ಯಾಲೆ ಅದು ಬೈಗಳೊಳಗ ಬರುದುಲ್ಲಾ, ವಿಧವಾ ವಿವಾಹ ಕಾಯದೆಶೀರಾಗೇದ. ಒಂದs ಎರಡs ಏನ ಹೇಳ್ಲಿ ಗುಂಡಮ್ಮನವರ!

ಸು:– ಅಲ್ಲರೀ, ಆಚಾರ, ಧರ್ಮ ಕಾಯಬೊಂಬು ಇರೊ ಅವಗ ಈಗ್ಯೂ ಆಸ್ಪದ ಅದ. ಯಾವ ಗುಡಿಯೊಳಗ ಹರಿಜನ ಪ್ರವೇಶ ಆಗೇದ ಅಲ್ಲೆ ಹೋಗ್ರಿ ಅಂತ ಯಾವದಾರ್‍ಯ ಕಾಯದೆ ನಿಮ್ಮನ್ನ ಜಂಡಹಿಡಿದು ದಬ ತದೇನು? ಬ್ರಾಮ್ಹಣಾ ಹೊಲಿಯರಾಕಿನ್ನ ಮದಿಕೊಬೇಕು ಅಂತ ಯಾವ ಕಾಯದೆ ಹೇಳತದ? ಕದಾಚಿತ್ ಮಾಡ್ಕಿಕೊಂಡರ ಲಗ್ನ ಕಾಯದೆಶೀರ ಆಗತದ. ಹಾಂಗs ದತ್ತಕ. ಇಷ್ಟs.

ಆ:– ಗುಂಡಮ್ಮನವರs, ಈ ಹುಡುಗರ ಕಡಿಪಾ ವಾದ ಸೋಅವನs ಮೂರ್ಖಾ.

ಸು:– "ಧರ್ಮಕ್ಕೆ ಗಂಡಾಂತರ" ಅಂತ ಏನ ಪಾಂಚಜನ್ಯ ಮಾಡತೀರಿ ಅಥವಾ ಆ "ಬೆದರು" ಮೆರಸತೀರಿ, ಇದs ನಿಮ್ಮ ಅಗಾಧ ಅಜ್ಞಾನದ ಮಹಸ್ತ್ರರ ಮೂರ್ಖತನದ ಪಂಚನಾಮೆ.

ಆ:— ಗೋವಿಂದ, ಗೋವಿಂದ, ಗೋವಿಂದ. ವಾಯು ಜೀವೋತ್ತಮಾ, ಹರಿಸರ್ವೋತ್ತಮಾ, ಗುಂಡಮ್ಮನವರು ಜಿಲೇಬಿ ಪಾಲ್ಯಾದಾಗ ಕರದೀರೇನು? ಪಾಲ್ಯಾ ಮಡಿಗೆ ಬರೂದುಲ್ಲಾ.

ಸು:– ಏನ್ರಿ ಆಚಾರ್ಯ, ಮೊನ್ನೆ "ಕ್ಯಾಫೆ ಡಿಲೈಟ್"ದಾಗ ನೀವೇನು ಸೇವನ ಮಾಡಿದಿರಲ್ಲಾ ಆ ಅಮುಲೇಟ್ ಪಾಲ್ಯಾದಾಗೇ ತಯಾರಿಸಿದ್ದು.

ಆ:– ಪಾಲ್ಯಾ ಮಡಿಗೆ ಬರುದುಲ್ಲಾ ಇಷ್ಟೇ ನನ್ನ ಅಭಿಪ್ರಾಯ.

ಸು:– ಕ್ಷಮಿಸಿರಿ, ಹೋಟೇಲ್ಲಿಗೆ ಮೈಲಿಗೀಲೆ ಹೋಗಿದ್ದಿರಿ, ಅಲ್ಲಿ ಮತ್ತ ನಾವು ಸಾರ್ವಟಾಯಿಸು ಸಾನ್ ವೆಜಿಟೇರಿಯನ್.

ಗುಂ:– ಏ, ಸುರೇಶ್ಯಾ ಏನಂತ, ಬ್ರಾಂಬರಿಗೆ

ಆ:– ಏನಿಲ್ಲಾ ಹುಡುಗರಂಡೇವು, ನಾಲ್ಕು ಇಂಗ್ಲೀಷ ಶಬ್ದಾ ಕಲ್ತಾವ, ಅವನ್ನs ಉಜಳಣಿ ಮಾಡತಾವ ದರೊ ಹಾಕತಾವ.

[ಹಿಮಾ:– ಶಾಲೆಯಿಂದ ಬರುವಳು]

ಗುಂ:– ಏ ಹಿಮಾ! ನಿನ್ನ ಸಾಲಿ ಬೆಂಕಿ ಹಚ್ಚಲೀ....

ಹಿಮಾ:– ಅಮ್ಮಾ ಹ್ಯಾಗಾಗಲಿಕ್ಕೆ ಇದೇನು ೧೯೪೨ ನೇ ಇಸ್ವಿ ಅಲ್ಲಾ.

ಗುಂ:– . . . . ನಾನು ಒಬ್ಬಾಕಿನ ಸತ್ತೆ.

ಹಿ:– ಅಂದ್ರ ಸಾಯೋದಕ್ಕ ಸಹಕಾರಿ ಸಂಘ ಹೊಂಟಾವೇನು ?

ಗುಂ:– ಹಬ್ಬಲ್ಲಾ ಹುಣಿವಿ ಇಲ್ಲಾ ಹೆಣ್ಣು ಹುಡಿಗ್ಯಾಗಿ ಒಂದ ಚೂರಾರೆ ನೆರವು, ಕೇಳಬ್ಯಾಡ.

ಹಿ:– ಅಮ್ಮಾ ಮತ್ತ ಹೋಗಬೇಕಾಗೇದ ಈವತ್ತ "ಬಾಬ"ಗೆ ಬರತದೇನು ?

ಗುಂ:– "ಬಾಬ್ಬು" ಏನು? ಹಾಂಗಂದ್ರ ನಿನ್ನ ಮುಂಡಾ ಮೋಚಲೀ.

ಸು:– ಆ! ಹಾ!! ಬಾಬ್ ಅಂದ್ರೆ ಅಮ್ಮಾ ನೀ ಏನು ಕಡೀಕೆ ಅಂದ್ಕೊಲ್ಲಾ, ಅದು

ಹಿಮಾ:– ಅದಕ ಅಮ್ಮ ನ್ನೇನು ಕೇಳೋದು ದೊಡ್ಡ ಹಬ್ಬ ಬಿರಿ, ಹುಡಗಿ ಬಾಬ್ಬಿಗೆ ಏನು? ಮುತ್ತೈದೇರಿಗೆ ಮಾತ್ರ ಬರುದುಲ್ಲಾ ಹೌದೊ ಅಲ್ಲರೀ ಆಚಾರ ?

ಆ:– ಹರಿಸರ್ವೋತ್ತಮಾ, ಹರಿಸರ್ವೋತ್ತಮಾ ಅನ್ನದಾತಾ ಸುಖೀ ಭವ ಗುಂಡಮ್ಮನವರ, ನಿಮ್ಮಂಥಾ ಪತೀವಂದಿ ಕಂಡ್ಯಾ ದೇವರ್‍ಯ ಲಗೂ ಮುಚ್ಚಬೇಕು. ಪ್ರತಿಯೊಬ್ಬರ ಮನ್ಯಾಗು ಇಕಾ ಈ ಮಂಗ್ಯಾನಂಥಾ ಹುಡುಗರು, ಸರಕಾರ ನೋಡಿದ್ಯಾ ಧರ್ಮನಾಶ ಮಾಡಲಿಕ್ಕೆ ಟೊಂಕಾ ಕಟ್ಟೇದ, ನಿಮ್ಮ ಮಡಿ ಉಳಿಯುದುಲ್ಲಾ ಮೈಲಿಗೆ ಉಳಿಯುದುಲ್ಲಾ ತಿಳೀರಿ. ನೀವು ಇರೊವರು ಮೂರು ಮಂದಿ, ಇಂಥಾ ದೊಡ್ಡ ಮನಿ ತಗೊಂಡು ಏನ ಮಾಡಿತೀರಿ, ಅಂತ ಅರ್ಧಾ ಮನಿ ದನಾತಿಂಬೊ ಅವರಿಗೆ ಸಕ್ತಿಯಿಂದ ಬಾಡಿಗ್ಗಿ ಕೊಡಸಿದ್ರ ಏನ ಮಾಡೂಅವರು ಹೇಳ್ರಿ ನನಗ.

ಗುಂ:– ಇದೇನ್ರೀ ಸರಕಾರದವರು ಬೇಕಾದ್ರ ಅವರಿಗೆ ಹೊಸಾಮನಿ ಕಟ್ಟಿಸಿಕೊಡ್ಲಿ.

ಆ:– ಛೀ ನಿಮ್ಮ ಮಂಚಾಳ ಹೋಗ್ಲಿ ಅವ ರ್‍ಯಾಕ ಕಟ್ಟಸಲಿಕ್ಕೆ ಹೋಗತಾರ. ಧೋತರಾ ಕಡಿವಿ ಬಿದ್ದವು ಅಂತಾ ತಿಳೀರಿ. ಹೆಚ್ಚು ಧೋತರಾ ನೇಯಸಲಿಕ್ಕೆ ಹೋಗುದಲ್ಲಾ. ನನ್ನ ಧೋತರಾ ಹರದು ಮೂರು ಲುಂಗಿ ಮಾಡಿ ಬಿಡತಾರ. ಅದರಾಗ ನನ್ನ ಪಾಲಿಗೂ ಒಂದ ಲುಂಗಿ ಬರತದ.

ಗುಂ:– ಇಕಾ ಇಲ್ಲೆ ಮಡಿನೀರು ಇಟ್ಟೇನಿ ಕೈ ತೊಳಕೊಳರಿ. ಕಲಿ ಕಾಲದ್ಯಾಗ ಇನ್ನೂ ಏನೇನು ಕಾಣತೇವೊ. ಅಲ್ಲರಿ ಗುಡಿ ಒಳಗ ಹರಿಜನರು ಹೊಕ್ಕರ ದೇವರು ಕಲ್ಲಿನ್ಹಾಂಗ ಹಂಗs ನಿಂತಾನ್ರೀಪಾ. ಕಾಶೀವಿಶ್ವೇಶ್ವರಾ ಭಾವಿ ಹಾರಿಕೊಂಡ್ಹಾಂಗ ಯಾಕ ಹಾರಿಕೊಬಾರದು? ದೇವರಿಗೇ ಇದೇಲ್ಲಾ ಬೇಕಾಗಿದ್ರ, ಪಾಮರ ನಾವೇನು ಮಾಡಬಲ್ಲವಿ!!!
(ದೊಡ್ಡ ದನಿಯಿಂದ ಅಳಲಿಸುವಳು.)

ಹೆಂಡತಿ ಗಂಡನಿಗೆ ಹೇಳಿದ್ದು: "ನನ್ನ ಬಳಗದವರ ಬಗ್ಗೆ ನೀವೇನೇ ಹೇಳಿರಿ, ನನಗಂತೂ ನನ್ನ ಅತ್ತೆಗಿಂತ ನಿಮ್ಮ ಅತ್ತೆಯ ಮೇಲೆಯೆ ಪ್ರೀತಿ ಹೆಚ್ಚು"

ಹರಿಯಪ್ಪನ ಅದೃಷ್ಟ

ಬರೆದವರು :
ನಾ. ಕಸ್ತೂರಿ, ಎಂ. ಎ., ಬಿ. ಎಲ್.

ಕನ್ಯಾರ್ಥಿ ಹರಿಯಪ್ಪ ವರಾರ್ಥಿ ಕನ್ಯಾಪಿತೃಗಳಿಂದ ನಿರಾಕರಿಸಲ್ಪಟ್ಟಿದ್ದ. ಗೆಳೆಯ ಗೋಪಾಲನ ಪುಣ್ಯದಿಂದ ಚಿತ್ರದುರ್ಗದ ಸಂಬಂಧ ಹಾಗಾಗದೆಂದು ಬಗೆದಿದ್ದ ಅವನಿಗಾಗಿ ಹೊಸ ವಿಸ್ಮಯವೊಂದು ಕಾದಿತ್ತು.

ಹೆಣ್ಣು ನೋಡುವುದಕ್ಕೆ ಹೋಗುವುದಕ್ಕೂ ಹರಿಯಪ್ಪನಿಗೆ ಭಯ! ಆಗಲೇ ಅವನು ಐದಾರು ಊರುಗಳಿಗೆ ಪ್ರಯಾಣ ಮಾಡಿ ಮಾವಂದಿರ ಮನೆಗಳಲ್ಲಿ ಚೊಕ್ಕ ಭೋಜನ ಮಾಡಿ ಬಂದಿದ್ದ. ಆ ಹೆಣ್ಣುಗಳನ್ನೆಲ್ಲ ಅವನು ಒಪ್ಪಿದ್ದ; ನಿಜಕ್ಕೂ, ಅವನು ಅವರ ಮೋಹದ ಬಲೆಗೆ, ನೋಡಿದ ತಕ್ಷಣವೇ ಸಿಕ್ಕಿಬಿದ್ದ. ಅವರ ಕಣ್ಣಿನ ಹೊಳಪು, ಮೂಗಿನ ಮಾಟ, ಹಣೆಯ ಥಳಕು, ಇವು ಅವನನ್ನು ಸೂರೆಗೊಂಡವು. ಆದರೆ, ಯಾಕೊ ಏನೋ, ಇದುವರೆಗೂ ಆ ಮಾವಂದಿರು ಅವನ ತಂದೆಗೆ ತಮ್ಮ ಸಮ್ಮತಿಯ ಪತ್ರಗಳನ್ನು ಕಳುಹಿಸಿಯೇ ಇಲ್ಲ. "ನೀನು ಒಪ್ಪಿದರೂ, ಅವರೇಕೆ ತಟಸ್ಥರಾಗಿದಾರೆ? ಜಾತಕ ಸರಿ ಹೋಗಲಿಲ್ಲವೋ ಏನೋ? ನಂಟರಲ್ಲೇ ಯಾವನೋ ವರ ಸಿಕ್ಕಿರಬೇಕು. ಅಥವಾ, ಹುಡುಗಿ ಸತ್ತುಗಿತ್ತು ಹೋಯಿತೋ ಏನೋ!" ಎಂದು ಅವನ ತಾಯಿ ಅವನನ್ನು ಸಮಾಧಾನಪಡಿಸಿದಳು

ಆದ್ದರಿಂದ, ಮೊನ್ನೆ ಚಿತ್ರದುರ್ಗದಿಂದ ಕರೆ ಬಂದಾಗ, ಹರಿಯಪ್ಪನ ಮೋರೆಯ ಮೇಲೆ ಕಳೆಯೇ ಇರಲಿಲ್ಲ. ಪಾಪ, ಚಿತ್ರದುರ್ಗದ ಮಾವ ಹರಿಯಪ್ಪನ ಪ್ರಯಾಣದ ಖರ್ಚಿಗಾಗಿ ೫೦ ರೂ ಬೇರೆ, ಅಡ್ವಾನ್ಸ್ ಕಳುಹಿಸಿದ್ದರು. ಆದ್ದರಿಂದ, ಹೋಗದೆ ವಿಧಿ ಇಲ್ಲ. ಹೋದಾಗ, ಹರಿಯಪ್ಪ ನಂತೂ ಆ ಹೆಣ್ಣನ್ನು ಒಪ್ಪೇಬಿಡುತ್ತಾನೆ. ಹೆಣ್ಣು ಅಂದರೆ ಸರಿ, ಅವನು ಒಲ್ಲೆ ಎನ್ನುವಂತಿಲ್ಲ. ಬಣ್ಣ ಹೇಗಾದರೂ ಇರಲಿ, ಓದು ಎಷ್ಟಾದರೂ ಇರಲಿ, ಆಕಾರ ಎಷ್ಟೇ ವಿಕಾರವಾಗಿರಲಿ, ಕಂಠ ಎಷ್ಟೇ ನವಿಲಿನಂತಿರಲಿ, ಅವನು ಆಕೆಯ ಕಣ್ಣಿನ ಹೊಳಪಿಗೆ ತಣ್ಣಗಾಗುವನು. ಆದರೆ, ಅವನ ದುರ್ದೈವದಿಂದ, ನೂರೆಂಟು ವಿಘ್ನಗಳು ಬಂದು ಅಡ್ಡನಿಂತು, ಮದುವೆಯ ತನಕ ಮಾತು ಮುಂಬರಿಯಲು ಅವಕಾಶ ಕೊಡುತ್ತಿರಲಿಲ್ಲವಲ್ಲಾ! . . . ಆದ್ದರಿಂದ ಹರಿಯಪ್ಪನಿಗೆ ಹೆಣ್ಣು ನೋಡುವುದೆಂದರೆ, ಎಡಗಣ್ಣು ಮಿಡಿಯುವುದು; ಹೆಜ್ಜೆ ಇಡಲು ಲಜ್ಜೆ! ನೋಡಿದ ಹುಡುಗಿಯ ಪ್ರಾಣ ಉಡುಗಿ ಹೋಗುತ್ತದೋ ಎಂಬ ಭಯ!

ಕಡೆಗೆ, ತನ್ನ ಕಾಲೇಜು ಗೆಳೆಯ ಗೋಪಾಲನನ್ನೂ ಕರೆದುಕೊಂಡು, ಇಬ್ಬರೂ ಕೂಡಿಯೇ ಹೊರಟರು. ಗೋಪಾಲ ಹರಟೆಮಲ್ಲ; ಕುಚೋದ್ಯಗಾರ; ಒಂದೇ ಇಯತ್ತೆಯಲ್ಲಿ ಹಲವಾರು ಸಲ ಓದಿದ್ದರಿಂದ ಅನೇಕ ವಿಷಯಗಳನ್ನು ಗ್ರಹಿಸಿದವ; ದೇಶ ತಿರುಗಿದವ; ತಿಂಡಿಪೋತ; ಕ್ರೀಡಾರಂಗದಲ್ಲಿ ವಿಹರಿಸಿ ಕ್ರಿಕೆಟ್‌ನಲ್ಲಿ ಹೆಸರು ಗಳಿಸಿದವ; ಸಿನಿಮಾ ಪ್ರೇಮಿ; ಶ್ರೀಮಂತ ಸೋಮಾರಿ. ರೈಲುಗಾಡಿಯಲ್ಲಿ ಉದ್ದಕ್ಕೂ ಅವನು ನಗುತ್ತ ನಗಿಸುತ್ತ ಕಾಲ ಕಳೆದ. ಡಬ್ಬಿಯೊಳಗಣ ಜನಗಳನ್ನೇ ಒಕ್ಕಡೆ ಸೇರಿಸಿ, ಇಸ್ಪೀಟ್ ಆಟ ಆಡಿ, ಮೂರೂ ಕಾಲು ರೂಪಾಯಿ ಸಂಪಾದಿಸಿದ—ಮೋಸದಿಂದ! ಹರಿಯಪ್ಪ ಅವನ ಆಟವನ್ನು ಪಿಕಪಿಕ ನೋಡುತ್ತ ಕುಳಿತಿದ್ದ; ಅವನ ಹಾಸ್ಯದ ಚಟಾಕಿಗಳಿಗೆ ಕಿವಿಯಿಂದ ಕಿವಿ ವರೆಗೆ ಹಲ್ಲುಕಿರಿದ.

ಚಿತ್ರದುರ್ಗದ ನಿಲ್ದಾಣದಲ್ಲಿ ಅವರಿಗೆ ಸ್ವಾಗತನೀಡಲು, ಮಾವನವರೂ ಅವರ ನಾಲ್ಕು ಗಂಡು ಮಕ್ಕಳೂ ಬಂದಿದ್ದರು. ಗೋಪಾಲನ ವಾಗ್ಬಾಣಗಳನ್ನು ಕಂಡು ಮಾವನವರು ಬೆಚ್ಚಬೆರಗಾದರು. ಹರಿಯಪ್ಪನನ್ನೂ ಕಿರಿಮಗನನ್ನೂ ಒಂದು ಜಟಕದಲ್ಲಿ ಕೂಡಿಸಿ, ಅವರು ಗೋಪಾಲನ ಸಂಗಡ ಮತ್ತೊಂದನ್ನು ಹತ್ತಿದರು. ಗೆಳೆಯನ ಮನವೊಲಿಸಿ, ಅವನ ಮೂಲಕ ತನ್ನ ಪ್ರೀತಿ ಸಂಪಾದಿಸಲು ಈ ಪಿತೂರಿ—ಎಂದು ಹರಿಯಪ್ಪ ತಿಳಿದುಕೊಂಡ.

ಮನೆ ಸೇರುತ್ತಲೂ, ಅಳಿಯನಿಗೂ ಗೆಳೆಯನಿಗೂ ಮೈಸೂರುಪಾಕ್, ದೋಸೆ, ಕಾಫಿ ಉಪಚಾರ ನಡೆಯಿತು. ಹರಿಯಪ್ಪನ ಮುಖ ಸದಾ ಸಪ್ಪೆ. ಆದರೆ, ಗೋಪಾಲ ಗಹಗಹಿಸುತ್ತಲೇ ತಿಂದ. ಮೈಸೂರುಪಾಕನ್ನು ವನಸ್ಪತಿಯಲ್ಲಿ ಮಾಡದೆ ಅಪ್ಪಟ ತುಪ್ಪದಲ್ಲೇ ಮಾಡಿದೀರಲ್ಲಾ, ಎಂದು ಅಭಿನಂದಿಸಿದ ದೋಸೆಗೆ ಹಿಟ್ಟನ್ನು ರುಬ್ಬಿದವರನ್ನೂ ಹದವರಿತು ಅದನ್ನು ಕಾವಲಿಯ ಮೇಲೆ ಹುಯ್ದು ಬೇಯಿಸಿ ಮಗುಚಿ ನಿರವಿರನೆ ಮಾಡಿದವರನ್ನೂ ಅವನು ಬಾಯಾರ ಹೊಗಳಿದ. ಇದರಿಂದ, ಅಡಿಗೆ ಮನೆಯೊಳಗೆ ಸಂತೃಪ್ತಿ ಹರ್ಷ ದಿತು. ಇಂಥ ಜಾಣ್ನುಡಿಗಳನ್ನು ನುಡಿಯಬಲ್ಲ ಒಬ್ಬನ ಸ್ನೇಹಿತ ನಾನು ಎಂದು ಎಲ್ಲರೂ ಕಂಡುಕೊಳ್ಳಲಿ, ಎಂದು ಹರಿಯಪ್ಪ ಆಗಾಗ ಗೋಪಾಲನನ್ನು ಮೆಚ್ಚುತ್ತಿದ್ದ.

ಒಂದೆರಡು ತಾಸುಗಳ ನಂತರ, ಮಾವನವರು ಬಂದು, ಸರಸುವಿಗೆ ಸ್ಕೂಲಿಗೆ ಹೋಗಬೇಕಾಗಿದೆ, ಈಗಲೇ ಅವಳನ್ನ ಕರೆತಂದು ತೋರಿಸುತ್ತೇನೆ, ಎಂದು ಬಿನ್ನವಿಸಿಕೊಂಡರು. ಗೋಪಾಲನ ಕಿವಿಯಲ್ಲಿ ಹರಿಯಪ್ಪ, "ಹೇಗಾದರೂ ಮಾಡಿ, ಈ ಹೆಣ್ಣು ಕೈಜಾರದ ಹಾಗೆ ಮಾಡಬೇಕಪ್ಪ... ತಿರುಗಿ, ತಿರುಗಿ, ಸುಸ್ತಾಗಿದೆ. ನಾನೊಪ್ಪಿದರೂ ಕೂಡ, ಇದುವರೆಗೂ ಒಂದು ಸಂಬಂಧ ಕೂಡ ಸುಗಮವಾಗಲಿಲ್ಲ" ಎಂದ.

ಗೋಪಾಲನೂ ಹರಿಯಪ್ಪನೂ ಒಳಬಾಗಿಲೆದುರು ಎರಡು ಕುರ್ಚಿಗಳಲ್ಲಿ ಕುಳಿತರು. ಅಲ್ಲೇ ಒಂದು ಸಣ್ಣ ಮೇಜನ್ನಿರಿಸಿ, ಹುಡುಗರಲ್ಲೊಬ್ಬರು ಅದರ ಮೇಲೆ ದ್ರಾಕ್ಷಿ, ಬಾದಾಮಿ, ಕಿತ್ತಳೆಹಣ್ಣು, ಸೇಬಿನ ಹಣ್ಣು ಇತ್ಯಾದಿಗಳನ್ನು ತಟ್ಟೆ ತುಂಬ ತಯಾರುಮಾಡಿದರು. ಅಲ್ಲಿಂದ ಒಂದೊಂದು ಚೂರು ಪಾರು ಆರಿಸಿ ಬಾಯಿಗೆ ಎಸೆಯುತ್ತಾ ಅಳಿಯನೂ ಗೆಳೆಯನೂ ಸರಸುವಿನ ಮಂದ ಆಗಮನವನ್ನೇ ನಿರೀಕ್ಷಿಸುತ್ತಿದ್ದರು.

ಸರಸು ಬಂದಳು, ಹರಿಯಪ್ಪನ ಹೃದಯವನ್ನು ಪ್ರವೇಶ ಮಾಡಿದಳು. ಈ ಹುಡುಗಿಯನ್ನಾದರೂ ಕೊಡಿಸಪ್ಪ, ಎಂದು ಅವನು ಗಣೇಶನಿಗೆ ನಾಲ್ಕು ತೆಂಗಿನಕಾಯಿ ಹರಕೆ ಹೊತ್ತ. ಆದರೆ, ಅವಳ ತಂದೆ ಅಷ್ಟಕ್ಕೇ ತೃಪ್ತರಾಗಲಿಲ್ಲ. "ಏನಾದರೂ ಕೇಳಿ, ಅವಳನ್ನ. . . ಯಾವ ಕ್ಲಾಸಲ್ಲಿ ಓದುತ್ತಿದ್ದಾಳೆ, ಸಂಗೀತ ಎಷ್ಟು ಬರುತ್ತೆ, ಏನೇನು ಹಾಡುತ್ತಾಳೆ. . . ಎಲ್ಲ ಕೇಳಿ" ಎಂದರು. ಅವರಿಗೆ ಆಸೆ, ಮಗಳನ್ನ ಸರ್ಕಸ್ ಪ್ರಾಣಿಯ ಹಾಗೆ ಸಾಕಿದಾರ ನೂರಾರು ರೂಪಾಯಿ ಖರ್ಚಿನಲ್ಲಿ ವೀಣೆ ಹೇಳಿಸಿದ್ದಾರೆ, ಅವಳಿಗೋಸ್ಕರ ಕುದುರೆ ಸಾಕಿ, ಗಾಡಿ ಕೊಂಡು ಅವಳನ್ನ ಸ್ಕೂಲಿಗೆ ಕಳುಹಿಸುತ್ತಾ ಇದಾರೆ. ಬಂದವರ ಮುಂದೆ ಇವೆಲ್ಲ ಬೆಳಕಿಗೆ ಬರಲಿ ಅಂತ ಅವರಿಗೆ ಆತುರ ಇರುವುದಿಲ್ಲವೆ?

ಆದರೆ, ಹರಿಯಪ್ಪನಿಗೇನೂ ಬೇಕಿರಲಿಲ್ಲ. ತಾನು ಅವಳನ್ನು ಒಪ್ಪುವುದು ಹಾಗಿರಲಿ, ಹೇಗಾದರೂ ಅವರೆಲ್ಲ ತನ್ನನ್ನೊಪ್ಪಿದರೆ ಸಾಕೆನಿಸಿತು, ಅವನಿಗೆ. ಹುಡುಗಿಯನ್ನ ತಾನು ಮಾತನಾಡಿಸಿದರೆ, ತನ್ನ ಬಣ್ಣ ಬಯಲಾಗಿಬಿಡುತ್ತದೋ ಏನೊ, ಶ, ಷ, ಸ, ಶಬ್ದಗಳನ್ನು ಸ್ಫುಟವಾಗಿ ಉಚ್ಚರಿಸಲಾರ ಇವ ಅಂತ ಎಲ್ಲಿ ಆಕೆಗೆ ತಿಳಿದುಹೋಗುತ್ತೋ, ತನಗಿಂತ ಹೆಚ್ಚು ವ್ಯಾಕರಣ ಆಕೆಗೆ ತಿಳಿದಿದ್ದರೇನು ಮಾಡುವುದು, ಮೇಲುಸಾಲಿನ ಹಲ್ಲೊಂದು ಅರ್ಧ ಮುರಿದಿದೆ ಎಂಬ ಗುಟ್ಟು ರಟ್ಟಾದರೆ ಹೇಗೆ. . . ಎಂಬ ವಿಚಾರ ತರಂಗದಲ್ಲಿ ಅವನು ಮುಳುಗಿದ್ದ. ತಂದೆಯ ಪ್ರಶ್ನೆಗೆ ತಕ್ಕ ಕಾರ್ಯಕ್ರಮವನ್ನು ಗೋಪಾಲನೆ ಪ್ರಾರಂಭಿಸಿದ. ಅವನೇ ಹರಿಯಪ್ಪನ ಪರವಾಗಿ ಸರಸೂ ಕೈಯಿಂದ ಪುಸ್ತಕ ಓದಿಸಿದ, ಇಂಗ್ಲಿಷ ಬರೆಯಿಸಿದ, ಅವಳನ್ನು ಹಾಡುವಂತೆ ಕೇಳಿದ, ರಾಗಾಲಾಪನೆ, ಕೀರ್ತನೆ, ನಗುಮೋಮು, ನಿಡುತಲ್ಪೆ — ಇತ್ಯಾದಿಗಳನ್ನೆಲ್ಲ ಹಾಡಿಸಿದ. ಒಂದೆರಡು ಕಡೆ, ಸ್ವರ ತಿದ್ದಿದ. ಬ್ಯಾಂಡ್ ಮಿಂಟನ್ ಆಡುತ್ತಿದೀರಾ? ಎಂದು ಕೇಳಿದ. ಬ್ರಾಡ್ಮನ್ ವಿಷಯವಾಗಿ ಒಂದು ಉಪನ್ಯಾಸ ಕೊಡಿ ಎಂದ. ಇಸ್ಪೀಟಿನಲ್ಲಿ ಆಟೀನ್ ದೊಡ್ಡದೊ ನೈಲೆ ದೊಡ್ಡದೋ ಎಂದೆಲ್ಲ ವಿಚಾರಿಸಿದ. ಅಡಿಗೆ ಮಾಡುವ ವಿಧಾನದ ಮೇಲೆ ವಿವರಗಳನ್ನು

(೧೬ ನೇ ಪುಟಕ್ಕೆ)

ಜರ್ಮನರ ಭವಿತವ್ಯ

ಯುರೋಪಿಂದು ಇಬ್ಭಾಗವಾಗಿರುವುದು ಸುಸ್ಪಷ್ಟವಿದೆ. ಪಾಶ್ಚಾತ್ಯ ಮಿತ್ರರದೊಂದು ಗುಂಪಾದರೆ ಪೌರಸ್ತ್ಯರದು ಇನ್ನೊಂದು. ಕಳೆದ ಮಹಾಯುದ್ಧದಲ್ಲಿ ಜರ್ಮನಿಯ ನಾಜಿಜಂ ಮೂಲೋತ್ಪಾಟನ ಮಾಡಿ ಜಗತ್ತನ್ನು ಉದ್ಧರಿಸಿದ ಮಹಾಮುತ್ಸದ್ದಿತನ ತಮ್ಮ ಪಾಲಿನದೆಂದು ಈ ಚನ್ಮೂದಯ ಹೇಳಿಕೊಳ್ಳುತ್ತಿದೆ. ಆದರೆ ಅಂಥ ಮಹಿತ್ಕಾರ್ಯದಲ್ಲಿ ನಾನು ದುಡಿದುದು ಹೆಚ್ಚು ಆದುದರಿಂದ ನನಗೆ ಹೆಚ್ಚಿನ ಅಧಿಕಾರ ಎಂದು ಇಬ್ಬರೂ ನಗರೂ ಇಂದು ಕಲಹಗ್ರಸ್ತರಾಗಿದ್ದಾರೆ. ಈ ಕಲಹದ ಪರಿಣಾಮವಾಗಿ ಯುರೋಪಿನಂತೆಯೇ ಜರ್ಮನಿಯೂ ಅದರ ರಾಜಧಾನಿಯಾದ ಬರ್ಲಿನ್ನೂ ಇಬ್ಭಾಗವಾಗುವಂತಾಗಿದೆ. ಕೆಲ ಜನರು ಅತ್ತ, ಕೆಲವರು ಇತ್ತ ಒಲೆಯುತ್ತಿದ್ದರೆ, ಬಹುಜನರ ಗತಿ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬಂತಾಗಿದೆ. ಅವರಿಗೆ ನಿತ್ಯದ ಆಹಾರಾದಿ ಸಾಮಗ್ರಿಗಳ ಕೊರತೆ ಅಧಿಕವಾಗಿರುವುದರಿಂದ ಯಾವ ಪಕ್ಷವೂ ಬೇಡ ಎನಿಸಿದ್ದರೂ ಅವು ಆಳುವ ಪಕ್ಷಗಳಾಗಿರುವುದರಿಂದ ಅವುಗಳು ಹೇಳಿದ್ದಕ್ಕೆಲ್ಲ ಹೂಗುಟ್ಟುವ ಹೌದಪ್ಪನ ಚಾವಡಿಯ ಸದಸ್ಯರಾಗಬೇಕಾಗಿ ಬಂದಿದೆ.

ವಿಷಮ ಚಕ್ರ

ಪಾಶ್ಚಾತ್ಯ ಮಿತ್ರರು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಪಶ್ಚಿಮ ಜರ್ಮನಿಯ ಪುನರ್ರಚನೆಗೆ ಕೈಯಿಕ್ಕ ಬಯಸಿದರೆ, ರಶಿಯನ್ನರು ಕಮ್ಯುನಿಜಮ್ಮಿನ ತಳಹದಿಯ ಮೇಲೆ ಪೂರ್ವ ಜರ್ಮನಿಯನ್ನು ಕಟ್ಟಲು ಪ್ರಯತ್ನ ನಡೆಸಿದ್ದು ಪ್ರತ್ಯಕ್ಷ ಪ್ರಮಾಣಗಳಿಂದ ಸಿದ್ಧವಾಗುತ್ತದೆ. ಆದರೆ ಯಾರೂ ಬಾಯಲ್ಲಿ ತಮಗೆ ಜರ್ಮನಿಯಲ್ಲಿ ಸ್ಥಿರವಾಗಿ ಅಧಿಕಾರ ನಡೆಸುವ ಲಾಲಸೆಯಿಲ್ಲವೆಂದರೂ ಕಾರ್ಯತಃ ಆ ರೀತಿ ನಡೆದುಕೊಳ್ಳಲು ಪ್ರಯತ್ನಿಸುವ ಚಿಹ್ನೆ ಈಗಂತೂ ಕಂಡುಬರುವುದಿಲ್ಲ.

ಮೊದಲನೆಯದಾಗಿ, ಜರ್ಮನರಿಗೆ ಯಾವ ಪದ್ಧತಿಯ ಸರಕಾರ ಬೇಕು ? ಎಂಬ ಪ್ರಶ್ನೆಯನ್ನು ಎತ್ತಿದರೆ ಸಾಕು. ಅದಕ್ಕೆ ಒಮ್ಮತದ ಉತ್ತರ ಸಿಗಲಾರದು. ಶಾಸನ ಸಭಾ ಪ್ರಧಾನ ಸರಕಾರ, ರಾಷ್ಟ್ರೀಯ ಸರಕಾರ ಮತ್ತು ಸಂಯುಕ್ತ ಸರಕಾರ ಇವುಗಳಲ್ಲಿ ಯಾವುದಿರಬೇಕು ? ಎಂದು ಕೇಳಿದರೆ ಉತ್ತರ ಹೇಳುವುದು ಕಷ್ಟ; ಜರ್ಮನಿಯ ಪಾಶ್ಚಾತ್ಯವಲಯದ ಪ್ರಜೆಗಳಲ್ಲೇ ಈ ಬಗ್ಗೆ ಭಿನ್ನ ಮತ ಉಂಟಾಗಬಹುದು. ಇಡೀ ಜರ್ಮನಿಯಲ್ಲಿ ಜನಮತ ಗಣನೆಮಾಡಬೇಕಾದರೂ ಅವರಿಗೇ ಅವರ ನಾಡನ್ನು ಬಿಟ್ಟುಕೊಟ್ಟು ನಾಲ್ಕು ಆಕ್ರಾಮಕ ರಾಷ್ಟ್ರಗಳೂ ಅಲ್ಲಿಂದ ಹೊರಟು ಹೋಗಬೇಕು. ಹಾಗಲ್ಲದಿದ್ದರೆ ಆ ಮತಗಣನೆಯಲ್ಲಿ ಈ ಮಹಾಶೂರರು ಕೈಹಾಕುವ, ಸೂತ್ರಚಾಲನ ಮಾಡುವ, ವರ್ಚಸ್ಸನ್ನು ಬಳಸುವ ಶಂಕೆಯಿದೆ. ಈಗಾಗಲೇ ನಡೆದ ನಗರ ಸಭೆಯ ಚುನಾವಣೆಯಲ್ಲಿ ರಶಿಯನ್ನರು ಕೈಹಾಕಿದರೆಂಬ ಆರೋಪದ ಸುದ್ದಿ ಹರಡಿಬಿಟ್ಟದ್ದು. ಇದಕ್ಕೊಂದು ನಿದರ್ಶನ. ಈ ನಾಲ್ಕು ಮಹಾಪ್ರಭುತ್ವಗಳು ಜರ್ಮನಿಯಿಂದ ಕಾಲ್ದೆಗೆಯಲು ಮನಸ್ಸು ಮಾಡುವುದು ಅಸಂಭವ. ಒಂದು ಪಕ್ಷ ಇನ್ನೊಂದು ಪಕ್ಷ ಹೊರಗೇ ಇದ್ದರೂ ಏನಾದರೂ ತಂತ್ರ ಹೂಡಿ ಜರ್ಮನಿಯಲ್ಲಿ ತನ್ನ ವರ್ಚಸ್ಸನ್ನು ಬೀರಬಹುದೆಂದು ತಾನೂ ಹೆದರುವುದಲ್ಲದೆ ತನ್ನ ಅಂಕಿತದಲ್ಲಿರುವ ಜರ್ಮನ್ ಪ್ರಜೆಗಳಿಗೂ ಹೆದರಿಕೆ ಹಾಕುವುದು ಖಂಡಿತ. ಮದುವೆಯಾದ ಹೊರತು ಹುಚ್ಚು ಬಿಡದು ಹುಚ್ಚು ಬಿಟ್ಟಹೊರತು ಮದುವೆಯಾಗದು ಎಂಬ ಗಾದೆಯಂತೆ ಈ ಆಕ್ರಾಮಕ ರಾಷ್ಟ್ರಗಳು ಜರ್ಮನಿಯಿಂದ ಸಂಪೂರ್ಣವಾಗಿ ಕಾಲ್ತೆಗೆದ ಹೊರತು ಜರ್ಮನರ ಪರಿಸ್ಥಿತಿ ಸುಧಾರಿಸದು, ಐಕಮತ್ಯ ಲಭಿಸದು; ಜರ್ಮನರ ಪರಿಸ್ಥಿತಿ ಸುಧಾರಿಸಿ, ಅವರು ತಮ್ಮನ್ನು ತಾವೇ ಆಳಿಕೊಳ್ಳುವ ಒಮ್ಮತದ ಮಟ್ಟಕ್ಕೆ ಬಂದಹೊರತು ಈ ರಾಷ್ಟ್ರಗಳು ಅಲ್ಲಿಂದ ಕಾಲ್ತೆಗೆಯವು!

ಪರಸ್ಪರರ ಭಯ

ಆಕ್ರಾಮಕ ರಾಷ್ಟ್ರಗಳ ಇಬ್ಬಣದವರಿಗೂ ಜರ್ಮನರಿಗಿಲ್ಲದ ನೂರಾರು ಚಿಂತೆಗಳಿವೆ. ಜರ್ಮನಿಯನ್ನು ಅವರಷ್ಟಕ್ಕೇ ಬಿಟ್ಟುಬಿಟ್ಟರೆ ಪುನಃ ಅದು ಲೋಕಕಂಟಕವಾಗಿ ಬೆಳೆಯಲಿಕ್ಕಿಲ್ಲಬಹುದು ಎಂಬುದು ಒಂದು. ಇದಕ್ಕಿಂತ ಹೆಚ್ಚಾಗಿ, ಪಾಶ್ಚಿಮಾತ್ಯರಾದರೂ ಅಮೇರಿಕ ಮತ್ತು ರಶಿಯಗಳ ಕಲಹ ಬೆಳೆದು ಮೂರನೆಯ ಮಹಾಯುದ್ಧ ಪ್ರಾರಂಭವಾಯಿತೆಂದರೆ ಜರ್ಮನರು ಯಾರ ಕಡೆಗೆ ಸೇರಬಹುದು? ಯಾರಿಗೆ ಕಾಣೆಗಳನ್ನು ಸ್ವೀಕರಿಸಿಕೊಳ್ಳುವ ಮುಂತಾದ ಸವಲತ್ತುಗಳನ್ನು ಕೊಡಬಹುದು? ಜರ್ಮನರನ್ನು ನಂಬಲು ಸಾಧ್ಯವೆ? ಜರ್ಮನರನ್ನು ಸಾಯುಧ ಸುಸಜ್ಜಿತ ರಾಷ್ಟ್ರೀಯರನ್ನಾಗಿ ಮಾಡುವ ಹೊಣೆಯನ್ನು ಯಾರು ಹೊರಬೇಕು? ರಶಿಯನ್ನರು ಅಮೇರಿಕನ್ನರನ್ನೂ ಅವರ ಮಿತ್ರರನ್ನೂ ಈ ಕಾರ್ಯದಲ್ಲಿ ನಂಬಲಾರರು. ಇವರಾದರೂ ಅವರನ್ನು ನಂಬಲಾರರು. ಅಥವಾ ಜರ್ಮನಿಯನ್ನು ಕಡೆತನಕ ಇದೇ ರೀತಿ ವಿಭಕ್ತವನ್ನಾಗಿ ದಾಸ್ಯದಲ್ಲಿಯೇ ಇಡಬೇಕಾದೀತೆ? ಎಂದು ಸ್ವಾರ್ಥಪರರಾದ ಮುತ್ಸದ್ದಿಗಳು ಇಬ್ಬಣಗಳಲ್ಲೂ ಚಿಂತಿಸುತ್ತಿದ್ದಾರೆ. ಹಾಗೆ ವಿಭಕ್ತವೂ ಪರಾಧೀನವೂ ಆಗಿ ಜರ್ಮನಿ ಉಳಿದರೆ ಅದರ ಹೊಟ್ಟೆ ಹೊರೆವ, ಸಂರಕ್ಷಿಸುವ ಮತ್ತು ಅದರ ಪ್ರಜೆಗಳ ರಾಜಕೀಯ ಒಲೆತ ಶತ್ರುಪಕ್ಷದತ್ತ ಹರಿಯದಂತೆ ನೋಡಿಕೊಳ್ಳುವ ಬಗ್ಗೆ ಬೇಕಾದ ವೆಚ್ಚವನ್ನು ತಾವು ಶಾಶ್ವತವಾಗಿ ಹೊರಬೇಕೆ ? ಎಂಬ ಮುಂತಾದ ನೂರಾರು ಕೋಟೆಗಳಲ್ಲಿ ಸಿಲುಕಿದ ಪಾಶ್ಚಾತ್ಯ ಮತ್ತು ಪೌರಸ್ತ್ಯ ಮಿತ್ರರು ಜರ್ಮನಿಯ ಪ್ರಗತಿ ಕುಂಠಿತವಾಗಲು ಪ್ರತಿನಿತ್ಯವೂ ಹೊಸ ಹೊಸ ಬಿಕ್ಕಟ್ಟಿನ ಪ್ರಸಂಗಗಳನ್ನು ತಂದೊಡ್ಡುತ್ತಿದ್ದಾರೆ. ಒಂದು ದೃಷ್ಟಿಯಿಂದ ವಿಚಾರಮಾಡಿದರೆ, ಜರ್ಮನಿಯನ್ನು ಅದರ ಪಾಡಿಗೆ ಬಿಟ್ಟು ಈ ಆಕ್ರಾಮಕ ರಾಷ್ಟ್ರಗಳು ಅಲ್ಲಿಂದ ಗಂಟುಮೂಟೆ ಕಟ್ಟಿಕೊಂಡು ಹೊರಬೀಳುವುದು ಶ್ರೇಯಸ್ಕರವೆನಿಸುತ್ತದೆ. ಹೀಗೆಮಾಡುವುದರಿಂದ ಅವರ ಪರಸ್ಪರ ಕಲಹ ನಂದಲೂಬಹುದು. ಆದರೆ ಮಾಡಲು ಅವರ ಪ್ರಭಾವ ಪ್ರಯೋಗದ ಪರಸ್ಪರ ಭಯ ಬಿಡದು. ಹಾಗಲ್ಲದೆ ಎಲ್ಲರೂ ಸೇರಿ ಒಂದು ಬಗೆಯ ಸ್ವತಂತ್ರ ಸರಕಾರ ರಚನೆಗೆ ಜರ್ಮನರನ್ನು ಅಣಿಮಾಡಲು ಯತ್ನಿಸಬಹುದು. ಆದರೆ ಎಲ್ಲರೂ ಒಂದು ಬಗೆಯ ಸರಕಾರಕ್ಕೆ ಒಪ್ಪುವ ಸಂಭವವೇ ಇಲ್ಲ. ಆದುದರಿಂದ ಜರ್ಮನರ ಭವಿತವ್ಯ ರಾಹುಗ್ರಸ್ತ ಚಂದ್ರದಶೆಯಲ್ಲೇ ಈಗ ಇರಬೇಕಾಗಿದೆ.

ಸಂ. ರಾ. ಸಂಘದ ನಿರ್ವೀರ್ಯತೆ

ಮೂರನೆಯ ಮಹಾಯುದ್ಧದ ಶಂಕೆ ರಶಿಯಕ್ಕಿಂತ ಪಾಶ್ಚಾತ್ಯ ಮಿತ್ರರಿಗೇ ಹೆಚ್ಚಾಗಿ ಅರುಹತಕ್ಕ ಕೊಟ್ಟಿಸ್ತ್ರಕೆ. ಅವರ ಅಣ್ವಸ್ತ್ರ ಪರ್ಧಕರ ಕಾರ್ಯ ಇದಕ್ಕೆ ... ಆದರೆ ರಶಿಯ ಮತ್ತು ... ಹೇಳಲು ಬರದು. ... ಯಾರು ಬಲ್ಲರು? ಸಂಯುಕ್ತ ರಾಷ್ಟ್ರ ... ಪಾಶ್ಚಾತ್ಯ ಮಿತ್ರರ ... ಕಕ್ಷೆಯ ... ಪ್ರತಿನಿಧಿಗಳು ಯಾವ ಸಮಸ್ಯೆಯನ್ನು ... ಬೇಕಾದರೂ ... ಲಕ್ಷ್ಯಕೊಡದೆ ಕೇವಲ ಸ್ವಾರ್ಥಕ್ಕೇ ಪ್ರಾಧಾನ್ಯ ಕೊಡುವ ... ಬಿಟ್ಟುಕೊಂಡಿರುವುದರಿಂದ ಅಲ್ಲಿಗೆ ... ಬರ್ಲಿನ್ನಿನ ಬಿಕ್ಕಟ್ಟು ಬಗೆಹರಿಯುತ್ತಿಲ್ಲ. ಅಷ್ಟೇ ಇಲ್ಲಿಯ ವರೆಗೆ ಅವರು ಯಾವುದಾದರೂ ಸಮಸ್ಯೆಯನ್ನು ಬಗೆಹರಿಸಿದ್ದುಂಟೇ? ದಕ್ಷಿಣ ಆಫ್ರಿಕದ, ಇಂಡೋನೇಶಿಯದ, ಪಾಲಿಸ್ತಾನದ, ಗ್ರೀಸಿನ ಮತ್ತು ಇತರ ನಾಡುಗಳ ಯಾವ ಸಮಸ್ಯೆಯನ್ನು ಇವರು ನಿಷ್ಪಕ್ಷಪಾತವಾಗಿಯಾಗಲಿ, ಸಂಪೂರ್ಣವಾಗಿಯಾಗಲಿ, ಕಾರ್ಯರೂಪದಲ್ಲಿಯಾಗಲಿ ಬಗೆಹರಿಸಲು ಶಕ್ತರಾಗಿದ್ದಾರೆ? ಆದುದರಿಂದ ಸಂ. ರಾ. ಸಂಘ ಜರ್ಮನಿಯ ಭವಿತವ್ಯವನ್ನು ಬರೆವ ಬ್ರಹ್ಮನಾಗಲಾರದು. ಅಂದಮೇಲೆ "ಕಾಲೋಹ್ಯಯಂ ನಿರವಧಿಃ" ಎಂದು ಜರ್ಮನಿ ಕಾಯುತ್ತ ಬಿದ್ದಿರಬೇಕಾಯಿತು.

—ಶುಕ್ರಾಚಾರ್ಯ

ಸಂರಕ್ಷಣ ಮಂತ್ರಿಗಳು ಮತ್ತು ಫ್ರಾನ್ಸ ಮತ್ತು ಬೆನಿಲಕ್ಸ್ ದೇಶಗಳ ಸೈನ್ಯಾಧಿಕಾರಿಗಳೊಡನೆ ಮಾತುಕತೆ ನಡೆಸಲು ಫೀಲ್ಡ್ ಮಾರ್ಶಲ್ ವಿಸ್ಕೌಂಟ್ ಮಾಂಟಗೋಮೆರಿಯವರು ನೆದರ್‌ಲೆಂಡ್ಸಿನ ವಾಲ್ಕೆನ್‌ಬರ್ಗ ವಿಮಾನ ಶಾಲೆಯಲ್ಲಿ ಇಳಿದಾಗ ತೆಗೆದ ಚಿತ್ರ.

ಚಿಯಾಂಗರ ರಾಜೀನಾಮೆ ?

ಕಾಲಗಾನ ರೇಲ್ವೆ ಲೈನಿನಲ್ಲಿ ದಕ್ಷಿಣಕ್ಕೆ ನುಗ್ಗುತ್ತಿರುವ ಕಮ್ಯುನಿಸ್ಟ್ ಸೈನ್ಯವು ಪೀಪಿಂಗಿನಿಂದ ೨೦ ಮೈಲು ಉತ್ತರಕ್ಕಿರುವ ಚೆಂಗ್‌ಪಿಂಗನ್ನು ವಶಪಡಿಸಿಕೊಂಡು ಮುಂದೆ ಬರುತ್ತಿದೆಯೆಂದೂ ಪೀಪಿಂಗಿನಲ್ಲಿ ಕರ್ಫ್ಯೂ ಜಾರಿಮಾಡಲಾಗಿದೆಯೆಂದೂ ತಿಳಿಯುತ್ತದೆ. ಅಲ್ಲದೆ, ಜನರಲಿಸಿಮೋ ಚಿಯಾಂಗ್ ಕೈಶೇಕರು ಚೀನದ ಅಧ್ಯಕ್ಷ ಪದಕ್ಕೆ ರಾಜೀನಾಮೆ ಕೊಟ್ಟಿರುವರೆಂದೂ ಚೀನೀ ಧನಿಕ ವರ್ಗದಲ್ಲಿ ದಟ್ಟ ವಾರ್ತೆ ಹಬ್ಬಿದೆ.

"ನ್ಯೂಯಾರ್ಕ ಟೈಮ್ಸ್" ಪತ್ರಿಕೆಯಲ್ಲಿ ಚೀನೀ ಸರಕಾರದ ೧೬ ನೆಯ ಸೈನ್ಯವಿಭಾಗ ಜನರಲ್ ಸುಯುವನ್ ಲಿಯಂಗನ ಸೇನಾಪತ್ಯದಲ್ಲಿತ್ತೆಂದೂ ಅದೀಗ ಸಂಪೂರ್ಣವಾಗಿ ಅದೃಶ್ಯವಾಗಿದೆಯೆಂದೂ ಹೇಳಲಾಗಿದೆ. ಇದರಿಂದ ಜಪಾನಿನಲ್ಲಿ ಆಡಳಿತ ನಡೆಸುತ್ತಿರುವ ಜನರಲ್ ಮ್ಯಾಕ್ ಆರ್ಥರರು ಚೀನದಲ್ಲಿ ಅಮೇರಿಕದ ಸ್ಥಾನ ಅಭದ್ರವಾಗುತ್ತಿದೆ ಎಂಬ ಚಿಂತೆಯನ್ನು ವ್ಯಕ್ತಮಾಡಿದರು. ಈ ಕಮ್ಯುನಿಸ್ಟರ ಮೇಲ್ಗೈಯಿಂದ ಪಾಶ್ಚಾತ್ಯ ಜಗತ್ತಿಗೂ ಚಿಂತೆಹತ್ತಿದಂತೆಯೇ ಸೈ. ನೆಂಗಮೂವಿನ ಹತ್ತಿರ ಅಂದರೆ ರಾಜಧಾನಿಯಿಂದ ೪೫ ಮೈಲು ದೂರದಲ್ಲಿ ಸರಕಾರೀ ರಕ್ಷಕ ಸೈನ್ಯದ ಸಾಲನ್ನು ಕಮ್ಯುನಿಸ್ಟರು ಭೇದಿಸಿದರೆಂದೂ ಅವಸರದಿಂದ ಅಲ್ಲಿಗೆ ಮತ್ತೆರಡು ದಲಗಳನ್ನು ಸರಕಾರ ಕಳಿಸಿತೆಂದೂ ಇತ್ತೀಚಿನ ವರದಿಯಿದೆ. ಉತ್ತರದಲ್ಲಿ ಹಳೆಯ ರಾಜಧಾನಿಯಾದ ಪೀಪಿಂಗಿನ ಸುತ್ತು ಕಮ್ಯುನಿಸ್ಟರು ಮುತ್ತಿಗೆ ಹಾಕಿದ್ದಾರೆ. ಅದಕ್ಕೆ ಪೂರ್ವದಲ್ಲಿರುವ ಪುಂಗ್‌ಟೋದಲ್ಲಿ ಸರಕಾರಿ ಸೈನ್ಯವು ಒಂದು ಭದ್ರವಾದ ಸಂರಕ್ಷಣಾ ದುರ್ಗವನ್ನು ಕಟ್ಟಿ ಶತ್ರುಗಳನ್ನು ಪ್ರತಿಭಟಿಸಲು ಕಾದಿದೆಯೆಂದು ಸರಕಾರೀ ಸುದ್ದಿಯಿದೆ. ಆದರೆ ಚಿಯಾಂಗ್ ರಾಜ್ಯದ ಅಪ್ತಾಷ್ಟ್ರ ಹೋನಾನ್ ಪ್ರದೇಶದಲ್ಲಿ ಎರಡು ಸರಕಾರೀ ದಲಗಳು ಶತ್ರು ಸೈನ್ಯದ ನಡುವೆ ಸಿಕ್ಕಿಬಿದ್ದಿವೆಯಂತೆ !

ವಿಚಿತ್ರ ಚಿತ್ರ

ಇರ್ಸಾಲಿಗೆ ಜಯಕೆ!

ಫ್ರಾಂಕ್‌ಫರ್ಟ್ ಫ್ರೈಲಿನ್ ಎಂಬ ಫ್ರೆಂಚ್ ತರುಣಿಗೆ ಎರಡು ನಾಲಿಗೆಗಳಿದ್ದವು. ಅವರ ಒಂದು ಮಾತನ್ನು ಅಳಲು ಅವರಿಗೆ ಬರದು! ಈ ಇರ್ಸಾಲಿಗೆಯಾಕೆಗಿಂತಲೂ ಒಂದೇ ನಾಲಿಗೆಯುಳ್ಳವರು ಎರಡಾಡುವುದು ಹೆಚ್ಚು ಆಶ್ಚರ್ಯಕರವಲ್ಲವೇ? ವಿಚಿತ್ರ ನಿಮಾರ್ಣಕರತ್ತ ಲಕ್ಷ್ಯ ಕೊಡಬೇಕು.

ಭಾವೀ ಯುದ್ಧದ ವಿಚಿತ್ರ ಮಾರ್ಗ

ಈಗ ನೆಲ, ಜಲ ಮತ್ತು ಆಕಾಶಮಾರ್ಗಗಳಲ್ಲಿ ಸಂಚರಿಸುವ ಸಾಧನಗಳನ್ನು ಬಳಸಿಕೊಂಡು ಯುದ್ಧ ಮಾಡುವುದು ಜಗತ್ತಿಗೆ ಪರಿಚಿತವಿದೆ. ಆದರೆ ಡಾ. ಫ್ರಿಟ್ಜ್ ಬ್ರೆಂಟಾನೋ ಭೂಗರ್ಭವನ್ನು ಕೊರೆದು ದಾರಿ ಮಾಡುವ ಹೊಸ ಸಾಧನಗಳಿಂದ ಮುಂದೆ ಯುದ್ಧ ನಡೆಯಬಹುದೆನ್ನುತ್ತಾರೆ. ಈಗ ಅಂಥ ಯಂತ್ರದ ನಿರ್ಮಾಣಕ್ಕೆ ಬೇಕಾದ ತತ್ವಸೂತ್ರಗಳನ್ನು ಕಂಡು ಹಿಡಿದಿದ್ದು, ಅವುಗಳ ಪ್ರಕಾರ ಕೆಲ ವರ್ಷಗಳಲ್ಲಿ ನೆಲವನ್ನು ಕೊರೆದುಕೊಂಡು ಹೋಗಬಲ್ಲ ಒಂದು ಬೃಹದಾಕೃತಿ ಭೂಕಾರಿ ಯಂತ್ರವನ್ನು ನಿರ್ಮಿಸಬಹುದು. ಅದಕ್ಕೆ ಭೂಗರ್ಭದಲ್ಲಿರುವ ಮತ್ತಿನ ಬೇರೆ ಬೇರೆ ಪದರುಗಳ ಗುಣಾವಲೋಕನ ಶಕ್ತಿ ಅವಶ್ಯ. ಅಷ್ಟೇ ಮೊದಲು Terra Pulse Engine—ಭೂಹೃದಯ ಪರೀಕ್ಷಕ ಯಂತ್ರವೊಂದನ್ನು ನಿರ್ಮಿಸಿ ಅದಕ್ಕೆ ಭೂಗರ್ಭ ಭೇದಕ ಯಂತ್ರವನ್ನು ತಗುಲಿಸಿದರೆ ಅದು ಇದನ್ನು ಎಳೆದುಕೊಂಡು ಹೋಗುತ್ತಿದ್ದ ಹಾಗೇ ಇದು ಭೂಮಿಯನ್ನು ಕೊರೆಯುತ್ತ ಹೋಗುವುದು!

ಕಚ್ಚದ ಜೇನು

ಕೆನಡದ ಜೇನುಗಾರರು ಒಂದೆಡೆ ಇಟಲಿಯ ಮತ್ತು ಕಾರ್ನಿಯೋಲನ್ನಿನ ಎರಡು ಭಿನ್ನ ಜಾತಿಯ ಜೇನುಹುಳುಗಳ ಸಂಯೋಗ ಮಾಡಿಸಿ ಹೊಸ ವಿಧದ ಜೇನು ಸಂತತಿಯನ್ನು ಪಡೆದಿದ್ದಾರೆ. ಈ ಹೊಸ ಜೇನುಗಳು ಇತರ ಹುಳುಗಳಂತೆ ಜೇನನ್ನು ತಯಾರಿಸುವ ಮತ್ತು ಇನ್ನಿತರ ಎಲ್ಲ ಕಾರ್ಯಗಳನ್ನು ಸರಿಯಾಗಿ ಮಾಡುತ್ತವೆ. ಆದರೆ ಕಚ್ಚುವುದಿಲ್ಲ!

ಕೊರಿಯದ ಏಕೀಕರಣ ಸಮಿತಿ

ಪ್ಯಾರಿಸ್ಸಿನಲ್ಲಿ ಜರಗುತ್ತಿದ್ದ ಸಂಯುಕ್ತ ರಾಷ್ಟ್ರ ಸಂಘದ ಸಭೆಯೀಗ ಮುಗಿದು ಎಪ್ರಿಲ್ ಒಂದಕ್ಕೆ ಮತ್ತೆ ಸೇರಬೇಕೆಂದು ಠರಾಯಿಸಿತು. ಮುಗಿಯುವಾಗ ಕಡೆಯದಾಗಿ ಹಿಂದಿನ ಸಾತ್ಕಾಲಿಕ ಸಮಿತಿಯನ್ನು ವಿಸರ್ಜಿಸಿ ಕೊರಿಯದ ಏಕೀಕರಣಕ್ಕಾಗಿ ಶಾಶ್ವತ ಸಮಿತಿಯೊಂದನ್ನು ನಿಯಮಿಸುವ ಗೊತ್ತುವಳಿಯನ್ನು ಸ್ವೀಕರಿಸಿತು.

ಭಾಷಾನ್ವಯ ಪ್ರಾಂತಗಳಿಗೆ ದರ್ ಸಮಿತಿ ವಿರೋಧ

ಅದು ರಾಷ್ಟ್ರೀಯತೆಗೆ ಘಾತಕವಂತೆ!

ಭಾಷಾನ್ವಯ ಪ್ರಾಂತರಚನೆಯ ಸಂಬಂಧದಲ್ಲಿ ವಿಷಯ ಸಂಗ್ರಹ ಮಾಡಿ ಅದರ ಸಾರಾಸಾರತೆಯನ್ನು ವರದಿ ಮಾಡಲು ಘಟನಾ ಸಮಿತಿಯ ಅಧ್ಯಕ್ಷರು ನೇಮಿಸಿದ್ದ ದರ್ ಸಮಿತಿ ಕಳೆದ ವಾರ ಒಪ್ಪಿಸಿದ ವರದಿ ಇದೀಗ (ತಾ. ೧೩) ಪ್ರಕಟಿಸಲ್ಪಟ್ಟಿದ್ದು ಅದು ಭಾಷಾನ್ವಯ ಪ್ರಾಂತರಚನೆಯನ್ನು ಮಾಡಕೂಡ ದೆಂದು ಸರ್ವಾನುಮತದಿಂದ ಸಲಹೆ ಕೊಟ್ಟಿದೆ.

ಭಾಷಾನ್ವಯ ಪ್ರಾಂತರಚನೆಯ ಬಗ್ಗೆ, ಸಂಬಂಧಪಟ್ಟ ಪ್ರದೇಶಗಳಲ್ಲಿ, ಜನಾಭಿಪ್ರಾಯ ಬಹಳ ತೀವ್ರವಾಗಿದೆಯೆಂದು ದರ್ ಸಮಿತಿ ಒಪ್ಪಿದ್ದರೂ ಅಂಥ ಪ್ರಾಂತರಚನೆಯಿಂದ "ಉಪರಾಷ್ಟ್ರೀಯತೆ"ಗೆ ಪುಷ್ಟಿ ದೊರೆತು ರಾಷ್ಟ್ರೀಯತೆ ಘಾತಹೊಂದುವದೆಂದು ಅಭಿಪ್ರಾಯಪಟ್ಟಿದೆ. ಸಂಸ್ಥಾನಗಳ ಭವಿಷ್ಯತ್ತು ನಿರ್ಣಯಿಸಲ್ಪಟ್ಟು, ಪರಿಸ್ಥಿತಿ ಶಾಂತವಾದ ಬಳಿಕ ಪ್ರಾಂತಗಳ ಪುನರ್ರಚನೆ ಮಾಡಬೇಕಾಗಿ ಬಂದರೂ ಭಾಷಾನ್ವಯ ಪ್ರಾಂತಗಳನ್ನು ರಚಿಸದೆ, ಆಡಳಿತದ ಸೌಕರ್ಯವನ್ನನುಸರಿಸಿ ರಚಿಸಬೇಕೆಂದು ದರ್ ಸಮಿತಿ ಭಾಷಾನ್ವಯ ಪ್ರಾಂತರಚನೆಗೆ ಶಾಶ್ವತ ಸಮಾಧಿ ಕೊಡಲೆಳಸಿದೆ.

ದರ್ ಸಮಿತಿಯ ಈ ನಿರ್ಣಯವನ್ನು ಪ್ರತಿಭಟಿಸಿ ಹಲವು ಪ್ರಾಂತಿಕ ಪತ್ರಿಕೆಗಳು ತೀಕ್ಷ್ಣವಾದ ಅಗ್ರಲೇಖಗಳನ್ನು ಬರೆದಿವೆ, ಅದೇ ಪ್ರಕಾರ ಹಲಕೆಲವು ಇಂಗ್ಲೀಷ್ ಪತ್ರಿಕೆಗಳೂ ಅದನ್ನು ಸ್ವಾಗತಿಸಿವೆ. ಉತ್ತರ ಭಾರತಕ್ಕೆ ಸೇರಿದ ಮೂವರೂ ಸಮಿತಿ ಸದಸ್ಯರು ಈ ಸಮಸ್ಯೆಯನ್ನು ಸರಿಯಾಗಿ ಅರಿತಿಲ್ಲವೆಂದೂ ದೂಷಿತ ಮನಸ್ಸಿನಿಂದಲೇ ಅವರು ವಿಚಾರಣೆಗೆ ಇಳಿದಿದ್ದುದರಿಂದ ಅವರು ಯೋಗ್ಯ ನಿರ್ಣಯಕ್ಕೆ ಬರಲು ಅಸಮರ್ಥರಾದರೆಂದೂ ಟೀಕಿಸಲಾಗಿದೆ.

೧೯೪೭ ನವೆಂಬರದಲ್ಲಿ ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆ ಘಟನಾ ಸಮಿತಿಯಲ್ಲಿ ಚರ್ಚೆಗೆ ಬಂದಾಗ ಘಟನೆಯ ಕರಡಿನ ಸಮಿತಿಯ ಸೂಚನೆಯಂತೆ ನಿರ್ಮಿಸಲ್ಪಟ್ಟಿದ್ದ ಈ ವಿಚಾರಣ ಸಮಿತಿಯಲ್ಲಿ ಅಲಹಾಬಾದ ಹೈಕೋರ್ಟಿನ ಹಿಂದಿನ ನ್ಯಾಯಾಧೀಶರಾದ ಶ್ರೀ. ಎಸ್. ಕೆ. ದರ್ (ಅಧ್ಯಕ್ಷ), ಯುಕ್ತ ಪ್ರಾಂತದ ಹಿಂದಿನ ಗವರ್ನರ ಡಾ. ಪನ್ನಾಲಾಲ, ಮತ್ತು ಬಿಹಾರದ ಶ್ರೀ. ಜಗತ್ ನಾರಾಯಣಲಾಲ (ಘಟನಾ ಸಮಿತಿ ಸದಸ್ಯರು) ಇದ್ದು, ಅಕೌಂಟಂಟ ಜನರಲ್ ಬಿ. ಸಿ. ಬ್ಯಾನರ್ಜಿಯವರು ಕಾರ್ಯದರ್ಶಿಗಳಾಗಿದ್ದರು.

ಇವರಲ್ಲದೆ ವಿವಿಧ ಪ್ರಾಂತಗಳ ಪರವಾಗಿ ಸಾಕ್ಷಿಗಳನ್ನು ಕೇಳಿಕೊಳ್ಳುವದರಲ್ಲಿ ಮತ್ತು ಚರ್ಚಿಸುವದರಲ್ಲಿ ಸಹಾಯ ಮಾಡಲು ಕೆಳಗಿನ ಸಹಾಯಕ ಸದಸ್ಯರನ್ನು ನೇಮಿಸಲಾಗಿತ್ತು. ಆದರೆ ವರದಿ ಬರೆಯುವಲ್ಲಿ ಅವರ ಅಂಗವಿಲ್ಲ:

(೧) ರಾಮಕೃಷ್ಣ ರಾಜು (ಮದ್ರಾಸ ವಿಧಿಮಂಡಲದ ಅಧ್ಯಕ್ಷ), (೨) ಬಿ. ಎ. ರಾಮಲಿಂಗಚೆಟ್ಟಿಯಾರ (ಘಟನಾಸಮಿತಿ ಸದಸ್ಯ), (೩) ನಾರಾಯಣ ಮೆನನ್ (ಮದ್ರಾಸ ವಿಧಿಮಂಡಲ ಸದಸ್ಯ), (೪) ಟೇಕೂರ ಸುಬ್ರಹ್ಮಣ್ಯಂ, ಬಳ್ಳಾರಿ, (೫) ಕೆ. ಎಂ. ಮುನಶಿ, (೬) ಆರ್. ಆರ್. ದಿವಾಕರ, (೭) ಎಚ್. ವಿ. ಪಾಟಸ್ಕರ, (೮) ಗೋಪಿಲಾಲ ಶ್ರೀವಾಸ್ತವ.

ಇದೇ ವರ್ಷ ಜುಲೈ ೧೯ಕ್ಕೆ ಕಾರ್ಯಾರಂಭ ಮಾಡಿದ ಈ ಸಮಿತಿ ಆಂಧ್ರ, ತಮಿಳುನಾಡು, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಮಧ್ಯಪ್ರಾಂತ, ಮತ್ತು ಕೊಂಕಣ ಭಾಗಗಳನ್ನು ಸುತ್ತಿ ೭೦೦ ಕ್ಕಿಂತ ಹೆಚ್ಚು ಸಾಕ್ಷಿಗಳನ್ನು ತೆಗೆದುಕೊಂಡು ೧೦೦೦ ಕ್ಕಿಂತ ಹೆಚ್ಚು ಲಿಖಿತ ಮನವಿಗಳನ್ನು ಪಡೆದು ನವೆಂಬರ ೧೦ ಕ್ಕೆ ವರದಿಯನ್ನು ಒಪ್ಪಿಸಿತು.

ಸಮಿತಿ ತನ್ನ ವರದಿಯಲ್ಲಿ ಮಾಡಿದ ಪ್ರಸ್ತಾಪಗಳು ಇವು:

ಆಶ್ವಾಸನದ ಗತಿ

೧೯೨೦ ರಿಂದಲೂ ಕಾಂಗ್ರೆಸ್ಸು ಭಾಷಾನ್ವಯ ಪ್ರಾಂತಗಳ ಆಶ್ವಾಸನ ಕೊಡುತ್ತ ಬಂದಿದ್ದರೂ ಆ ವಾಗ್ದಾನವನ್ನು ಪೂರೈಸುವಲ್ಲಿ ಇಂದಿನ ಬದಲಾದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುವದು.

ಪ್ರಾಂತೀಯತೆ–ರಾಷ್ಟ್ರೀಯತೆ

ಇಂದು ಹಿಂದುಸ್ತಾನವನ್ನು ಏಕರಾಷ್ಟ್ರವಾಗಿ ಸಂಘಟಿಸುವದೇ ಮೊದಲನೆ ಮತ್ತು ಕೊನೆಯ ಅವಶ್ಯಕತೆ. ರಾಷ್ಟ್ರೀಯತೆಯ ಭಾವನೆಯನ್ನು ಬೆಳೆಸುವ ಪ್ರತಿಯೊಂದು ಕೆಲಸವನ್ನು ಮೊದಲು ಮಾಡಬೇಕು. ಅದಕ್ಕೆ ಬಾಧಕವಾದುದೆಲ್ಲವನ್ನು ನಿರಾಕರಿಸಬೇಕು ಅಥವಾ ತಡೆಹಿಡಿಯಬೇಕು.

ಭಾಷಾನ್ವಯ ಪ್ರಾಂತರಚನೆಯಿಂದ ಭಾಷಾಭಿಮಾನ ಪ್ರೇರಿತವಾದ ಉಪರಾಷ್ಟ್ರೀಯ ಅಭಿಮಾನ ಬೆಳೆದು ರಾಷ್ಟ್ರಾಭಿಮಾನ ಕುಂದಿ ಅದು ನಷ್ಟವಾಗಿ ಹೋಗುವದರಿಂದ ಭಾರತದೇಶ ಛಿನ್ನವಿಚ್ಛಿನ್ನವಾಗುವ ಗಂಡಾಂತರವುಂಟು. ಭಾಷಾನ್ವಯ ಪ್ರಾಂತರಚನೆಯಿಂದ ಆಯಾ ಭಾಷೆಯ ಗುಂಪುಗಳು ಬಿಡಿಯಾಗಿ ಬಲಗೊಳ್ಳುವದರಿಂದ ರಾಷ್ಟ್ರೀಯತೆಗೆ ಪೋಷಕವಾಗುವದೆಂಬ ವಾದದಲ್ಲಿ ಹುರುಳಿಲ್ಲ.

ಉಪರಾಷ್ಟ್ರೀಯತೆ (ಅಥವಾ ಪ್ರಾಂತಾಭಿಮಾನ) ಮತ್ತು ರಾಷ್ಟ್ರೀಯತೆ (ದೇಶಾಭಿಮಾನ) ಇವೆರಡರಲ್ಲಿ ಒಂದನ್ನು ನುಂಗಿ ಇನ್ನೊಂದು ಬೆಳೆಯಬೇಕು. ಒಗ್ಗಟ್ಟಿನಿಂದ ಅವು ಬಾಳಲಾರವು.

ಕೇಂದ್ರದ ಬಲ

ಹೊಸ ಘಟನೆಯಲ್ಲಿ ಪ್ರಾಂತದ ಪ್ರದೇಶ, ಅಸ್ತಿತ್ವ, ಮೊದಲಾದೆಲ್ಲ ಅಧಿಕಾರಿಗಳೂ ಕೇಂದ್ರದ ಅಧೀನವಾಗಿದ್ದು ಪ್ರಾಂತದ ಪಾತ್ರ ಕೇವಲ ಆಡಳಿತ ಘಟಕವೆಂದು ಮಾತ್ರ ಇದೆ. ಭಾಷೆ ಭಾಷೆಗಳ ತಿಕ್ಕಾಟದಿಂದ ಬರುವ ವಿಧ್ವಂಸಕ ವೃತ್ತಿಯನ್ನು ತಳೆಗಟ್ಟಲು ಬೇಕಾದ ಅಧಿಕಾರವನ್ನು ಕೇಂದ್ರವೇ ಇಟ್ಟುಕೊಳ್ಳಬೇಕಲ್ಲದೆ ಇಡಿ ರಾಷ್ಟ್ರದಲ್ಲಿ ಒಂದೇ ಭಾಷೆಯನ್ನು ಪ್ರಚಾರದಲ್ಲಿ ತರಬೇಕೆಂಬ ವಾದಕ್ಕೆ ಸಮಿತಿಯ ಸಮ್ಮತಿಯುಂಟು.

ಆರ್ಥಿಕ ಆತಂಕ

ಸಂರಕ್ಷಣೆ, ನಿರಾಶ್ರಿತರ ಪುನರ್ನಿವಸನ, ಅತಿಪ್ರಸರಣ, ಉತ್ಪಾದನೆಯ ಹೆಚ್ಚಳ, ಆಹಾರ ಸಮಸ್ಯೆ ಮೊದಲಾದ ಅತ್ಯವಸರದ ಪ್ರಶ್ನೆಗಳನ್ನು ಬಿಡಿಸಬೇಕಾಗಿರುವದರಿಂದ ಪ್ರಾಂತಗಳ ಪುನರ್‌ರಚನೆಗಿದು ಸೂಕ್ತ ಕಾಲವಲ್ಲ.

ಹೊಸದಾಗಿ ಆರು ಪ್ರಾಂತಗಳನ್ನು ರಚಿಸುವದರಿಂದ ವೆಚ್ಚ ಮಿತಿಮೀರಿ ತೆರಿಗೆದಾರನ ಮೇಲೆ ಹೊಸ ಭಾರಬೀಳುವದು. ಹೊಸ ರಾಜಧಾನಿಗಳನ್ನು ಕಟ್ಟಲು ಹಣದ ಹೊಳೆ ಹರಿಸಬೇಕಾಗುವದಲ್ಲದೆ, ಪ್ರಾಂತಗಳ ಆಡಳಿತ ಯಂತ್ರದ ಮೇಲೆ ಈಗಾಗಲೆ ಬಿದ್ದಿರುವ ಭಾರ ಹೆಚ್ಚಾಗಿ ಅದು ತೀರ ದುರ್ಬಲವಾಗುವದು.

ಭೌಗೋಲಿಕ ಆತಂಕ

ಹೊಸಪ್ರಾಂತಗಳ ಗಡಿ ನಿರ್ಣಯದಲ್ಲಿ ಹಲವು ತೊಡಕುಗಳುಂಟು. ಮಲಬಾರೊಂದನ್ನೇ ಕೇರಳವಾಗಿ ರಚಿಸಲು ಸಾಧ್ಯವಿಲ್ಲ. ಅದರೊಡನೆ ಕೊಚ್ಚಿ–ತಿರ್ವಾಂಕೂರು ಸಂಸ್ಥಾನಗಳೂ ಸೇರಬೇಕಾಗುವದು. ಕರ್ನಾಟಕದಲ್ಲಿ ಮೈಸೂರು ಸೇರುವದು ಎರಡರ ಹಿತಕ್ಕೂ ಅವಶ್ಯವುಂಟು.

ಜನಮತ

ಐತಿಹಾಸಿಕ ಕಾರಣಗಳಿಂದ ಬೇರೆ ಬೇರೆ ಆಡಳಿತದಲ್ಲಿ ಸೇರುವ ಒಂದೇ ಭಾಷೆಯ ಪ್ರದೇಶಗಳು ಈಗ ಒಂದಾಗಲು ಅಷ್ಟು ಆತುರವಿಲ್ಲ.

ಪ್ರಾಂತೀಕರಣದ ಕ್ಷೇತ್ರದಲ್ಲಿ ಹೊಸದಾಗಿ ಕಾಲಿಟ್ಟ ಮಹಾರಾಷ್ಟ್ರದಲ್ಲಿ ಸೇರುವ ವಿಷಯದಲ್ಲಿ ಮಧ್ಯಪ್ರಾಂತದ ಮರಾಠಿ ಜಿಲ್ಲೆಗಳು ಇನ್ನೂ ಗಟ್ಟಿ ಮನಸು ಮಾಡಿಲ್ಲ.

ಮದ್ರಾಸು ಮತ್ತು ಮುಂಬಯಿ ನಗರಗಳು ಬಹುಭಾಷಾ ಪ್ರದೇಶಗಳಾಗಿರುವದರಿಂದ ಅವು ಯಾವ ಪ್ರಾಂತದಲ್ಲೂ ಸೇರಲಾರವು. ಅಖಿಲ ಹಿಂದುಸ್ತಾನದ ದೃಷ್ಟಿಯಿಂದ ಅವನ್ನು ಬೇರೆಯೆ ಇಡಬೇಕಾಗುವದು.

ಅಲ್ಪಸಂಖ್ಯರ ಸಮಸ್ಯೆ

ಹೊಸ ಪ್ರಾಂತಗಳನ್ನು ರಚಿಸಿದರೆ ಮುಂಬಯಿ ಮದ್ರಾಸು ನಗರಗಳ ಬಗ್ಗೆ ಪರಸ್ಪರ ಮನಃಕಷಾಯವುತ್ಪನ್ನವಾಗುವದು.

ಗಡಿನಿರ್ಣಯದ ಪ್ರಶ್ನೆ ಬಂದಾಗ ಗಡಿಗಳಲ್ಲಿರುವ ಉಭಯ ಭಾಷಾಪ್ರದೇಶಗಳ ಸ್ವಾಮಿತ್ವದ ಬಗ್ಗೆ ತಂಟೆಯೆದ್ದು ವಿಷಮ ವಾತಾವರಣವುಂಟಾಗುವದು.

ಪ್ರತಿಯೊಂದು ಪ್ರಾಂತದಲ್ಲೂ ಅನಿವಾರ್ಯವಾಗಿ ಉಳಿಯುವ ಭಾಷಾತ್ಮಕ ಅಲ್ಪಸಂಖ್ಯರ ಮೇಲೆ ಬಹುಸಂಖ್ಯರ ಅಸಹನೆಯಿಂದ ದಬ್ಬಾಳಿಕೆ ನಡೆಯಬಹುದು ಹೊಸ ಪ್ರಾಂತಗಳು ಪೋಲೀಸ ಕೆಲಸ ಹೊರತು ಮತ್ತಾವುದನ್ನೂ ಸಾಧಿಸಲು ಸಮರ್ಥವಾಗವು.

ಪುನರ್–ರಚನೆ

ಆದುದರಿಂದ ಭಾಷಾನ್ವಯ ಪ್ರಾಂತರಚನೆ ಈಗ ಅಪ್ರಸ್ತುತ. ಈ ಬೇಡಿಕೆಗೆ ಮನ್ನಣೆಕೊಟ್ಟರೆ ಇನ್ನೂ ಇಂಥ ಬೇಡಿಕೆಗಳು ಬರಬಹುದು. ವಸ್ತುತಃ ಅಂಥವು ಈಗಲೆ ಬರತೊಡಗಿವೆ.

ಮುಂದೆ ಸಂಸ್ಥಾನಗಳ ಸಮಾವೇಶ ಪೂರ್ತಿಯಾಗಿ ಹಿಂದುಸ್ತಾನ ಬಲಿಷ್ಠವಾದ ಬಳಿಕ ಈಗಿನ ಕೆಲ ಪ್ರಾಂತಗಳನ್ನು ಪುನರ್‌ರಚಿಸತಕ್ಕದ್ದು. ಆದರೆ ಅದರಲ್ಲಿ ಭಾಷಾನ್ವಯ ದೃಷ್ಟಿ ಇರತಕ್ಕದ್ದಲ್ಲ.

ನಿಜವಾದ ದೂರು

ಆದರೆ ಕರ್ನಾಟಕ, ಕೇರಳಗಳನ್ನು ದೂರವಾಗಿರುವ ಮುಂಬಯಿ, ಮದ್ರಾಸಗಳಲ್ಲಿ ನಡೆಯುವ ಆಡಳಿತಗಳು ದುರ್ಲಕ್ಷಿಸಿವೆಯೆಂಬ ಮಾತನ್ನು ಸಮಿತಿ ಒಪ್ಪಿದೆ. ಅಲ್ಲದೆ ಮದ್ರಾಸಿನಲ್ಲಿ ಆಂಧ್ರ–ತಮಿಳ ತಿಕ್ಕಾಟವೂ ಪ್ರಬಲವಾಗಿದೆ. ಆದುದರಿಂದ ಈ ದೂರುಗಳನ್ನು ನಿವಾರಿಸಲು ಕೇಂದ್ರ ಕೇಂದ್ರ ಸರಕಾರ ಕೂಡಲೆ ಉಪಾಯಗಳನ್ನು ಯೋಜಿಸಬೇಕೆಂದು ಅದು ಸೂಚಿಸಿದೆ.

ಅ. ಭಾ. ಕ್ಯಾಂಗ್ರೆಸ ಕಾರ್ಯಸಮಿತಿಯ ಸಭೆ

ಅ. ಭಾ. ಕಾಂಗ್ರೆಸ ಕಾರ್ಯ ಸಮಿತಿಯ ಸಭೆಯು ದಿಲ್ಲಿಯಲ್ಲಿ ಸೇರಿ ಜಯಪುರದಲ್ಲಿ ಸೇರಲಿರುವ ಅ ಭಾ. ಕಾಂಗ್ರೆಸ ಸಮಿತಿಯ ವಿಷಯ ನಿಯಾಮಕ ಸಭೆಯಲ್ಲಿ ಮಂಡಿಸಲು ಎಂಟು ಮಹತ್ವದ ಗೊತ್ತುವಳಿಗಳನ್ನು ಸ್ವೀಕರಿಸಿತು. ಹಿಂದುಸ್ತಾನದಲ್ಲಿಯ ವಿದೇಶೀಯ ವಸಾಹತುಗಳು; ಇಂಡೋನೇಶಿಯಾ ಮತ್ತು ಹಿಂದೀ ಸಂಸ್ಥಾನಗಳು ಇವೇ ಮೊದಲಾದ ವಿಷಯಗಳ ಬಗ್ಗೆ ಕೂಡ ಗೊತ್ತುವಳಿಗಳು ಸ್ವೀಕೃತವಾದವು.

ಕಾಂಗ್ರೆಸ್ಸಿನ ಧ್ಯೇಯ

ಭಾರತದ ಜನತೆ ಮತ್ತು ಅಖಂಡ ಮಾನವ ಜನಾಂಗದ ಹಿತಕ್ಕಾಗಿ ಮಹಾತ್ಮಾ ಗಾಂಧಿಯವರ ಉಪದೇಶದಂತೆ ನಡೆದುಕೊಳ್ಳುವ ಪ್ರತಿಜ್ಞೆ ಮಾಡಿ ಕಾಂಗ್ರೆಸು ಮ ಗಾಂಧಿಯವರಿಗೆ ಗೌರವ ಅರ್ಪಿಸುತ್ತದೆ. ಜನತಾಸೇವೆಯೇ ಕ್ಯಾಂಗ್ರೆಸ್ಸಿನಧ್ಯೇಯವಿದ್ದು ಕೇವಲ ಅಧಿಕಾರಲಾಲಸೆಗೆ ಬಲಿಬಿದ್ದವರು ದೇಶದ್ರೋಹಿಗಳೆಂದು ಪರಿಗಣಿಸಲಾಗುವದು. ಎಂತಹ ದುರ್ಧರ ಪ್ರಸಂಗದಲ್ಲಿಯೂ ನೀತಿಯನ್ನು ಬಿಡಲಾಗದೆಂದು ಮಹಾತ್ಮರ ಉಪದೇಶವನ್ನು ಎಲ್ಲರೂ ನೆನಪಿಟ್ಟು ನಡೆಯಬೇಕು. ಇಂದಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ತೊಡಕುಗಳನ್ನು ಕಾಂಗ್ರೆಸಿಗರು ನಿರ್ಧಾರದಿಂದಲೂ ಎದೆಗಾರಿಕೆಯಿಂದಲೂ ಎದುರಿಸಬೇಕು. ಅಂದರೆ ಮಾತ್ರ ಕಾಂಗ್ರೆಸ್ಸಿನ ಧ್ಯೇಯ ಸಫಲವಾಯಿತೆಂದು ಈ ಕಾಂಗ್ರೆಸ್ಸು ಸಾರುತ್ತದೆ.

ಭಾರತದ ವಿದೇಶ ನೀತಿ

ಸ್ವಾತಂತ್ರ್ಯಾನಂತರ ಅಂತಾರಾಷ್ಟ್ರೀಯ ರಂಗದಲ್ಲಿ ಹಿಂದುಸ್ತಾನದ ಹೊಣೆಗಾರಿಕೆಯು ಹೆಚ್ಚಿದೆ. ಇಷ್ಟು ದಿನಗಳ ಕಾಂಗ್ರೆಸ ತತ್ವಗಳೇ ಭಾರತದ ವಿದೇಶ ನೀತಿಯ ಅಡಿಗಲ್ಲು. ವಿಶ್ವಶಾಂತಿ, ರಾಷ್ಟ್ರ ಸ್ವಾತಂತ್ರ್ಯ, ವರ್ಣಭೇದದ ಉದ್ಘಾಟನೆ, ಸಾಮ್ರಾಜ್ಯವಾದ, ವಸಾಹತು ವಾದಗಳ ನಿರ್ಮೂಲನ, ಇವೇ ಕಾಂಗ್ರೆಸಿನ ಧ್ಯೇಯಗಳು. ಸಂಯುಕ್ತ ರಾಷ್ಟ್ರ ಸಂಘದ ತಾಮ್ರಪಟದಲ್ಲಿಯ ತತ್ವಗಳನ್ನು ಕಾಂಗ್ರೆಸು ಸಂಪೂರ್ಣ ಅನುಮೋದಿಸುತ್ತದೆ.

ಜಗತ್ತನ್ನು ಒಡೆದುಪಂಚಿ ಹಾಕಲು ಕಾರಣವಾಗುವ ಸೈನಿಕ ಹಾಗು ಇತರ ಒಪ್ಪಂದಗಳನ್ನು ಮಾಡಿಕೊಳ್ಳದೆ ತನ್ನ ಆರ್ಥಿಕ ಅಭಿವೃದ್ಧಿಯ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹಿಂದುಸ್ತಾನವು ಸಂಯುಕ್ತ ರಾಷ್ಟ್ರಸಂಘದ ಸದಸ್ಯರಾಷ್ಟ್ರವಾಗಬಲ್ಲದು. ತನ್ನ ಸ್ವಾತಂತ್ರ್ಯಕ್ಕೆ ಬಾಧೆ ಬರದ ರೀತಿಯಲ್ಲಿ ಇತರ ರಾಷ್ಟ್ರಗಳೊಡನೆ ಸಂಬಂಧವಿಟ್ಟುಕೊಳ್ಳಬೇಕೆಂದು ಹಿಂದುಸ್ತಾನವು ಬಯಸುತ್ತದೆ.

ಕೂಲಿಕಾರರ ಹಿತ

ಕೂಲಿಕಾರರ ಸಂಕಷ್ಟಗಳನ್ನು ಕಾಂಗ್ರೆಸು ಸಹಾನುಭೂತಿಯಿಂದ ಪರಿಶೀಲಿಸುತ್ತಿದೆ. ಕೂಲಿಕಾರರಾದರೂ ದೇಶದ ಸೂಕ್ಷ್ಮ ಪರಿಸ್ಥಿತಿಯನ್ನು ಗಮನಿಸಿ ಸ್ವಾರ್ಥಸಾಧಕರ ಬೋಧನೆಗೆ ಒಳಗಾಗಿ ಸಂಪು ಮೊದಲಾದ್ದು ಹೂಡಕೂಡದು. ಕೂಲಿಕಾರರ ಹಿತಕ್ಕಾಗಿ ಹೆಚ್ಚು ಕಾನೂನುಗಳಾಗಬೇಕು, ಉತ್ಪಾದನೆಯನ್ನು ಹೆಚ್ಚಿಸಲು ಕೂಲಿಕಾರರಿಗೆ ಸಾಕಷ್ಟು ಪುರಸ್ಕಾರ ಕೊಡಬೇಕು. ಈ ಬಗ್ಗೆ ಅ. ಭಾ. ಕಾಂಗ್ರೆಸ ಸಮಿತಿಯ ಆರ್ಥಿಕ ಮಂಡಲವು ಮಾಡಿದ, ಕೂಲಿಯ ದರದ ನಿರ್ಧಾರ ಮತ್ತು ಲಾಭದಲ್ಲಿ ಪಾಲು ಈ ಸೂಚನೆಗಳನ್ನು ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಬೇಗ ಜಾರಿಗೆ ತರಬೇಕೆಂದು ಈ ಕಾಂಗ್ರೆಸು ಸೂಚಿಸುತ್ತದೆ.

ಜಾತೀಯತೆಯ ನಿರ್ಮೂಲನೆ

ಜಾತೀಯತೆಗೆ ಇಂಬು ಕೊಟ್ಟ ತಪ್ಪಿಗಾಗಿ ದೇಶದ ವಿಚ್ಛೇದನೆಯಾಯಿತು, ಮಹಾತ್ಮರ ಕೊಲೆಯೂ ಆಯಿತು. ಸಹಿಷ್ಣುತೆಯೇ ಹಿಂದೀಯರ ಜೀವನದ ತಳಹದಿ. ಇದಕ್ಕೆ ಇತಿಹಾಸವೇ ಸಾಕ್ಷಿ. ಜಾತೀಯತೆಯನ್ನು ಒಂದು ಅಸ್ತ್ರವಾಗಿಟ್ಟುಕೊಂಡು ಕೆಲವು ಸ್ವಾರ್ಥಸಾಧಕರು ಕೋಲಾಹಲವೆಬ್ಬಿಸುತ್ತಿದ್ದಾರೆ ಆದರೆ ಹಿಂದುಸ್ತಾನವನ್ನು ಸರ್ವಧರ್ಮೀಯರಿಗೂ ಸಮಾನ ಸೌಕರ್ಯವಿರುವ ಜಾತ್ಯತೀತ ರಾಷ್ಟ್ರವನ್ನಾಗಿ ಮಾಡಬೇಕೆಂಬುದೇ ಕಾಂಗ್ರೆಸ್ಸಿನ ಧ್ಯೇಯವಾಗಿದೆ.

ಪರಕೀಯರ ವಸಾಹತುಗಳ ವಿಲಯನ

ಈ ವರೆಗೆ ಹಿಂದುಸ್ತಾನವೇ ದಾಸ್ಯದಲ್ಲಿದ್ದುದರಿಂದ ಪರಕೀಯ ವಸಾಹತುಗಳು ಹಿಂದುಸ್ತಾನದಲ್ಲಿ ಉಳಿದುಹೋದವು. ಈಗ ಈ ವಸಾಹತುಗಳು ಹಿಂದುಸ್ತಾನದಲ್ಲಿ ಉಳಿವುದು ನಮ್ಮ ದೇಶದ ಐಕ್ಯಕ್ಕೂ ಸುರಕ್ಷಿತತೆಗೂ ಪ್ರತಿಕೂಲವೇ ಸರಿ. ಆದ್ದರಿಂದ ಈ ವಸಾಹತುಗಳು ಹಿಂದುಸ್ತಾನದಲ್ಲಿ ಸೇರಿ ಹೋದ ಹೊರತು ಗತ್ಯಂತರವಿಲ್ಲ. ಇದನ್ನು ಆಯಾ ಸರಕಾರಗಳು ಪರಿಶೀಲಿಸಬೇಕು. ದೀರ್ಘಕಾಲದ ವಿದೇಶೀಯರ ಪ್ರಭಾವ ಮೂಲಕವಾಗಿ ಈ ಪ್ರದೇಶಗಳ ಆಡಳಿತೆ, ನ್ಯಾಯ ಪದ್ಧತಿ, ಸಂಸ್ಕೃತಿ, ಶಿಕ್ಷಣ ಇವುಗಳು ನಮ್ಮಲ್ಲಿಗಿಂತ ಭಿನ್ನವಾಗಿವೆ. ಇವುಗಳ ಮಾರ್ಪಾಡಿಗೆ ಕಾಲಾವಧಿ ಬೇಕು. ಅವಶ್ಯ ಕಂಡರೆ ಆಯಾ ವಸಾಹತುಗಳ ಸಂಸ್ಕೃತಿಯ ಅಭಿವೃದ್ಧಿಗೆ ಹಿಂದುಸ್ತಾನವು ಅವಕಾಶ ಕೊಡುವದು.

ಆರ್ಥಿಕ ಕಾರ್ಯಕ್ರಮ

ಆರ್ಥಿಕ ಕಾರ್ಯಕ್ರಮದ ಗೊತ್ತುವಳಿಯಲ್ಲಿ ಅ. ಭಾ. ಕಾಂ. ಸಮಿತಿಯ ಆರ್ಥಿಕ ಕಾರ್ಯಕ್ರಮ ಮಂಡಲದ ಸಿಫಾರಸುಗಳನ್ನೇ ಎತ್ತಿ ಹಿಡಿಯಲಾಗಿದೆ. ಈ ಗೊತ್ತುವಳಿಯ ಮುಖ್ಯಾಂಶ ಹೀಗಿವೆ:- (೧) ರಾಷ್ಟ್ರದ ಭದ್ರತೆಗೂ ಕಾರ್ಯಕ್ಷಮತೆಗೂ ಆಡಳಿತೆಗೂ ಅವಶ್ಯವಿದ್ದಷ್ಟನ್ನು ಮಾತ್ರ ವೆಚ್ಚಮಾಡಿ ಸರಕಾರವು ಹೆಚ್ಚಿನ ವೆಚ್ಚವನ್ನು ತಗ್ಗಿಸಬೇಕು. (೨) ಗ್ರಾಮೋದ್ಯೋಗ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಲಕ್ಷ್ಯಕೊಡಬೇಕು. (೩) ಹಿಂದುಸ್ತಾನ ಸರಕಾರವು ವಹಿಸಿದ ಜವಳಿ ಧೋರಣೆಗೆ ಬೆಂಬಲ ಕೊಡಬೇಕು. (೪) ಉತ್ಪತ್ತಿ ಹೆಚ್ಚಿಸಲು ಸಕಲರೂ ಮುನಮುಟ್ಟಿ ಪ್ರಯತ್ನಿಸಬೇಕು. (೫) ಕಾರಖಾನೆಯ ಒಡೆಯರು ಹೆಚ್ಚು ಲಾಭ ಹೊಡೆಯುವ ಪ್ರವೃತ್ತಿಯನ್ನು ತ್ಯಜಿಸಬೇಕು. ೬) ಔದ್ಯೋಗಿಕ ವ್ಯಾಜ್ಯಗಳನ್ನು ತೀರ್ಮಾನಿಸಲು ಔದ್ಯೋಗಿಕ ನ್ಯಾಯಾಲಯ ಸ್ಥಾಪಿಸಲು ಕಾನೂನು ಮಾಡಬೇಕು. (೭) ರೈತರಿಂದ ಕೊಳ್ಳುವ ಆಹಾರ ಧಾನ್ಯಗಳ ಬೆಲೆಯು ರೈತರಿಗೆ ಲಾಭದಾಯಕವಾಗಿರಬೇಕಲ್ಲದೆ ಕೊಳ್ಳುವವರಿಗೆ ಅನ್ಯಾಯವಾಗದಂತೆಯೂ ನಿರ್ಧರಿಸಬೇಕು.

ಇವಲ್ಲದೆ ನಿರಾಶ್ರಿತರ ಸಮಸ್ಯೆ, ದ. ಆಫ್ರಿಕೆಯಲ್ಲಿ ಹಿಂದೀಯರು ಇವುಗಳ ಬಗ್ಗೆಯೂ ಗೊತ್ತುವಳಿಗಳಾದವು.

ಭಾರತದ ರಾಷ್ಟ್ರಭಾಷೆಯ ಸಮಸ್ಯೆ

ಲೇಖಾಂಕ ೨

* ಹಿಂದೀ—ಹಿಂದುಸ್ತಾನಿ ವಾದ ವ್ಯರ್ಥ
* ಭಾಷಾಶುದ್ಧಿಯ ಅತಿರೇಕ ಬೇಡ
* ಎಲ್ಲ ಭಾಷೆಗಳಿಂದ ಶಬ್ದಗಳನ್ನು ಸ್ವೀಕರಿಸೋಣ
* ಪಾರಿಭಾಷಿಕ ಶಬ್ದಗಳಿಗೆ ಸಂಸ್ಕೃತವೇ ಶರಣು

ಲೇಖಕರು: ಡಾ. ರಾಜೇಂದ್ರಪ್ರಸಾದ

ಅಖಿಲ ಭಾರತಕ್ಕೆ ಒಂದು ಸಾಮಾನ್ಯ ಭಾಷೆಯ ಅವಶ್ಯಕತೆಯನ್ನೂ ಅದರ ಅರ್ಥವ್ಯಾಪ್ತಿಯನ್ನೂ ವಿವರಿಸಿದ ಬಳಿಕ ಆ ಸಾಮಾನ್ಯ ಭಾಷೆ ಯಾವುದಾಗಿರಬೇಕೆಂಬ ಪ್ರಶ್ನೆಯೇಳುತ್ತದೆ. ಇಂಗ್ಲೀಷು ಈಗಾಗಲೆ ಆ ಸ್ಥಾನವನ್ನು ಸಂಪಾದಿಸಿದೆಯೆಂದ ಬಳಿಕ ಅದನ್ನೇ ಉಳಿಸಿಕೊಂಡು ಹೋಗದೆ ಅದರ ಸ್ಥಾನದಲ್ಲಿ ಭಾರತೀಯ ಭಾಷೆಯೊಂದನ್ನು ತರಲು ಯಾವ ಕಾರಣವೂ ಇಲ್ಲವೆಂದು ಕೆಲವರ ಹೇಳಿಕೆಯುಂಟು. ಅಂಥ ಸಾಮಾನ್ಯ ಭಾಷೆಯಿಂದ ಅಪೇಕ್ಷಿಸಬಹುದಾದ ಉದ್ದಿಷ್ಟವನ್ನು ಇಂಗ್ಲೀಷು ಇಂದು ನೆರವೇರಿಸುತಿದೆಯೆಂಬುದು ಸತ್ಯ. ಸಮೃದ್ಧವೂ ಬೇಕಾದಂತೆ ಮಣಿಯಬಲ್ಲದ್ದೂ ಆದ ಶಬ್ದಕೋಶ ಅದಕ್ಕಿದೆಯಲ್ಲದೆ ಜಗತ್ತಿನ ಅನೇಕ ಭಾಗಗಳಲ್ಲಿ ಅದು ವ್ಯಾಪಿಸಿದೆ. ಅದು ದೊರಕಿಸಿಕೊಂಡಿರುವ ಅಂತರ್‌ರಾಷ್ಟ್ರೀಯ ಸ್ಥಾನವನ್ನೂ ಉಪಯೋಗವನ್ನೂ ಸಾಧಿಸಲು ಯಾವ ಭಾರತೀಯ ಭಾಷೆಗೂ ಕಷ್ಟವಾದೀತು.

ಇಂಗ್ಲೀಷು ರಾಷ್ಟ್ರಭಾಷೆಯಾಗದು

ಇಷ್ಟೆಲ್ಲ ಇದ್ದರೂ ಈ ದೇಶದಲ್ಲಿ ಇಂಗ್ಲೀಷು ಇನ್ನೂ ಬೇರೂರಿ ನಿಂತಿಲ್ಲವೆಂಬ ಮಾತು ಸತ್ಯ. ಅದಕ್ಕೆ ಸಿಗುತ್ತಿದ್ದ ಸರಕಾರಿ ಬೆಂಬಲ ಒಮ್ಮೆ ಇಲ್ಲದಂತಾದರೆ ಇಂದು ದೊರೆಯುತ್ತಿರುವ ವಿಶಾಲವಾದಮನ್ನಣೆಯೂ ಲುಪ್ತವಾಗುವದು. ಮೇಲಾಗಿ ಯಾವದೇ ವಿದೇಶಿ ಭಾಷೆ ಈ ದೇಶದ ಎಲ್ಲ ಭಾಗಗಳಿಗೂ ಪರಕೀಯವೇ ಆಗುವದರಿಂದ ಯಾವ ಪ್ರದೇಶವೂ ಅದನ್ನು ಸ್ವಂತ ಭಾಷೆಯಂತೆ ಮೈಗೂಡಿಸಿಕೊಳ್ಳಲಾರದು. ಆದುದರಿಂದ ಇಂಗ್ಲೀಷನ್ನು ಕೃತಕ ರಾಜಾಶ್ರಯದಿಂದ ಎತ್ತಿಹಿಡಿದು ಅದರ ಅಭ್ಯಸನವನ್ನು ಪ್ರೋತ್ಸಾಹಿಸಬೇಕಾಗುವದು. ಅದು ಇಲ್ಲಿ ಬೇರೂರಲಾರದು ಮತ್ತು ಈ ದೇಶದ ಯಾವ ಭಾಗದಲ್ಲೂ ಜನರ ಭಾಷೆಯಾಗಿ ಸರ್ವಥಾ ಸ್ಥಾಪಿತವಾಗದು. ಭಾರತದಲ್ಲಿನ ಯಾವುದೊಂದು ಭಾಷೆಯನ್ನಾರಿಸಿಕೊಂಡರೂ ಅದು ಒಂದಲ್ಲೊಂದು ಪ್ರದೇಶದ ಭಾಷೆಯಾಗಿದ್ದು ಕನಿಷ್ಠಪಕ್ಷ ಆ ಪ್ರದೇಶದಲ್ಲಾದರೂ ಸಾಮಾನ್ಯ ಮತ್ತು ಉಚ್ಚವರ್ಗಗಳೆಲ್ಲದರ ಸ್ವಂತ ಭಾಷೆಯಾಗುವದು. ಅದರೊಡನೆ ಇನ್ನೂ ಹಲವು ಪ್ರಾಂತಿಕ ಭಾಷೆಗಳಿಗೆ ನಿಕಟ ಸಂಬಂಧ ಇರುವುದರಿಂದ ಆ ಪ್ರಾಂತಗಳಲ್ಲಿಯೂ ಅದು ಸುಲಭಗ್ರಾಹ್ಯವಾಗುವದು. ಆದುದರಿಂದ ಯಾವುದಾದರೊಂದು ಭಾರತೀಯ ಭಾಷೆಯನ್ನೇ ನಾವು ಆಯ್ದುಕೊಳ್ಳಬೇಕು. ನಾವು ಇಂಗ್ಲೀಷ ಕಲಿಯುವದನ್ನು ಸರ್ವಥಾ ತ್ಯಜಿಸಿಬಿಡುವೆವೆಂದು ಇದರ ಅರ್ಥವಲ್ಲ. ಎಲ್ಲ ಅಂತರ್‌ರಾಷ್ಟ್ರೀಯ ಕಾರ್ಯಗಳಿಗೋಸ್ಕರ ಇಂಗ್ಲೀಷನ್ನು ಕಲಿಯಲೇಬೇಕಾಗುವದು. ಅದರಲ್ಲಿರುವ ವೈಜ್ಞಾನಿಕ, ದಾರ್ಶನಿಕ ಮತ್ತು ಸಾಹಿತ್ಯಕ ವಾಙ್ಮಯದ ಅಪಾರ ಸಂಗ್ರಹಕ್ಕೋಸ್ಕರವಾಗಿಯೂ ಅದರ ಅಭ್ಯಾಸ ಅಗತ್ಯ. ಆದರೂ ಅದರ ಅಭ್ಯಾಸ ಕೆಲವೇ ಜನರ ಮಟ್ಟಿಗೆ ಸೀಮಿತವಾಗಿರುವದು ಮತ್ತು ಆ ಅಭ್ಯಾಸದ ಗಾಢತೆಯು ಅದರಿಂದ ಪಡೆಯಬಹುದಾದ ವಿಶಿಷ್ಟ ಪ್ರಯೋಜನವನ್ನು ಅವಲಂಬಿಸುವದು. ಇಂದಾದರೂ ವೈಜ್ಞಾನಿಕ ಮತ್ತು ಸಂಶೋಧನಾತ್ಮಕ ವಾಙ್ಮಯದ ಅಭ್ಯಾಸಕ್ಕಾಗಿಯೂ ಇತರ ಉದ್ದೇಶಗಳಿಗಾಗಿಯೂ ಬೇರೆ ವಿದೇಶೀ ಭಾಷೆಗಳನ್ನು ಕಲಿಯುವ ಹಿಂದೀಯರೆಷ್ಟೋ ಜನರಿದ್ದಾರೆ.

ಹಿಂದೀ ಭಾಷೆಯ ಅಪರಿಪೂರ್ಣತೆ

ಭಾರತೀಯ ಭಾಷೆಗಳಲ್ಲಿ, ಸ್ವಾಭಾವಿಕವಾಗಿ, ದೇಶದಲ್ಲಿ ಎಲ್ಲಕ್ಕೂ ಹೆಚ್ಚು ಪ್ರಚುರವಾಗಿರುವ ಭಾಷೆಯೆ ನಮ್ಮ ಆಯ್ಕೆಗೆ ಅರ್ಹವೆನಿಸುವದು. ಹಿಂದಿ ಅಥವಾ ಹಿಂದುಸ್ತಾನಿಯೆ. ಯಾವ ಹೆಸರಿಂದಲೇ ಕರೆಯಿರಿ— ಆ ಭಾಷೆಯೆಂಬುದು ಸ್ವಯಂವೇದ್ಯವಾಗಿದೆ. ಅದರಲ್ಲಿ ಒಳ್ಳೆಯ ಸಾಹಿತ್ಯವಿದೆ; ವಿಕಾಸಕ್ಕೆ ಬೇಕಾದಷ್ಟು ಅವಕಾಶವಿದೆ; ಮೇಲಾಗಿ ಅದು ಉತ್ತರ ಹಿಂದುಸ್ತಾನದ ಎಲ್ಲ ಭಾಷೆಗಳ ಸಮೀಪ ಸಂಬಂಧಿಯಾಗಿರುವದರಿಂದ ಅವನ್ನು ಆಡುವವರೂ ಬಲ್ಲವರೂ ಇದನ್ನು ಸುಲಭವಾಗಿ ಕಲಿಯುವರು. ದಕ್ಷಿಣ ಭಾರತದ ಭಾಷೆಗಳಲ್ಲಿಯೂ— ಮುಖ್ಯವಾಗಿ ತೆಲುಗು, ಕನ್ನಡ, ಮತ್ತು ಮಲೆಯಾಳಿಯಲ್ಲಿ—ಸಂಸ್ಕೃತ, ಶಬ್ದಗಳು ವಿಪುಲವಾಗಿ ಸೇರಿಕೊಂಡಿವೆ ಆದರೆ ಹಿಂದೀ ಅಥವಾ ಹಿಂದುಸ್ತಾನಿಯಲ್ಲಿ ಎಲ್ಲ ಬಗೆಯ ಆಧುನಿಕ ವಿಚಾರಗಳನ್ನು—ವೈಜ್ಞಾನಿಕ; ಶಾಸನಿಕ, ರಾಜ್ಯಭಾರಾತ್ಮಕ, ರಾಜಕೀಯ, ಶಿಲ್ಪಾತ್ಮಕ, ಔದ್ಯಮಿಕ ಮೊದಲಾದ ವಿಷಯಗಳನ್ನು ಸರಿಯಾಗಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗಬೇಕಾದರೆ ಅದರ ಶಬ್ದಸಂಪತ್ತಿಯನ್ನು ಬಹಳವಾಗಿ ಬೆಳೆಸಬೇಕಾಗುವದೆಂದು ನಾವು ಮನಗಾಣುವದವಶ್ಯ. ಈ ಮಾತು ಉಳಿದ ಎಲ್ಲ ಭಾರತೀಯ ಭಾಷೆಗಳಿಗೂ ಅನ್ವಯಿಸುತ್ತದೆ. ಇದಲ್ಲದೆ ಭಾರತದ ರಾಷ್ಟ್ರಭಾಷೆಯನ್ನು ಅದರ ಪ್ರಸಾರವಿಲ್ಲದ ಪ್ರದೇಶಗಳ ಸಲುವಾಗಿ ಆದಷ್ಟು ಸರಳ ಸುಲಭವಾಗಿ ಮಾಡಬೇಕು. ಆದುದರಿಂದ ಭಾಷಾಶುದ್ಧಿಯ ಬಂಟರು ಪರಕೀಯವೆಂದು ಅಥವಾ ಸಂಶಯಾಸ್ಪದ ಮೂಲದಿಂದ ಉದ್ಭವಿಸಿದವುಗಳೆಂದು ಭಾವಿಸಬಹುದಾದ ಶಬ್ದಗಳನ್ನು ಹಿಂದಿ ಅಥವಾ ಹಿಂದುಸ್ತಾನಿಯಿಂದ ಬಹಿಷ್ಕರಿಸುವದು ಸಲ್ಲದು ಹೊಸ ಅಭಿಧಾನವೊಂದನ್ನು ನಿರ್ಮಿಸುವ ಪೂರ್ವದಲ್ಲಿ ಈಗಾಗಲೇ ಬಳಕೆಯಲ್ಲಿರುವ ಅಥವಾ ಸುಲಭವಾಗಿ ಅರಗಿಸಿಕೊಳ್ಳಬಹುದಾದ ಶಬ್ದವನ್ನು ಹುಡುಕಲು ಪ್ರಯತ್ನಿಸತಕ್ಕದ್ದು. ಪ್ರಾಂತಿಕ ಭಾಷೆಗಳೂ ವಿಕಾಸಗೊಂಡ ಭಾಷೆಗಳಾಗಿದ್ದು ಹಿಂದೀ ಅಥವಾ ಹಿಂದುಸ್ತಾನಿಗೆ ಎಷ್ಟೋ ಶಬ್ದಗಳನ್ನು ಎರವು ಕೊಡಬಲ್ಲವು; ಅವುಗಳಲ್ಲಿ ಒಂದು ಅಥವಾ ಹೆಚ್ಚು ಭಾಷೆಗಳಲ್ಲಿ ಬಳಕೆಗೆ ಬಂದಿರುವ ಶಬ್ದಗಳು ಹಿಂದಿ ಅಥವಾ ಹಿಂದುಸ್ತಾನಿಗೆ ಅಸ್ವೀಕಾರ್ಯವಾಗಲು ಕಾರಣವೇನೂ ಇಲ್ಲ. ಗ್ರಂಥಸ್ಥ ಭಾಷೆಯಲ್ಲಿ ಪ್ರಯುಕ್ತವಾಗಿರುವ ಅಭಿಧಾನಗಳು ಮಾತ್ರವಲ್ಲ, ಅಪಭ್ರಂಶ ಅಥವಾ ಗ್ರಾಮ್ಯ ಭಾಷೆಗಳು ಕೂಡ ಈ ವಿಷಯದಲ್ಲಿ ಬಹಳ ಉಪಯೋಗಿಯಾಗಬಹುದು. ಪಂಡಿತ ರಾಮನರೇಶತ್ರಿಪಾಠಿಯವರು ತೋರಿಸಿಕೊಟ್ಟಿರುವಂತೆ, ಹಳ್ಳಿಯ ಅಪಭ್ರಂಶ ಭಾಷೆಗಳು ಜೀವಂತ ಭಾಷೆಗಳಾಗಿದ್ದು, ಅವು ಹೊಸ ಹೊಸ ವಿಚಾರಗಳ ಅಭಿವ್ಯಕ್ತಿಗೆ ತಕ್ಕ ಹೊಸ ಅಭಿಧಾನಗಳನ್ನು ಮೇಲಿಂದ ಮೇಲೆ ಹುಟ್ಟಿಸುತ್ತಲೇ ಇರುತ್ತವೆ. ಹಿಂದೀ ಭಾಷೆಯನ್ನಾಡುವ ಪ್ರದೇಶಗಳ ಹಳ್ಳಿಮಾತಿನಲ್ಲಿ ನಾಮಪದಗಳನ್ನು ಕ್ರಿಯಾಪದಗಳಾಗಿ ಹೇಗೆ ಪರಿವರ್ತಿಸುವರೆಂಬುದನ್ನು ಈ ಸಂದರ್ಭದಲ್ಲಿ ಬೊಟ್ಟಿಟ್ಟು ತೋರಬಹುದು. ಇಂಥ ಸಂದರ್ಭಗಳಲ್ಲಿ ಗ್ರಂಥಸ್ಥ ಭಾಷೆಗಳಲ್ಲಿ ನಾಮಪದಕ್ಕೆ ಒಂದು ಕ್ರಿಯಾಪದವನ್ನು ಜೋಡಿಸುವ ರೂಢಿಯುಂಟು. ಹೀಗೆ "ಮಾಟಿ"(ಮಣ್ಣು) ಯಿಂದ "ಮಟಿಯಾನಾ" ಎಂಬ ಕ್ರಿಯಾಪದವನ್ನು ಅಚ್ಚುಹಾಕಿ ಮಣ್ಣುಹಚ್ಚಿ ಪಾತ್ರಗಳನ್ನು ತೊಳೆಯುವದು, ಯಾವುದಕ್ಕಾದರೂ ಮಣ್ಣು ಬಳಿಯುವದು, ಎಂಬರ್ಥದಲ್ಲಿ ಪ್ರಯೋಗಿಸಲಾಗುವದು. ಹಾಗೆಯೆ "ಹಾಥ" (ಕೈ) ಎಂಬುದನ್ನು "ಹಥಿಯಾನಾ" (ಕೈಯಲ್ಲಿ ತೆಗೆದುಕೊಳ್ಳುವದು) ಎಂಬುದು ಹುಟ್ಟಿದರೂ ಅದನ್ನು ಹೆಚ್ಚಾಗಿ ಅಪಹರಿಸುವದು ಎಂಬರ್ಥದಲ್ಲಿ ಬಳಸಲಾಗುವದು. "ಲಾತ"(ಕಾಲು) ಎಂಬುದರಿಂದ "ಲತಿಯಾನಾ" ಹುಟ್ಟಿದೆ. ಒದೆಯುವದೆಂಬುದು ಅದರ ಅರ್ಥ. "ಪೀಠ"(ಬೆನ್ನು) ಎಂಬುದರಿಂದ "ಪಿಠಿಯಾನಾ" ಹುಟ್ಟಿ ಹಿಂದಿನಿಂದ ತಳ್ಳುವದು ಎಂಬರ್ಥದಲ್ಲಿ ಪ್ರಯುಕ್ತವಾಗುತ್ತದೆ. ತನ್ನ ಶಬ್ದಭಂಡಾರದಲ್ಲಿ, ಯಾವದೇ ಮೂಲದವಿರಲಿ, ಹೊಸ ಶಬ್ದಗಳನ್ನು ಸೇರಿಸಿಕೊಳ್ಳುವದರಿಂದ ಯಾವ ಭಾಷೆಗೂ ಹಾನಿಯಾಗದೆ ಲಾಭವೇ ಆಗುವದು. ವಿಕಾಸಶೀಲವಾದ ಭಾಷೆಯಲ್ಲಿ ವರ್ಷವ[illegible] ಶಬ್ದಗಳು ಸೇರಿಯೋ[illegible] ಪ್ರಾಂತ ರಚನೆಯಿಂದ [illegible]ಂದುಸ್ತಾನದ ಬಲ ಕುಗ್ಗುವದೆಂದು ಸಮಿತಿ[illegible] ವರ್ಷಗಳಿಂದ ಹೊರಬಿದ್ದಿರುವ ವೆಬ್‌ಸ್ಟರ್ ಡಿಕ್ಷನರಿಯೋ ಮೊದಲಾದ ಇಂಗ್ಲೀಷ ಶಬ್ದಕೋಶಗಳ ಬೇರೆ ಬೇರೆ ಸಂಸ್ಕರಣಗಳನ್ನು ಪರಿಶೀಲಿಸಿದರೆ, ೫೦ ವರ್ಷಗಳ ಹಿಂದೆ ಹೊರಬಿದ್ದ ಮತ್ತು ಇಂದಿನ ಸಂಸ್ಕರಣಗಳಿಗಿರುವ ಅಪಾರ ಭೇದವನ್ನು ಕಾಣಬಹುದು. ಭಾಷೆಯಲ್ಲಿ ತಾದಾತ್ಮ್ಯವನ್ನು ಹೊಂದಿದ ಹೊಸ ಶಬ್ದಗಳಲ್ಲದೆ ಪ್ರತಿಯೊಂದು ಸಂಸ್ಕರಣದಲ್ಲಿ ಒಂದು ಪರಿಶಿಷ್ಟವಿದ್ದು, ಅದರಲ್ಲಿ ಬಳಕೆಗೆ ಬರುತ್ತಿರುವ ಆದರೂ ಇನ್ನೂ ಪೂರ್ತಿ ಆತ್ಮಸಾತ್ ಆಗದ ನೂರಾರು ಶಬ್ದಗಳನ್ನು ಕೊಡುವದುಂಟು. ಆದುದರಿಂದ ಹಿಂದಿ ಅಥವಾ ಹಿಂದುಸ್ತಾನಿಯು ಅರಗಿಸಿಕೊಳ್ಳಬಲ್ಲ ಶಬ್ದಗಳನ್ನು, ಅವುಗಳ ಮೂಲ ಎಲ್ಲೇ ಇರಲಿ, ತೆಗೆದುಕೊಳ್ಳುವದರಲ್ಲಿ ಬಹಳ ಉದಾರವಾದ ಧೋರಣವನ್ನು ವಹಿಸಬೇಕು- ಕಾಲಾಂತರದಲ್ಲಿ ಶಬ್ದಗಳು ವಿವಿಧ ಅರ್ಥಾರ್ಥಗಳನ್ನು ಪಡೆದು, ಭಾಷೆಯ ಅರ್ಥಶಕ್ತಿ ಹೆಚ್ಚುತ್ತ ಹೋಗುವದು ಆದುದರಿಂದ, ಭಾರತದ ರಾಷ್ಟ್ರಭಾಷೆ ಹೊಸದಾಗಿ, ಅಂದರೆ ಈಗಲೆ ಅದರಲ್ಲಿ ಬಳಕೆಯಲ್ಲಿರದ, ಅದರೆ ಇತರ ಭಾರತೀಯ ಅಥವಾ ವಿದೇಶೀಭಾಷೆಗಳಲ್ಲಿ ಪ್ರಯುಕ್ತವಾಗಿರುವ, ಶಬ್ದಗಳನ್ನು ಬ[illegible]ರಿಸದೆ ಅವಕ್ಕೆ ಮುಕ್ತದ್ವಾರದೀಯಬೇಕೆಂಬ ನಿಯಮ ಮಾಡಿಕೊಳ್ಳಬೇಕು.

ಆದಕಾರಣ, ರಾಷ್ಟ್ರಭಾಷೆ ಹಿಂದಿಯಾಗಬೇಕೋ ಹಿಂದುಸ್ತಾನಿಯೋ ಎಂಬ ವಾದವೇ ವ್ಯರ್ಥವೆಂದು ತೋರುತ್ತದೆ ಒಂದು ಭಾಷೆಗೆ ಅದರ ವೈಶಿಷ್ಟ್ಯವನ್ನು ಕೊಡುವದು ಅದರ ವ್ಯಾಕರಣ. ಚಿಲ್ಲರೆ ಭೇದಗಳನ್ನು ಬದಿಗಿಟ್ಟರೆ ಹಿಂದಿ ಮತ್ತು ಹಿಂದುಸ್ತಾನಿ ಇವೆರಡರ ವ್ಯಾಕರಣವೂ ಒಂದೇ. ಶಬ್ದಕೋಶದಲ್ಲಿ ಮಾತ್ರ ಭೇದವಿದೆ. ಈಗಿರುವವರೆಲ್ಲ ಇವನ್ನು ದೂರೀಕರಿಸದೆ ಇದ್ದ ಶಬ್ದಸಂಪತ್ತಿಯನ್ನೆಲ್ಲ ಪರಿಗ್ರಹಿಸಿದರೆ ಈ ಸಮಸ್ಯೆಯೂ ಬಗೆಹರಿದು ವಾದ ಕೊನೆಗೊಳ್ಳದಿರದು.

ಪಾರಿಭಾಷಿಕ ಶಬ್ದಗಳು

ಇಷ್ಟೆಲ್ಲ ಮಾಡಿದರೂ ಪಾರಿಭಾಷಿಕಾರ್ಥದ ಅನೇಕಾನೇಕ ಶಬ್ದಗಳನ್ನು ಹೊಸದಾಗಿ ನಿಷ್ಪನ್ನ ಮಾಡಿಕೊಳ್ಳುವ ಅವಶ್ಯಕತೆ ಉಳಿದೇ ಉಳಿಯುತ್ತದೆ. ಅವು ಯಾವ ಭಾರತೀಯ ಭಾಷೆಯಲ್ಲಿಯೂ ಲಭ್ಯವಾಗುವದಿಲ್ಲ. ವಿದೇಶೀ ಭಾಷೆಗಳಿಂದ ತೆಗೆದುಕೊಂಡರೆ ಅವು ಕಠಿನವೂ ಭಾರಸ್ವರೂಪವೂ ಆಗಬಹುದು. ಭಾರತೀಯ ಮೂಲದ ಶಬ್ದ ಹೊಸದಾಗಿದ್ದರೂ ಅದು ಭಾಷೆಯಲ್ಲಿ ಬೇಗನೆ ಬೆರೆತುಹೋಗುವದು. ಈ ನವ ನಿಷ್ಪತ್ತಿಯ ಉಗಮ ಯಾವುದಿರಬೇಕು? ನನಗೆ ತೋರುವ ಮಟ್ಟಿಗೆ, ಉರ್ದುವೊಂದನ್ನು ಬಿಟ್ಟರೆ, ಎಲ್ಲ ಭಾರತೀಯ ಭಾಷೆಗಳು ಹಿಂದಿನಿಂದಲೂ ಶಬ್ದಗಳನ್ನು ಎರವಲು ತಂದಿರುವ ಒಂದೇ ಒಂದು ಮೂಲವೆಂದರೆ ಸಂಸ್ಕೃತ. ಆದುದರಿಂದ,

[illegible]

೧) ಅಖಿಲ ಭಾರತೀಯ ವ್ಯವಹಾರಕ್ಕಾಗಿ ಒಂದು ಸಾಮಾನ್ಯ ಭಾಷೆ ಬೇಕು.

೨) ಆ ಸಾಮಾನ್ಯ ಭಾಷೆಯನ್ನು ಭಾರತದ [illegible] ಸ್ವಂತ ಭಾಷೆ [illegible] ಅಭ್ಯಸಿಸಬೇಕಾಗುವದು.

೩) ಆ ಭಾಷೆ ಇಂಗ್ಲೀಷಾಗಿರಬಾರದು, ಅದೊಂದು ಭಾರತೀಯ ಭಾಷೆಯೇ ಆಗಿರಬೇಕು.

೪) ಭಾರತೀಯ ಭಾಷೆಗಳಲ್ಲಿ ಹಿಂದಿ ಅಥವಾ ಹಿಂದುಸ್ತಾನಿಯು ಇದಕ್ಕೆ ಅತ್ಯಂತ ಅರ್ಹವಾದುದು.

೫) ಆದರೆ ಹಿಂದಿಯಾಗಲಿ ಹಿಂದುಸ್ತಾನಿಯಾಗಲಿ ಪರಕೀಯ ಮೂಲದಿಂದ ಹುಟ್ಟಿದ ಶಬ್ದಗಳನ್ನು ತಿರಸ್ಕರಿಸದೆ ಬೇರೆ ಭಾಷೆಗಳ ಶಬ್ದಗಳ ಪ್ರವೇಶಕ್ಕೆ ತೆರೆದಿಡಬೇಕು.

೬) ಈ ಹೊಸ ಶಬ್ದಗಳು [illegible] ವಿವಿಧ ಪ್ರಾಂತಿಕ ಭಾಷೆಗಳಿಂದಲೂ ಅಪಭ್ರಂಶಗಳಿಂದಲೂ ಬರತಕ್ಕದ್ದು. ಶುದ್ಧ ವಿದೇಶೀ ಮೂಲದ ಶಬ್ದಗಳನ್ನು ಕೂಡ ಪೂರ್ತಿ ಬಹಿಷ್ಕರಿಸಬಾರದು.

೭) ಮೇಲಿನ ಕಾರಣಗಳಿಂದ ಹಿಂದೀ-ಹಿಂದುಸ್ತಾನಿ ವಾದ ನಿರರ್ಥಕವಾಗಿದೆ.

೮) ಇತರ ಭಾಷೆಗಳ ಸಹಾಯದಿಂದ ಶಬ್ದಕೋಶವನ್ನು ಬೆಳೆಸಿದರೂ ಆಧುನಿಕ ವಿಚಾರಗಳನ್ನು ಪ್ರಕಟಪಡಿಸಲು ಮುಖ್ಯವಾಗಿ ಪಾರಿಭಾಷಿಕ ಸ್ವರೂಪದ ಶಬ್ದಗಳನ್ನು ರೂಪಿಸಿಕೊಳ್ಳಬೇಕಾಗುವದು. ಇಂಥ ಶಬ್ದಗಳನ್ನು ಸಂಸ್ಕೃತದಿಂದಲೇ ಆಯ್ದುಕೊಳ್ಳಬೇಕು.

(ಹರಿಜನದಿಂದ)

ದೀಪಾವಳಿ ಸ್ಪೆಷಲ್ ದರಗಳು

ಉತ್ತಮ ಕೈ ಗಡಿಯಾರ ರೂ. 16–8

ಸ್ವಿಸ್ ತಯಾರಿಕೆಯ, ಸರಿಯಾಗಿ ನಡೆಯುವ ಉತ್ಕೃಷ್ಟ ಅನೇಕ ಡಿಸೈನ್ ಗಡಿಯಾರಗಳು. ೧೦ ವರ್ಷ ಗ್ಯಾರಂಟಿ. 4 ಜುವೆಲ್ಸ್ ಕ್ರೋಮ್ ಕೇಸ್ ರೂ. 16–8 ಉತ್ತಮ ರೂ. 19.5 ಜುವೆಲ್ ರೂ. 23.15 ಜುವೆಲ್ಸ್ ಚಪ್ಪಟೆ ಆಕಾರ ರೂ 16 ರೋಲ್ಡ್ ಗೋಲ್ಡ್ ರೂ. 42. ರೆಕ್ಟಾಂಗ್ಯುಲರ್ 15 ಜುವೆಲ್ಸ್ ರೂ. 31. ಉತ್ತಮ ರೂ. 34 ಅತ್ಯುತ್ತಮ ರೂ 40.7 ಜುವೆಲ್ಸ್ ರೋಲ್ಡ್ ಗೋಲ್ಡ್ 12 ವರ್ಷ ಗ್ಯಾರಂಟಿ ರೂ. 45 ಉತ್ತಮ ರೂ. 51. 15 ಜುವೆಲ್ಸ್ ರೂ. 75 ಉತ್ತಮ ರೂ. 80 ಸಾದಾ ಟೈಂಪೀಸ್‌ಗಳು ರೂ. 17. ಉತ್ತಮ ರೂ. 20 ಪೋಸ್ಟೇಜು 0–14–0 ಒಂದೇ ಸಲ 2 ಗಡಿಯಾರ ತರಿಸಿದರೆ ಪೋಸ್ಟೇಜು ಇಲ್ಲ.

Correspondence in English

JUBILEE WATCH Co. (KR 1)
P. B. No. 12213, CALCUTTA. (1)

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಮದನ ಕಾಮಾನಂದ ಗುಟಿ

[ವೀರ್ಯಸ್ತಂಭನ ವಟಿ ಕಿಮ್ಮತ್ತು ರೂ. ೫—೦—೦]

ಕ್ಷೀಣರಿಗೂ ವಾರ್ಧಿಕ್ಯ ಹೊಂದಿದವರಿಗೂ ವಿಷಯಾನಂದದ ಪ್ರೇಮೀ ಹಾಗೂ ರಸಿಕ ಜನರಿಗೆ ಅತ್ಯವಶ್ಯಕ ಔಷಧ

ಶೀಘ್ರಸ್ಖಲನವನ್ನು ನಿರ್ಮೂಲ ಮಾಡಿ ಸ್ತಂಭನಶಕ್ತಿ ಹಾಗೂ ಕಾಮಶಕ್ತಿಯನ್ನು ಹೆಚ್ಚಿಸಿ ಸಂಭೋಗದಲ್ಲಿ ಯೌವನದ ಪರಮಾವಧಿಯನ್ನುಂಟು ಮಾಡುವದಕ್ಕಾಗಿ ಇದು ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಉಪಾಯಕಾರಿಯಾದ ಔಷಧವಾಗಿದೆ.

ಸಂಭೋಗಕ್ಕಿಂತಲೂ ಮುಂಚೆ [illegible] ಗುಳಿಗೆಯನ್ನು ಸೇವಿಸುವದರಿಂದ ಒಂದೇ ತಾಸಿನಲ್ಲಿ ಶೀಘ್ರ ವೀರ್ಯಸ್ಖಲನ [illegible]ತ್ರಗಳು, [illegible] ಹರ್ಷ, ಅನಂತರ ಪ್ರಚಂಡ ಉತ್ಸಾಹ ಉತ್ಕರ್ಷ ಮೊದಲಾದ ಗುಣಗಳು ಬರಲಿ[illegible] ಶಕ್ತಿ ಹೆಚ್ಚಾಗುವದರಿಂದ [illegible] ಮತ್ತು ಕೇವಲ ಉಂಟಾಗ[illegible] ಬೇಗನೆ ಚಂಡಾದಾರರಾಗಿರಿ—

ಚಂದಾವಿವರ:— ಸಾದಾ ಅಂಚೆಯಿಂದ ೫–೮–೦ ರಜಿಸ್ಟರ್ ,, ೬–೮–೦

ವ್ಯವಸ್ಥಾಪಕ ಮಿಂಚಿನಬಳ್ಳಿ, ಧಾರವಾಡ

ಮಣಿಯದ ರೋಗಗಳನ್ನು ಹಣಿಯುವ ಔಷಧಗಳು

ನಮ್ಮ ಸುತ್ತಲೂ ಅದೃಶ್ಯ ಶತ್ರುಗಳು ಪ್ರಾಣಹಾನಿಯ ಸಾಧನಗಳನ್ನು ಕಾಯುತ್ತ ಕುಳಿತಂತೆ ಅದೃಶ್ಯ ಮಿತ್ರರೂ ನಮ್ಮನ್ನು ಕಾಯಲು ಸನ್ನದ್ಧರಾಗಿ ನಿಂತಿದ್ದಾರೆ. ಆದರೆ ನಮ್ಮ ಮಿತ್ರರ ಗುರುತು ನಮಗೆ ಹತ್ತುವದು ತಡ. ಶತ್ರುಗಳು ಸಾಕಷ್ಟು ಅನಾಹುತವನ್ನೆಸಗಿದ ನಂತರವೇ ನಾವು ಮಿತ್ರರನ್ನು ಅರಿಯುವ ಪ್ರಯತ್ನ ಮಾಡುತ್ತೇವೆ. ಇಲ್ಲವಿದ್ದರೆ ರೋಗಾಣುಗಳು ಮನುಷ್ಯ ಜೀವನವನ್ನು ಸಹಸ್ರಾರು ಆಪತ್ತಿಗೀಡುಮಾಡುತ್ತಿರುವ ಮಾತನ್ನು ಶತಶತಮಾನಗಳಿಂದ ಅರಿತ ವೈದ್ಯಶಾಸ್ತ್ರಿಗಳಿಗೆ ಭೂಮಿಯಲ್ಲೆಲ್ಲ ಹಬ್ಬಿದ ಆರೋಗ್ಯಾಣುಗಳನ್ನು ಅವುಗಳ ವಿರುದ್ಧ ಪ್ರಯೋಗಿಸುವ ಕಲ್ಪನೆ ಹೊಳೆಯದಿದ್ದುದು ಸೋಜಿಗವಲ್ಲವೆ ?

ಆದರೆ ಸುದೈವದಿಂದ ಆ ಅಜ್ಞಾನದ ಯುಗ ಮುಗಿದು ಈಗ ಬಾಧಕ ಅಣುಗಳ ವಿರುದ್ಧ ಸಾಧಕ ಅಣುಗಳನ್ನು ಪ್ರಯೋಗಿಸುವ ವಿಷ್ಯ ಕಳೆದ ಕೆಲ ವರ್ಷಗಳಿಂದ ಬಹಳ ಮುಂದುವರಿದಿದೆ.

ಪೆನಿಸಿಲಿನ್--ಮೊಟ್ಟಮೊದಲ ಶೋಧ

"ಪೆನಿಸಿಲಿನ್" ಎಂಬುದು ಈಗ ಎಲ್ಲರಿಗೂ ಪರಿಚಿತವಾಗಿರುವ ರೋಗಾಣುನಾಶಕ ಔಷಧ. ಅದು ಕಟ್ಟಿಗೆಯು ಮತ್ತು ಇತರ ಪದಾರ್ಥಗಳ ಮೇಲೆ ಹುಟ್ಟುವ ಹಸಿರು "ಬೂಷ್ಟು"ನಂಥ ಅತಿಸಾಮಾನ್ಯ ಜೀವಾಣುವಿನ ವಸ್ತುವಿನಿಂದ ತೆಗೆಯಲ್ಪಡುತ್ತದೆ. ಸಾವಿರಾರು ವರ್ಷಗಳಿಂದ ನಮ್ಮ ಸುತ್ತಲೂ ಬೆಳೆಯುತ್ತಿರುವ ಈ ವಸ್ತುವಿನ ರೋಗನಾಶಕ ಗುಣವಾದರೂ ಬ್ರಿಟಿಶ ವಿಜ್ಞಾನಿ ಅಲೆಗ್ಸಾಂಡರ ಫ್ಲೆಮಿಂಗರಿಗೆ ೧೯೨೯ರಲ್ಲಿ ಗೋಚರವಾದದ್ದು ಕೇವಲ ಆಕಸ್ಮಿಕವಾಗಿ ನ್ಯಾಯದಿಂದ. ಅವರು ಪ್ರಯೋಗಾರ್ಥವಾಗಿ ಸಾಕಿದ್ದ ಸ್ಟೆಫಿಲೊಕೊಕಸ್ (Stapylococus) ಎಂಬ ರೋಗಾಣುಗಳನ್ನು ಈ "ಬೂಷ್ಟು" ನಾಶಗೊಳಿಸುತ್ತಿದ್ದುದು ತಿಳಿಯಿತು. ಅಕ್ಷರ ರೋಗವನ್ನು ಅದರ ಬಲದಿಂದ ನಾಶಮಾಡಬಹುದೆಂದು ಅವರಿಗೆ ಹೊಳೆಯಿತು. ಆದರೆ ಔಷಧರೂಪಕ್ಕೆ ತರುವದು ಅದನ್ನು ಯಾವ ಬಗೆಯಾಗಿ ರೋಗಿಗೆ ಕೊಡಬೇಕೆಂದು ಕಂಡುಹಿಡಿಯಲು ಅನೇಕ ವರ್ಷಗಳು ಹೋದವು. ೧೯೪೦ರಲ್ಲಿ ಕೂಡ ಅದರ ಉತ್ಪಾದನೆ ತೀರ ಅಲ್ಪಪ್ರಮಾಣದಲ್ಲಿತ್ತು. ಆದರೆ ಇಂದು ಜಗತ್ತಿನ ಲ್ಲೆಲ್ಲ--ಅಮೇರಿಕನ್ ಔಷಧ ಕಂಪನಿಗಳ ಪ್ರಯತ್ನದಿಂದ--ಬೇಕಾದಷ್ಟು ಪೆನಿಸಿಲಿನ್ ಪಟ್ಟಣ ಹಳ್ಳಿಗಳಲ್ಲಿಯೂ ದೊರೆಯುತ್ತಿದೆ. ವರ್ಷಕ್ಕೆ ೬೦ ಲಕ್ಷ ರೋಗಿಗಳನ್ನು ವಾಸಿಮಾಡಲು ಬೇಕಾದಷ್ಟು ಪೆನಿಸಿಲಿನ್ ಇಂದು ಅಮೇರಿಕೆಯಲ್ಲಿ ಸಿದ್ಧವಾಗುತಿದೆ.

ಈವರೆಗೆ ಮದ್ದೇ ಇಲ್ಲದ ಅನೇಕ ವ್ಯಾಧಿರೋಗಗಳಲ್ಲೊಂದಾದ ಫರಂಗಿಯೇ ಮೊದಲಾದ ೮೮ ರೋಗಗಳನ್ನು ಪೆನಿಸಿಲಿನ್ ಗುಣಪಡಿಸುತ್ತದೆ. ಮತ್ತೆ ೧೩ ರೋಗಗಳ ಮೇಲೆ ಅದು ಫಲಕಾರಿಯಾಗುತ್ತದೆ. ಅವರ್ನೂ ಕಡಿಮೆಗಿರುವ ಯಾವುದೇ ರೋಗಕ್ಕೆ ಪೆನಿಸಿಲಿನ್ ರಾಮಬಾಣವೆಂಬ ಭಾವನೆಯಿಂದ "ಡಾಕ್ಟರ್, ಪೆನಿಸಿಲಿನ್ ಚುಚ್ಚಬಾರದೆ?" ಎಂದು ಪೀಡಿಸುವ ರೋಗಿಗಳ ಮತ್ತು ಅವರ ಹಿತಚಿಂತಕರ ಭ್ರಮೆ ನಿವಾರಣಿಯಾದುದು. ಪೆನಿಸಿಲಿನ್ನಿಗೆ ಮಣಿಯದ ಕೆಲವು ಜಂತುಗಳ ೩೩ ರೋಗಗಳಾದರೂ ಡಾಕ್ಟರರ ಚಿಂತೆಯಾದಿವೆ. ಟಾಯಿಫಾಯ್ಡ, ಟಾಯಫಸ್ ಮೊದಲಾದವು ಈ ಗುಂಪಿನವು.

ಸ್ಟ್ರೆಪ್ಟೊಮೈಸಿನ್

ಈ ರೋಗಗಳಿಗೇನು ಗತಿಯೆಂದು ಡಾಕ್ಟರರು ತಲೆ ಕೆಡಿಸಿಕೊಂಡರು. ಆದರೆ "ಬೂಷ್ಟು" ಹಾಯಿಕೊಡೆ ಮೊದಲಾದ ಕೆಲ ಸೂಕ್ಷ್ಮ ಜೀವಾಣುಯು ವಸ್ತುಗಳಿಂದಲೇ ಹಲವು ರೋಗಗಳಿಗೆ ಪರಿಹಾರವೆಂಬ ಸೂಚನೆ ದೊರೆತ ಅವರು ಬಗೆಬಗೆಯ ಬೂಷ್ಟುಗಳನ್ನು ಪ್ರಯೋಗಿಸುತ್ತಾ ಹೋದರು. ಪೆನಿಸಿಲಿನ್ ನೊಟಾಟಮ್ ಎಂಬ ಬೂಷ್ಟಿನಿಂದ "ಪೆನಿಸಿಲಿನ್" ಸಿಕ್ಕಂತೆ "ಸ್ಟ್ರೆಪ್ಟೊಮೈಸಸ್" ಎಂಬ ಪದಾರ್ಥದಿಂದ ... ಅಲ್ಪಟ್ ... ಪೆನಿಸಿಲಿನ್ನಿಗೆ ಬಗ್ಗದ ಹಲವು ರೋಗಾಣುಗಳ ಕಡಿಗೆಶನ್ನು ಕಂಡು ಕೊಂಡನು. Rabbit fever ಎಂಬ ಶಿಗ ಬುಗಟ್ಟಲೆ ಬರುವ ಜ್ವರಕ್ಕೆ ಅವರಿಗೆ ಔಷಧ ಸಿಕ್ಕಿತ್ತು. ಆದರೆ "ಸ್ಟ್ರೆಪ್ಟೊಮೈಸಿನ್" ಔಷಧ ದಿಂದ ಕ್ಷಯರೋಗದಿಂದ ಬಳಲುವ ರೋಗಿಗಳಲ್ಲಿ ಅದು ನಾಶವಾಗುವದು. ಈ ಔಷಧದ ಗುಣಗಳ ಪರೀಕ್ಷೆಯಲ್ಲಿ ಡಾಕ್ಟರರು ಅದನ್ನು ಕ್ಷಯದ ಮೇಲೆ ಪ್ರಯೋಗಿಸಿದಾಗ ಸಾವಿನ ಪ್ರಮಾಣ ನೂರಕ್ಕೆ ೬೦ ರಿಂದ ಸುಮಾರು ೪ ಕ್ಕಿಳಿಯಿತು.

ಕ್ಷಯರೋಗದ ಮೇಲೂ ಸ್ಟ್ರೆಪ್ಟೊಮೈಸಿನ್ ಫಲಕಾರಿಯೆಂದು ತಿಳಿದುಬಂದಿದ್ದರೂ ಅಸಾಧ್ಯ ಪ್ರಕರಣಗಳಲ್ಲಿ ಶಸ್ತ್ರಕ್ರಿಯೆಯನ್ನು ಸಾಧ್ಯವಾಗಿ ಮಾಡುವದೊಂದಲ್ಲದೆ ಅದಕ್ಕಿಂತ ಹೆಚ್ಚಿನ ಗುಣ ಇನ್ನೂ ನಿಶ್ಚಯವಾಗಿ ತಿಳಿದುಬಂದಿಲ್ಲ. ಆದರೆ ಹೃದ್ರೋಗದಲ್ಲಿ ಬರುವ ಪರಿಹಾರ ಹೀನವಾದ ಮೂತ್ರರೋಗಗಳಿಗೂ ಚಿಕ್ಕ ಮಕ್ಕಳ ಅಶ್ವಪ್ಪ ಯಂದುಬಾಕ್ಕೂ ಅದು ತೀರ ಗುಣಕಾರಕವಾಗಿದೆ. ಈ ಔಷಧದ ಉತ್ಪಾದನೆಯು ಹೆಚ್ಚುತಿದೆಯಾದರೂ ಅದಿನ್ನೂ ಪ್ರಾಥಮಿಕಾವಸ್ಥೆಯಲ್ಲಿರುವುದರಿಂದ ದುರ್ಲಭವೂ ತುಟ್ಟಿಯೂ ಆಗಿದೆ.

೩ ಕೋಟಿ ವರ್ಷ ಹಿಂದಿನ ತಲೆಬುರುಡೆ: ಈ ಅತಿ ಪ್ರಾಚೀನ ತಲೆಕಪಾಲವನ್ನು ಶ್ರೀಮತಿ ಮೇರಿ ಲೀಕಿಯೆಂಬವರು ಆಫ್ರಿಕೆಯಲ್ಲಿ ಸಂಪಾದಿಸಿದರು ಇದನ್ನವರು ೬೬೦೦೦ ರೂಪಾಯಿಗೆ ವಿಮೆ ಇಳಿಸಿದ್ದಾರೆ.

ವಿಷಮಜ್ವರದ ಶತ್ರು--ಕ್ಲೋರೊಮೈಸೆಟಿನ್

ಆದರೆ ಇವೆರಡು ಔಷಧಗಳಿಗೂ ಜಗ್ಗದ ಹಲವು ರೋಗಗಳಿವೆ. ಅನೇಕ ವಿಧವಾದ ಟೈಫಸ್ಸ ಮತ್ತು ಟೈಫಾಯ್ಡ (ವಿಷಮ) ಜ್ವರಗಳಿಗೆ ಅವು ನಾಟುವುದಿಲ್ಲ. ಅಷ್ಟ ಗಮನಿಸಿದ ಡಾಕ್ಟರ ಸಂಶೋಧಕರಲ್ಲೊಬ್ಬರಾದ ಡಾ. ಪೆಯುನರು ಇನ್ನೊಂದು ಬಗೆಯ ಬುರುಸಿನಿಂದ ಸಿದ್ಧವಾದ "ಕ್ಲೋರೋಮೈಸೆಟಿನ್" ಎಂಬ ಔಷಧದಿಂದ ಮೃತ್ಯುಮುಖವಾಗಿದ್ದ ಟೈಫಸ್ ಪೀಡಿತರನ್ನು ಬದುಕಿಸಿದರು. ೧೨ಡೇ ತಾಸಿನಲ್ಲಿ ಜ್ವರ ಅರಿತು. ಮಲಯದಲ್ಲಿ ಡಾ. ವುಡ್‌ವರ್ಡರು ಇನ್ನೊಂದು ಬಗೆಯ ಟೈಫಸ್ ಜ್ವರದ ಮೇಲೆ ಈ ಔಷಧವನ್ನು ಪ್ರಯೋಗಿಸಿದಾಗ ೩೧ ತಾಸಿನಲ್ಲಿ ಗುಣ ಸಿಕ್ಕಿತು. ಟೈಫಸ್ ಜ್ವರ ಬಹಳ ಉಗ್ರಸ್ವರೂಪದ ಅಂಟುರೋಗವೆಂಬದನ್ನು ನೆನೆದರೆ ಈ ಔಷಧದ ಪ್ರಯೋಜನ ಗೊತ್ತಾಗುವದು.

ಆಮೇಲೆ ಟೈಫಾಯ್ಡ್‌ನ (ಕರುಳಿನ ವಿಷಮ ಜ್ವರ)ಸರತಿಯೂ ಬಂತು. ಮಲಯದ ಇಬ್ಬರು ರೋಗಿಗಳಿಗೆ ಜ್ವರ ಗುಣವಾಗಲು ೩೧ ತಾಸಿನ ಬದಲು ೭೨ ತಾಸು ಹಿಡಿದವು. ಹೀಗೇಕೆಂದು ಪರೀಕ್ಷಿಸಲು ಅವರಿಗೆ ಟೈಫಸ್ ಅಲ್ಲ, ಟೈಫಾಯ್ಡ ಬಂದಿತ್ತೆಂದು ತಿಳಿಯಿತು. ಕ್ಲೋರೊಮೈಸೆಟಿನ್ ಟೈಫಾಯ್ಡ್‌ನ ಮೇಲೂ ಫಲಕಾರಿಯಾಯಿತು. ಆ ಮೇಲೆ ಅದನ್ನು ಗುಳಿಗೆಗಳ ರೂಪದಲ್ಲಿ (ಚುಚ್ಚುವ ಬದಲು) ಕೊಡಲು ಅದೂ ನಾಟಿತು ತೀರ ವಿಷಮಾವಸ್ಥೆಯಲ್ಲಿದ್ದ ಒಂದು ಟೈಫಾಯ್ಡ ಪ್ರಕರಣವನ್ನು ಅನುಕ್ರಮವಾಗಿ ಕ್ಲೋರೋಮೈಸೆಟಿನ್, ಪೆನಿಸಿಲಿನ್ ಮತ್ತು ಸ್ಟ್ರೆಪ್ಟೊಮೈಸಿನ್ ಇವು ಮೂರನ್ನೂ ಪ್ರಯೋಗಿಸಿ ಪಾರುಮಾಡಲಾಯಿತು. ಟೈಫಾಯ್ಡ ಈ ವರೆಗೆ ತನ್ನ ಅವಧಿ ಬಂದಲ್ಲದೆ ಯಾವ ಔಷಧ ಕೊಟ್ಟರೂ ಬಿಡದ ಜ್ವರವಾಗಿತ್ತು.

ಅರುಣವರ್ಣದ ಅರೋಮೈಸಿನ್

ಈಗ ಇನ್ನೊಂದು ಕಂಪನಿಯವರು ಈ ಮಾಲೆಯಲ್ಲಿ ಅರೋಮೈಸಿನ್ ಎಂಬ ಸ್ವರ್ಣವರ್ಣದ ಔಷಧವನ್ನು ತಯಾರಿಸಿದ್ದಾರೆ. ಬಾಯಿಂದ ಕೊಡಬಹುದಾದ ಈ ಔಷಧ ಪ್ಲೇಗ, ಕ್ಯು ಜ್ವರವೇ ಮೊದಲಾದ ಹಲವು ಮದ್ದಿಲ್ಲದ ರೋಗಗಳನ್ನು ಗುಣಪಡಿಸಿದೆ.

ಇಷ್ಟಕ್ಕೂ ಜಗ್ಗದ ಹಲವು ರೋಗಾಣು ಜಾತಿಗಳು ಇನ್ನೂ ಇವೆ. ಆದರೆ ಕಾಲಾಂತರದಲ್ಲಿ ಅವು ಮಣಿದೇ ಮಣಿಯಬೇಕಾಗುವದು. ಆಗ ಈ ಭೂಮಿಯಿಂದ ರೋಗಾಣುಗಳಿಂದ ಹಬ್ಬುವ ರೋಗಗಳು ಸರ್ವಥಾ ಅದೃಶ್ಯವಾಗಿ ಹೋಗಬಹುದು.

ಅತಿ ಪ್ರಾಚೀನ ಅಂಚೆ ಮನೆ

ಮಧ್ಯ ಏಶಿಯದಲ್ಲಿ ಸುಮಾರು ಕ್ರಿಸ್ತಪೂರ್ವ ೧೯ನೆಯ ಶತಕದ ಹಿಂದೆ ಹಿಟೈಟ್ ಎಂಬ ಆರ್ಯಕುಲದ ಜನರು ರಾಜ್ಯಕಟ್ಟಿ ಆಳುತ್ತಿದ್ದರು. ಅಸ್ಸುರ ಒಂದು ಗುಂಪು ಮೊದಲು ಯುರೋಪಿನಲ್ಲಿ ನೆಲಸಲು ಒಗೆದು ಹೋದ ಕಾಲಕ, ಮಿಕ್ಕವರು ಮಧ್ಯ ಏಶಿಯದ (ಈಗ ಅನಟೋಲಿಯ ಎಂದು ಕರೆಯಲ್ಪಡುವ) ಕಾನೇಸ್ ನಗರದ ಪ್ರದೇಶಕ್ಕೆ ಬಂದು ನಿಂತರು. ಆಗ ಆರ್ಯ ನಾಗರಿಕತೆ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ತುರ್ಕಸ್ತಾನದ ಭೂಗರ್ಭ ಸಂಶೋಧಕರೀಗ ಆ ನಗರದ ಹಾಳು ನೆಲವನ್ನು ಅಗೆದು ಅದರಲ್ಲಿ ಆ ಕಾಲದ ಅಂಚೆಮನೆಯೊಂದಿರುವುದನ್ನು ಕಂಡು ಹಿಡಿದಿದ್ದಾರೆ.

ಕಾನೇಸಿನ ಅತ್ಯಂತ ಪ್ರಸಿದ್ಧ ವ್ಯಾಪಾರ ಕೇಂದ್ರವೆನಿಸಿದ್ದ ಒಂದು ಭಾಗದಲ್ಲಿ ನೂರಾರು ಮಣ್ಣಿನಪತ್ರಗಳು (Inscribed Clay Tablets) ಮುದ್ರೆಯೊತ್ತಿದ ಮಣ್ಣಿನ ಲಕ್ಕೋಟೆಗಳಲ್ಲಿ ತುಂಬಿರುವುದು ಕಂಡಿತು. ಟಪ್ಪಾಲು ತಂದು ಹಾಕಿದ ಮರುಗಳಿಗೆಯಲ್ಲಿ ಬಹುಶಃ ವಿನಾಶವೊಂದು ಅವಘಡ ಸಂಭವಿಸಿ ಅಟ್ಟದ ಮುರಿದುಬಿದ್ದಿರಬೇಕು. ಏಣಿಸಿದಲ್ಲಿ ಒಂದು ಸಾವಿರದಷ್ಟು ಅಂಥ ಲಕ್ಕೋಟೆಗಳು ಸಿಕ್ಕಿವೆ. ಇನ್ನೂ ಆ ಕಾಗದಗಳಲ್ಲಿಯ ಭಾಷೆ ಓದುವಷ್ಟು ಓದಲು ಬಂದಿಲ್ಲ. ಓದಲು ಸಾಧ್ಯವಾದ ಕೂಡಲೆ ಅದು ಕ್ರಿ. ಪೂ. ೩೦೦೦ ಮತ್ತು ೧೫೦೦ ವರ್ಷಗಳ ನಡುವೆ ಬೆಳೆಯುತ್ತಿದ್ದ ಹಿಟೈಟ್ ನಾಗರಿಕತೆಯ ಮೇಲೆ ಹೆಚ್ಚು ಬೆಳಕನ್ನು ಬೀರಬಲ್ಲುದಾಗಿದೆ. ಅಗೆದು ತೆಗೆದ ಇತರ ವಸ್ತುಗಳಲ್ಲಿ ಜೋಳಿಗೆ, ಹೂಜಿಗಳು ಮುಖ್ಯವಾದವು.

ಮೇಲಿನ ಸಂಶೋಧನೆ ಟಪ್ಪಾಲು ಸಂಚುವ ವ್ಯವಸ್ಥೆ ಎಷ್ಟು ಪ್ರಾಚೀನವಾದುದೆಂಬುದನ್ನು ತಿಳಿಸಬಹುದು. ಇದರಲ್ಲಿ ರಾಷ್ಟ್ರೀಕರಣದ ತತ್ವ ಅಡಗಿದೆ. ಈ ಉದ್ಯಮವನ್ನೊಂದು ಯಾರೂ ಖಾಸಗಿಯದನ್ನಾಗಿ ಮಾಡಿಕೊಂಡಿಲ್ಲ ಎಂಬುದರ ಅರಿವು ಎಷ್ಟು ಜನರಿಗೆ ಇದೆ? ಹೀಗೆ ಎಲ್ಲ ಉದ್ಯಮಗಳನ್ನೂ ಸರಕಾರ ನಡೆಸತೊಡಗಿದರೆ ಏನಾಗಬಹುದೆಂದು ಯಾರು ಊಹಿಸಬಲ್ಲರು?

*

ಬೀಜಸಂಸ್ಕಾರದಿಂದ ಬೆಳೆಯು ಹೆಚ್ಚಳ

ಗೊಬ್ಬರದ ಕೊರತೆ, ಭೂಮಿಯ ನಿಸ್ಸಾರತೆಯೇ ಮೊದಲಾದ ಕಾರಣಗಳಿಂದ ಆಹಾರೋತ್ಪಾದನೆಯು ಪ್ರಮಾಣ ಬಹಳ ಕಡಿಮೆಯಾಗಿರುವ ನಮ್ಮ ದೇಶಕ್ಕೆ, ಇಂಗ್ಲಂಡಿನಲ್ಲಿ ಈಗ ಪ್ರಯೋಗಾವಸ್ಥೆಯಲ್ಲಿರುವ ಬೀಜಸಂಸ್ಕಾರ ಪ್ರಕ್ರಿಯೆ ಯಶಸ್ವಿಯಾದರೆ, ತುಂಬ ಪ್ರಯೋಜನವಾಗಬಹುದು.

ಸಾರಹೀನ ಭೂಮಿಯಲ್ಲಿ ಕೂಡ ಉತ್ತಮ ಬೆಳೆಯನ್ನು ಬೆಳೆಯಬೇಕಾದರೆ ಭೂಮಿಗೆ ಸಂಸ್ಕಾರ ಕೊಡುವ ಬದಲು ಬೀಜಕ್ಕೇ ಸಂಸ್ಕಾರ ಕೊಟ್ಟರೆ ಸಾಕೆಂದು ಇಂಗ್ಲಂಡಿನ ಕೃಷಿ ಸಂಶೋಧನ ಸಂಘದವರು ಕಂಡುಹಿಡಿದಿದ್ದಾರೆ. ಪೌಷ್ಟಿಕ ದ್ರವಗಳಲ್ಲಿ ಬೀಜವನ್ನು ನೆನೆಹಾಕಿ ಆಮೇಲೆ ಅದನ್ನು ಬಿತ್ತಿದರೆ ಉತ್ತಮ ಫಲ ಬಂದಿತು.

ಇನ್ನೂ ವಿಸ್ತೃತ ಪ್ರಮಾಣದಲ್ಲಿ ಇದನ್ನು ಪರೀಕ್ಷಿಸಿ ನೋಡಿರದಿದ್ದರೂ ವ್ಯವಹಾರದಲ್ಲಿ ಬರುವ ತೊಡಕುಗಳನ್ನು ನಿವಾರಿಸುವದು ಅಷ್ಟು ಕಠಿಣ ಹೋಗಲಾರದೆಂದು ತೋರುತ್ತದೆ.

ಜನಮತ

ಕರಿಕೆಗೆ ರಸ್ತೆ ಬೇಕು

ಕೊಡಗು ದೇಶದ ಪಡು ಮೂಲೆಯಲ್ಲಿ ಬಾವಿಯಲ್ಲಿದ್ದ ಅವೆಯಂತೆ ನಮ್ಮ ಕರಿಕೆ ಗ್ರಾಮವು ದೊಡ್ಡ ಕಾಡುಪ್ರದೇಶದಿಂದ ತುಂಬಿದೆ. ಮೇಲಿನ ಗ್ರಾಮದಲ್ಲಿ ೨೦೦೦ ಜನರು ವಾಸಿಸುವರು, ಸರಕಾರಕ್ಕೆ ಹತ್ತು ಸಾವಿರ ರೂಪಾಯಿ ತೆರಿಗೆ ಸಂದಾಯ ಮಾಡುವರು ಆದರೆ ನಮ್ಮ ಗ್ರಾಮಕ್ಕೆ ರಸ್ತೆಯಿಲ್ಲ. ಭಾಗಮಂಡಲ ಗ್ರಾಮಕ್ಕೆ ಬರುವ ಭಾಗಮಂಡಲ ಗಾಡಿರಸ್ತೆ ನಮಗೆ ೧೮ ಮೈಲು ದೂರ ಕಾಡಿನೊಳಗೆ ಬರುವಾಗ ಕಾಲಿಗೆ ಅಂಟಿಕೊಂಡು ರಕ್ತ ಹೀರುವ ಜಿಗಣೆಗಳ ಕಾಟ ಹೇಳತೀರದು. ಈ ಕಾರಣದಿಂದ ಯಾವ ಅಧಿಕಾರಿಗಳೂ ನಮ್ಮ ಸ್ಥಳಕ್ಕೆ ಬರುವದು ಕಡಿಮೆ. ಬಿಸಿಲು ಕಾಲದಲ್ಲಿ ಕೆಲವು ಸಲ ಬಂದರೂ "ನಿಮ್ಮ ಸ್ಥಳವನ್ನು ಕನ್ನಡ ಜಿಲ್ಲೆಗೆ ಸೇರಿಸಿಬಿಡಿರಿ ಇದು ಕೊಡಗಿಗೆ ಲಾಯಕ್ ಅಲ್ಲ" ಎಂದು ಹೇಳಿಯೆ ಹೇಳುತ್ತಾರೆ. ಇಲ್ಲಿಗೆ ಟಪಾಲು ಮೂರುತಿಂಗಳಿಗೊಂದಾವರ್ತಿ/ ಬಂದರೆ ನಮ್ಮ ಮುಕ್ಕಳ ಶಿಕ್ಷಣಕ್ಕೂ ಇಲ್ಲಿ ಅವಸ್ಥೆವಿಲ್ಲ. ಕೇವಲ ೧೮ ರೂಪಾಯಿ ಗ್ರಾಂಟು ಬರುತ್ತದೆ. ಯಾವ ಶಿಕ್ಷಕರು ಬರುವರು? ಸರಕಾರವು ಕೇವಲ ರೈತರ ಕಂದಾಯಕ್ಕೆ ಹುಕ್ಕುದಾರರಲ್ಲದೆ ರೈತರ ಏಳಿಗೆಗೂ ಹೊಣೆಯಾಗಬೇಕು ಇಲ್ಲಿ ಪಾಠಶಾಲೆ, ರಸ್ತೆ, ಮತ್ತು ಹತ್ತಿರದ ಭಾಗಮಂಡಲದಲ್ಲಿ ಸಂತೆ ಆಗಬೇಕು ಇದು ರೈತರ ಮೊರೆ

೨೪ ೧೧ ೪೮ -- ಕರಿಕೆ ಗ್ರಾಮದ ಬಡರೈತ

ವ್ಯಾಪಾರ ಪ್ರಪಂಚ

ಮುಂಬಯಿ [illegible] ಪೇಟೆ

ತಾ. ೧೬

ಶೇರ ಪೇಟೆಯಲ್ಲಿ ಈ ವಾರ ಬೆಲೆಗ[illegible] ಇಳಿಮುಖವಾಗಿವೆ. ಕಳೆದ ವಾರದ ಪ[illegible] ಲಾಭಬಡಕ ಗುಂಪಿನ ಒತ್ತಡದಿಂದಾಗಿದ್ದು, ಮುಂದೆ ಗಿರಣಿ ಬಟ್ಟೆಯ ಬೆಲೆಗಳನ್ನು ಇಳಿಸಲಾಗುವದೆಂಬ ಮೊದಲಾದ ಸುದ್ದಿಗಳು ಬೆಲೆಗಳನ್ನು ತಗ್ಗಿಸಿದವು, ಇಂದಿನ ಕೊನೆಯ ದರಗಳು ಹೀಗಿದ್ದವು:

ಮುಂಬಯಿ ಡಾಯಿಂಗ್	೧೦೦೬—೪—೦
ಸೆಂಟ್ರಲ್ ಇಂಡಿಯಾ	೩೫೩—೦—೦
ಗೋಕಾಕ	೩೭೩—೦—೦
ಕೋಹಿನೂರು	೩೮೩—೮—೦
ಸ್ವದೇಶಿ	೩೮೫—೦—೦
ಸೋಲಾಪುರ ಸಕ್ಕರೆ	೩೩೮—೦—೦
ಮುಂಬಯಿ ಬರ್ಮಾ	೨೨೩—೮—೦
ಸಿಂಧ್ಯಸ್ಟೀಮ	೧೯—೧೧—೦
ಟಾಟಾ ಸ್ಟೀಲ ಡೆಫರ್ಡ್	೧೬೨೬—೪—೦
ಇಂಡಿಯನ್ ಅಯರ್ನ	೩೪—೧೪—೦
ಅಸೊ. ಸಿಮೆಂಟ್ಸ	೧೫೨—೦—೦

ಚಿನ್ನ--ಬೆಳ್ಳಿ

ಡಿಸೆಂಬರ ೩೫ ರ ನಂತರ ಚಿನ್ನ ಬೆಳ್ಳಿಯಲ್ಲಿ ವಾಯದೆ ವ್ಯಾಪಾರವನ್ನು ನಡೆಸಕೂಡದೆಂದು ಸರಕಾರದವರು ಸಾರಿದ್ದರಿಂದಲೂ ಬುಲಿಯನ್ ಅಸೋಸಿಯೇಶನ್ ಮತ್ತು ಬುಲಿಯನ್ ಎಕ್ಸಚೇಂಜ ನಡುವಿನ ತಕರಾರುಗಳು ಬಗೆಹರಿಯದಿರುವದರಿಂದಲೂ ಬೆಲೆಗಳು ಇಳಿಯ ತೊಡಗಿದವು. ಆದರೆ ಬೆಳ್ಳಿ ಮಾತ್ರ ತಿರುಗಿ ಚೇತರಿಸಿದೆ. ಇಂದಿನ ಕೊನೆಯ ದರಗಳ ಸ್ಥಿತಿ ಹೀಗಿತ್ತು:

ತಯಾರ ಚಿನ್ನ	೧೧೩—೧೦—೦
ವಾಯದಾ ''	೧೧೩—೬—೦
ತಯಾರಿ ಬೆಳ್ಳಿ	೧೬೮—೧೪—೦
ವಾಯದಾ ,,	೧೬೬—೧೪—೦

ಅರಳೆ

ಅರಳೆ ಪೇಟೆಯಲ್ಲಿ ಹಿಂದಿನ ವಾರಕ್ಕಿಂತ ಈ ವಾರ ಬೆಲೆಗಳು ಸುಧಾರಿಸಿವೆ. ಇಂದಿನ ದರಗಳ ಸ್ಥಿತಿ ಹೀಗಿದೆ:

ಫೆಬ್ರುವರಿ	೬೧೧—೧೦—೦
ಮೇ	೬೦೫—೪—೦
ಜುಲೈ	೬೦೬—೧೨—೦
ಸಪ್ಟಂಬರ	೬೦೮—೦—೦

ಎಣ್ಣೆ ಕಾಳು

ಶೇಂಗಾ	೧೬೧—೪—೦
ಅಗಸಿ	೩೬—೮—೦
ಅಗಸಿ ಎಣ್ಣೆ	೧೬—೧೨—೦
ಔಡಲ	೩೯—೦—೦

ಹುಬ್ಬಳ್ಳಿ

ತಾ. ೧೬

ಜ. ಹತ್ತಿ-ನಗಕ್ಕೆ	೪೫೦—೪೬೫
ಮುಂ. ಹತ್ತಿ	೪೪೦—೪೫೦
ಜ. ಅರಳೆ ,,	೩೮೦—೩೯೫
ಹತ್ತಿಕಾಳು ರೂ. ಗೆ	೧॥ ಪೌಂಡ
ಜೋಳ (ಚೀಲಕ್ಕೆ)	೨೬—೪೦॥
ಹೊಸ ಜೋಳ ,,	೨೦—೨೩
ಕೆಂಪು ಗೋದಿ ಚೀಲಕ್ಕೆ	೧೧೦—೧೧೩
ಬಿಳಿ ಗೋದಿ ಚೀಲ	೧೦೮—೧೧೦
ಕುಸುಬಿ ,,	೨೩—೨೪
ಅಗಸಿ	೨೯-೪೧
ಔಡಲ	೪೦—೪೧॥
ಜ. ಹೆಸರು	೫೩—೫೪
ಕರಿ ಎಳ್ಳು	೫೬—೫೮।।
ಬಿಳಿ ಎಳ್ಳು	೬೮—೭೨
ಕಡಲೆ	೬೪-೬೬
ಜೊಗರಿ	೨೭—೨೯
ಪುರಳಿ	೪೪-೪೬।।
ಶೇಂಗಾ (ಹೇರು)	೪೦—೪೨॥

ಉತ್ತರ ಕನ್ನಡ

ಮುಂಬಯಿಯ ಮೀನ ವ್ಯವಸಾಯ, ಹಿಂದುಳಿದ ವರ್ಗ ಹಾಗು ಉದ್ಯೋಗಿಕ ಮಂತ್ರಿಗಳಾದ ಮಾನ್ಯ ತಪಾಸೆಯವರು ತಾ. ೨೫ ರಿಂದ ಮೂರು ದಿನ ಉತ್ತರ ಕನ್ನಡದಲ್ಲಿ ಪ್ರವಾಸ ಮಾಡಲಿರುವರು.

ಕಾರವಾರದ ಹರಿತಂತ್ರ್ಯವಾಡೆಗೆ ಮುತ್ತಿಗೆ ಹಾಕಿ ಪೋಲೀಸರು ಗೋವೆಯ ಸೆರೆಯ ಬಾಟ್ಲ ಹಾಗೂ ಕೂಜೆಗೆಳನ್ನು ಶೋಧಿಸಿ ಏಳು ಜನರನ್ನು ಹಿಡಿದಿದ್ದಾರೆ.

ಕಾರವಾರ ಸಬ್‌ಜೇಲಿನಲ್ಲಿದ್ದ ರಜಾಕಾರರಲ್ಲಿ ೩೧ ಜನರ ಬಿಡುಗಡೆಯಾಗಿ ಅವರನ್ನು ಸ್ವಸ್ಥಾನಕ್ಕೆ ಕಳಿಸಲಾಗಿದೆ.

ದರ್ ಸಮಿತಿಯ ವರದಿ ಬಗ್ಗೆ ಅಭಿಪ್ರಾಯಗಳು

ಭಾಷಾನ್ವಯ ಪ್ರಾಂತ ನಿರ್ಮಾಣವನ್ನು ಮುಂದೂಡುವದು ಜಾಣತನವಲ್ಲ. ಭಾಷೆಯು ಪರಂಪರೆ ಸಂಸ್ಕೃತಿ, ಇತಿಹಾಸಗಳ ಪ್ರತೀಕ. ದೇಶದ ಬಲವು ಜನತೆಯ ಸಮಾಧಾನವನ್ನೆ ಅವಲಂಬಿಸಿದೆಯೆಂಬದನ್ನು ನಮ್ಮ ಧುರೀಣರು ತಿಳಿಯುವರೆಂದು ಆಶಿಸುವೆ.

— ಶ್ರೀ ಎನ್. ವಿ. ಗಾಡಗೀಳ
(ಭಾರತ ಸರಕಾರದ
ಲೋಕೋಪಯೋಗಿ ಮಂತ್ರಿ)

❋

ದರ್ ಸಮಿತಿಯ ವರದಿಯಿಂದ ನಾನು ಗೊಂದಲದಲ್ಲಿ ಬಿದ್ದಿಲ್ಲ. ದೊಡ್ಡ ಕಾರ್ಯಗಳಲ್ಲಿ ಈ ಬಗೆಯಾಗಿ ವಿಘ್ನಗಳು ಬರತಕ್ಕವೇ. ಬೇರೆ ಬೇರೆ ಪ್ರಾಂತಗಳಲ್ಲಿ ನಾಡು ನುಡಿಗಳ ವಿಷಯವಾಗಿ ಪ್ರತ್ಯೇಕತಾಭಾವನೆಯಿದ್ದರೂ ಶ್ರೇಷ್ಠತರವಾದ ರಾಷ್ಟ್ರಾಭಿಮಾನ ಜಾಗೃತವಾದಲ್ಲಿ ಅವೆಲ್ಲ ಕಮರಿ ಹೋಗುವವು.

— ಶ್ರೀ ರಂ. ರಾ. ದಿವಾಕರ
(ಭಾರತ ಸರಕಾರದ ಸುದ್ದಿ—
ಆಕಾಶವಾಣಿ ಮಂತ್ರಿ)

❋

ದರ್ ಸಮಿತಿಯ ವರದಿ ಪ್ರತಿಗಾಮಿಯಾಗಿದೆ. ಆಂಧ್ರರೂ ಕನ್ನಡಿಗರೂ ೧೯೧೧ ರಿಂದ ಸ್ವತಂತ್ರ ಪ್ರಾಂತಗಳನ್ನು ಬೇಡುತ್ತ ಬಂದಿರುವರು. ರಾಷ್ಟ್ರೀಯ ಆಂದೋಲನದ ಸಮಯದಲ್ಲಿ ತಮ್ಮ ಹೋರಾಟವನ್ನು ಬದಿಗಿರಿಸಿ ಸ್ವಾತಂತ್ರ್ಯದ ಹೋರಾಟದಲ್ಲಿ ಧುಮುಕಿದ್ದರು. ಈಗ ಅವರ ಬೇಡಿಕೆಗಳನ್ನು ಪೂರೈಸದಿರುವದು ಯಾವ ನ್ಯಾಯ ? ಇನ್ನು ತಾಳ್ಮೆವಹಿಸಿರೆಂದು ಕೇಳುವದು ಸರಿಯೆ ? ನಮ್ಮ ಧುರೀಣರು ಪ್ರತಿಗಾಮಿ ವರದಿಯನ್ನು ಮನ್ನಿಸದೆ ಭಾಷಾನ್ವಯ ಪ್ರಾಂತಗಳನ್ನು ನಿರ್ಮಿಸಬೇಕು.

– ಪ್ರೊ. ಎನ್. ಜಿ. ರಂಗಾ
ಘಟನಾ ಸಮಿತಿ ಸದಸ್ಯರು

❋

ವರದಿಯಲ್ಲಿಯ ಉಪರಾಷ್ಟ್ರೀಯತೆಯ ಭೀತಿ ವ್ಯರ್ಥವಾದುದು. ಕಾಂಗ್ರೆಸ್ಸು ಪಕ್ಷದ ಅಧಿವೇಶನದಲ್ಲಿ ಈ ವಿಷಯವನ್ನು ಪರ್ಯಾಲೋಚಿಸದಿದ್ದರೆ ದಾಕ್ಷಿಣಾತ್ಯರ, ವಿಶೇಷವಾಗಿ ಕನ್ನಡಿಗರ ಮತ್ತು ಆಂಧ್ರರ ವಿಶ್ವಾಸವನ್ನು ಕಳೆದುಕೊಳ್ಳುವದು

—ಶ್ರೀ ಕೆ. ಆರ್. ಕಾರಂತ ಮತ್ತು
ಜಿನರಾಜ ಹೆಗಡೆ, ಮಂಗಳೂರು

❋

ಇದೀಗ ದೊರೆತ ಸ್ವಾತಂತ್ರ್ಯದ ಲಾಭವು ನರ್ಮದಾ ನದಿಯ ದಕ್ಷಿಣದ ಜನರಿಗೆ ಮುಟ್ಟಬೇಕಾದರೆ ಭಾಷಾನ್ವಯ ಪ್ರಾಂತ ರಚನೆ ಅವಶ್ಯ. ಸಮಿತಿಯ ವರದಿಯಿಂದ ಯಾರೂ ನಿರಾಶರಾಗಬೇಕಿಲ್ಲ. ಕೊನೆಯ ನಿರ್ಣಯ ಘಟನಾ ಸಮಿತಿಗೇ ಸೇರಿದ್ದು.

— ಶ್ರೀ ಶಂಕರರಾವ ದೇವ
ಅ. ಭಾ. ಕಾಂ. ಕಾರ್ಯದರ್ಶಿ.

❋

ಈ ವರದಿಯನ್ನು ಸ್ವೀಕರಿಸಿದ್ದಾದರೆ ದೇಶದಲ್ಲಿ ಅಸಮಾಧಾನ ಹೆಚ್ಚಿ ರಾಷ್ಟ್ರೀಯತೆಯ ಬದಲು ಅರಾಷ್ಟ್ರೀಯತೆಗೆ ಉತ್ತೇಜನ ನೀಡಿದಂತಾಗುವದು. ಇದನ್ನು ಘಟನಾ ಸಮಿತಿ ನಿರಾಕರಿಸುವಂತೆ ಮುಖಂಡರು ಪ್ರಯತ್ನಿಸಬೇಕು.

—ಶ್ರೀ ಬುರ್ಲಿ ಬಿಂದು ಮಾಧವ
ಧಾರವಾಡ

❋

ಕರ್ನಾಟಕ ಪ್ರಾಂತವು ಈಗಾಗಲೆ ಕನ್ನಡಿಗರ ಹೃದಯದಲ್ಲಿ ರಚಿತವಾಗಿದೆ. ನ್ಯಾಯವೂ ನೈಸರ್ಗಿಕವೂ ಆದ ಈ ನಮ್ಮ ಗುರಿಯನ್ನು ಭೌಗೋಲಿಕವಾಗಿ ಅಸ್ತಿತ್ವದಲ್ಲಿ ತರುವದಕ್ಕೆ ದರ್ ಸಮಿತಿಯಂಥವು ನೂರಾರು ವರದಿಗಳಿಂದಲೂ ಅಡ್ಡಿಯುಂಟಾಗದು. ಈ ವರದಿಯು ರಾಜಕೀಯ ಮುತ್ಸದ್ದಿತನದ ದಿವಾಳಿಯ ಪ್ರದರ್ಶನ. ಭಾರತ ಸರಕಾರವು ಇದನ್ನೇ ಎತ್ತಿ ಹಿಡಿದ ಪಕ್ಷದಲ್ಲಿ ಅದು ಸರಕಾರದ ದುರ್ದೈವದ ದಿನವಲ್ಲದೆ ಕರ್ನಾಟಕದ ದುರ್ದೈವದ ದಿನವೆಂದು ನಾನು ತಿಳಿಯಲಾರೆ.

— ಶ್ರೀ ಅಂದಾನಪ್ಪ ದೊಡ್ಡಮೇಟಿ
ಕಾರ್ಯದರ್ಶಿ ಕ. ಏ. ಮಹಾ ಸಮಿತಿ.

❋

ಭಾಷಾನ್ವಯ ಪ್ರಾಂತ ರಚನೆಯಿಂದ ಹಿಂದುಸ್ತಾನದ ಬಲ ಕುಗ್ಗುವದೆಂದು ಸಮಿತಿ ಹೇಳಿದ್ದು ಅಸಮಂಜಸ. ಭಾಷಾನ್ವಯ ಪ್ರಾಂತ ರಚನೆಯಿಂದ ಈಗಿದ್ದ ಆಡಳಿತದ ತೊಡಕುಗಳು ಹೋಗಿ ಶಿಕ್ಷಣ ಆರ್ಥಿಕ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸಿಕೊಂಡು ಪ್ರಗತಿ ಹೊಂದಲು ಹೊಸ ಪ್ರಾಂತಗಳು ಸಮರ್ಥವಾಗುವದರಿಂದ ಈ ಪ್ರಾಂತಗಳ ಬಲ ಹೆಚ್ಚಿದಂತೆ ಹಿಂದುಸ್ತಾನದ ಶಕ್ತಿಯೂ ಹೆಚ್ಚುವದು.

—ಪ್ರೊ. ವಿ. ಕೆ. ಆರ್. ವಿ. ರಾವ

❋

. . . ವರದಿಯು ಪರ್ವತವು ಇಲಿಯನ್ನು ಹಡೆಯಿತೆಂಬ ಕತೆಯಂತೆ ಹಾಸ್ಯಾಸ್ಪದವಾದುದು. ಇಂಥ ವರದಿಯನ್ನು ಬರೆಯುವದಿದ್ದರೆ ಇಷ್ಟು ವೆಚ್ಚದಿಂದ ವಿಚಾರಣೆಯ ಹಗರಣವನ್ನೇಕೆ ಮಾಡಬೇಕಿತ್ತೋ ತಿಳಿಯದು.

—ಡಾ. ಎಂ. ಆರ್. ಜಯಕರ

❋

ಸಮಿತಿಯವರು ಕರ್ನಾಟಕದ ವೈಶಿಷ್ಟ್ಯವನ್ನು ಕಡೆಗಣಿಸಿದ್ದಾರೆ. ಭಾಷಾನ್ವಯ ಪುನರ್ವಿಂಗಡಣೆ ಈಗ ಅವ್ಯವಹಾರ್ಯವೆಂದು ಕಂಡರೂ ಕರ್ನಾಟಕವನ್ನು ಒಂದೇ ಆಡಳಿತದಲ್ಲಿ ತರುವದವಶ್ಯವೆಂಬದು ನಿಸ್ಸಂಶಯ. ಕರ್ನಾಟಕದ ಎಲ್ಲ ಭಾಗಗಳನ್ನು ಒಂದುಗೂಡಿಸಿ ಮುಂಬಯಿ ಪ್ರಾಂತದಲ್ಲಿ ಸೇರಿಸಿ ಸಿಂಧು ಪ್ರಾಂತವನ್ನು ಮುಂಬಯಿಯಿಂದ ಪ್ರತ್ಯೇಕಿಸುವ ಮೊದಲು ಅದಕ್ಕಿದ್ದ ಸ್ಥಾನಮಾನವನ್ನೆ ಕರ್ನಾಟಕಕ್ಕೂ ಕೊಡಬೇಕೆಂದು ನನ್ನ ಅಭಿಪ್ರಾಯ.

– ಜನಾಬ ಎ. ಎ. ಕಿತ್ತೂರ
ಎಂ. ಎಲ್. ಎ.

❋

ವರದಿ ತೀರ ನಿರಾಶಾಜನಕವಾಗಿದೆ. ಸಮಿತಿಯವರು ಭಾಷಾನ್ವಯ ಪ್ರಾಂತ ರಚನೆಯ ತತ್ವವನ್ನೆ ಅಲ್ಲಗಳೆದಿದ್ದಾರೆ ಪ್ರಾಂತಗಳ ಗಡಿ ಮೊದಲಾದ ಪ್ರಶ್ನೆಗಳನ್ನು ವಿಚಾರಿಸುವದನ್ನು ಬಿಟ್ಟು ಸಮಿತಿಯವರು ತಮ್ಮ ಅಧಿಕಾರದ ಹೊರಗಿನ ವಿಷಯದ ಬಗ್ಗೆ ಮಾತಾಡಿದ್ದಾರೆ. ಹಿಂದುಸ್ತಾನ ಒಂದು ರಾಷ್ಟ್ರವಲ್ಲ. ಅದನ್ನು ಒಂದು ರಾಷ್ಟ್ರವಾಗಿ ಮಾಡಲು ಹೊರಟರುವಂತೆ ಸಮಿತಿಯ ವರದಿ ತೋರುವದು.

—ಡಾ ಪಿ. ಜಿ. ದೇಶಮುಖ
ಅಧ್ಯಕ್ಷ, ಸಂಯುಕ್ತ ಮಹಾರಾಷ್ಟ್ರ
ಪರಿಷತ್ತಿನ ಸ್ವಾಗತ ಸಮಿತಿ.

ಕಾರ್ಕಳದ ರಾಷ್ಟ್ರಭಾಷಾ ಪ್ರಚಾರ ಸಂಘದ ವಾರ್ಷಿಕ ಸಭೆಯು ದಿನಾಂಕ ೬ ರಂದು ಕಾರ್ಕಳದಲ್ಲಿ ಶ್ರೀ ಎಚ್. ಎಸ್. ಹುಸೇನ್ ಸಾಹೇಬ್ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀನಿವಾಸ ಶೆಣೈಯವರು ವರದಿಯೊಪ್ಪಿಸಿ ಸಂದೇಶಗಳನ್ನೋದಿದರು. ಶ್ರೀಗಳಾದ ಎಂ. ಬಿ. ಅಧಿಕಾರಿ, ವಿಸ್. ಎನ್ ನಾಯ್ಕ ಮೊದಲಾದವರ ಭಾಷಣಗಳಾದುವು.

ಕರ್ನಾಟಕ ವಕೀಲರ ಪರಿಷತ್ತಿನ ಗೊತ್ತುವಳಿಗಳು

ಕರ್ನಾಟಕ ವಕೀಲರ ಪರಿಷತ್ತಿನ ಒಂದನೆ ಅಧಿವೇಶನವು ತಾ. ೧೧ [illegible] ರ [illegible] ದ [illegible] ನೆರವೇರಿತು. [illegible] ಪ್ರಾರಂಭದಲ್ಲಿ ಮಹಾತ್ಮಾ ಗಾಂಧಿಯವರ ನಿಧನದ ಬಗ್ಗೆ ದುಃಖ ಪ್ರದರ್ಶಿಸಲಾಯಿತು. ಅನಂತರ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿ ನೇಮಕ ಹೊಂದಿದ ಬಗ್ಗೆ ಶ್ರೀ ದಿವಾಕರರನ್ನು ಮತ್ತು ಭಾರತದ ಮೊದಲ ನೇತಾರರಾಗಿ [illegible] ಹೊಂದಿದರೆ. [illegible] ಕರಿಯಪ್ಪನವರನ್ನು ಅಭಿನಂದಿಸುವ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

ಪರಿಷತ್ತು ನಾಗರಿಕರ ಹಕ್ಕುಗಳು ಆಕ್ರಮಣವನ್ನು ನಿಷೇಧಿಸುವ, ಕರ್ನಾಟಕ ಏಕೀಕರಣವು ಶೀಘ್ರವಾಗಿ ಆಗಬೇಕೆನ್ನುವ, ನಾಗರಿಕ ಸ್ವಾತಂತ್ರ್ಯ ಸಂಘಗಳನ್ನು ಸ್ಥಾಪಿಸುವ ಬಗ್ಗೆ ಕಾರ್ಯ ನಿರ್ವಹಣ ಖಾತೆಯಲ್ಲಿ ರಾಜಕೀಯ ಪಕ್ಷದವರು ಹಸ್ತಕ್ಷೇಪ ಮಾಡುವದನ್ನು ಖಂಡಿಸುವ ಹಾಗೂ ಕರ್ನಾಟಕ ವಕೀಲ ಸಂಘ ಸ್ಥಾಪನೆಯ ಬಗ್ಗೆ ಪ್ರಯತ್ನಿಸಲು ಸಮಿತಿಯನ್ನು ರಚಿಸುವ ಬಗ್ಗೆ ಮೊದಲಾದ ಇಪ್ಪತ್ತು ಗೊತ್ತುವಳಿಗಳನ್ನು ಸ್ವೀಕರಿಸಿತು.

ಉಡುಪಿ ಪೌರಸಭಾಸಮಿತಿಯ ಸಭೆಯು ಕಳೆದವಾರ ಜರುಗಿದಾಗ ಬಡಗಪೇಟೆ[illegible]ದಲ್ಲಿ ಹೊಸ ಮಾರ್ಗವೊಂದನ್ನು ನಿರ್ಮಿಸುವದಕ್ಕಾಗಿ ರೂ ೧೫೦೦-ಮಂಜೂರ ಮಾಡಲಾಯಿತು. ಪೌರಸಮಿತಿಯು ತನ್ನ ೧೯೪೭-೪೮ ರ ಪರಿಶೋಧಿತ ಲೆಕ್ಕಪತ್ರದ ವರದಿಯನ್ನು ರಿಕಾರ್ಡು ಮಾಡಿತಲ್ಲದೆ ನಗರಸಭೆಯ [illegible] ರೆವಿನ್ಯೂ ಇನ್‌ಸ್ಪೆಕ್ಟರರಿಗೆ ಒಂದು ತಿಂಗಳ ಬೋನಸ್ಸ ಕೊಡುವ ಬಗ್ಗೆ ಸರಕಾರಕ್ಕೆ ಶಿಫಾರಸು ಮಾಡಲಾಯಿತು.

೧೯೪೯ ರಲ್ಲಿಯ ನಿಮ್ಮ ಭವಿಷ್ಯ

ಯಾವದಾದರೊಂದು ಹೂವಿನ ಹೆಸರು ಹಾಗೂ ನಿಮ್ಮ ಹೆಸರು ಮತ್ತು ವಿಳಾಸ ಇವುಗಳನ್ನು ಬರೆದು ಪೋಸ್ಟ ಕಾರ್ಡನ್ನು ಕಳಿಸಿರಿ. ನಾವು ರೂ. ೧-೪-೦ ಕ್ಕೆ (ಅಂಚೆವೆಚ್ಚ ಬೇರೆ) ನಿಮ್ಮ ಮುಂಬರುವ ೧೨ ತಿಂಗಳಲ್ಲಿಯ ಉಳಿದ ಮಾಹಿತಿಯೊಡನೆ ವ್ಯವಹಾರದಲ್ಲಿಯ ಲಾಭ-ಹಾನಿ, ಬಢತಿ, ವರ್ಗಾವರ್ಗಿ, ಜನನ, ಕೌಟುಂಬಿಕ ಸುಖ ಮತ್ತು ದೈಹಿಕ ವೇದನೆಗಳು ಮುಂತಾದ್ದನ್ನು ತಿಳಿಸುವುದಲ್ಲದೆ ದುಷ್ಟಗ್ರಹಗಳ ಬಾಧೆಯಿಂದ ಸಂರಕ್ಷಿಸಿಕೊಳ್ಳಲು ಉಪಾಯಗಳನ್ನು ಸೂಚಿಸುತ್ತೇವೆ. ಒಮ್ಮೆ ಪರೀಕ್ಷಿಸಿರಿ. ನಮ್ಮ ಭವಿಷ್ಯದ ಸತ್ಯತೆಯ ಬಗ್ಗೆ ಖಾತ್ರಿಯಾಗುವದು.

ಪಂಡಿತ ದೇವದತ್ತ ಶಾಸ್ತ್ರಿ
ರಾಜಜ್ಯೋತಿಷಿ (ಕೆ. ಎಚ್.)
ಕರ್ತಾರಪುರ (ಪೂರ್ವ ಪಂಜಾಬ)
Pt. DEV DUTT SHASTRI
Raj Jyotishi (K. H)
Kartarpur. (E.P.)

ಜಿ. ಎಸ್. ಇನಾಮದಾರ (ಜಹಾಗಿರದಾರ) ಕೃತ ೩ ಹೊಸ ನಾಟಕಗಳು
೧ ಕಡ್ಡಿಮಟ್ಟಿ ಸ್ಟೇಶನ್ ಮಾಸ್ತರ ೧-೮-೦ ೩ ಭೌಮಾಸುರ ೧-೮-೦
೨ ಶಾಂತಕುಮಾರಿ ೦-೮-೦ ಇದಲ್ಲದೆ ನಮ್ಮಲ್ಲಿ ಕಾಮಧೇನು ೫-೮-೦
ಕಲ್ಪವೃಕ್ಷ ೪-೮-೦ ಕನ್ನಡ ಹಿಂದಿ ಸ್ವಯಂಬೋಧಿ ೨-೦-೦ ಸಿಗುತ್ತವೆ.
ಸಿಟಿ ಬುಕ್ ಸ್ಟಾಲ ದುರ್ಗದಬೈಲ ಹುಬ್ಬಳ್ಳಿ.

ಮಿಂಚಿನಬಳ್ಳಿಗೆ ಚಂದಾದಾರರಾಗಿರಿ
ವರುಷದಲ್ಲಿ ೧೫೦ ಪುಟಗಳ ನಾಲ್ಕು ವಿಚಾರ ಪ್ರಚೋದಕ ಗ್ರಂಥಗಳು
ಈ ವರ್ಷದ ಮೊದಲನೆಯ ಕುಡಿ

“ಧರ್ಮ ಹಾಗೂ ರಾಷ್ಟ್ರೀಯತ್ವ”

(ಭಾರತದ ರಾಷ್ಟ್ರನಿರ್ಮಾಣವನ್ನು ಯಾವ ತತ್ವಗಳ ಮೇಲೆ ಮಾಡಬೇಕೆಂಬುದನ್ನು ಶ್ರೀ ಅರವಿಂದರು ಇದರಲ್ಲಿ ಸುಂದರವಾಗಿ ವಿವರಿಸಿದ್ದಾರೆ.)

ಈ ವರ್ಷದಲ್ಲಿ ಗಾಂಧೀ-ಸೂತ್ರಗಳು, ಸಾಹಿತ್ಯಜ್ಞರ ಆತ್ಮಕಥನ, ಕಮ್ಯುನಿಸಂ ಮೊದಲಾದ ಗ್ರಂಥಗಳು ಬರಲಿವೆ

ಬೇಗನೆ ಚಂದಾದಾರರಾಗಿರಿ—

ಚಂದಾವಿವರ:— ಸಾದಾ ಅಂಚೆಯಿಂದ ೫-೮-೦ ರಜಿಸ್ಟರ ,, ೬-೮-೦

ವ್ಯವಸ್ಥಾಪಕ ಮಿಂಚಿನಬಳ್ಳಿ, ಧಾರವಾಡ

ಕಿಡಿಗೇಡಿ ವರದಿ

ಭಾಷಾನುಗುಣ ಪ್ರಾಂತರಚನೆಗಾಗಿ ಹಲವರ್ಷಗಳಿಂದ ಹಾತೊರೆಯುತ್ತಿದ್ದವರಿಗೆಲ್ಲ ದರ್ ಸಮಿತಿಯವರ ವರದಿಯಿಂದ (ಪುಟ ೪)ನಿರಾಶೆಯಾಗಿದ್ದರೆ, ಸಮಿತಿಯವರೇ ಒಪ್ಪಿದಂತೆ, ರಾಜಧಾನಿಯಿಂದ ದೂರವಾಗಿದ್ದು ಉಪೇಕ್ಷೆಗೊಳಗಾಗಿರುವ ಕನ್ನಡಿಗರಿಗೂ ಕೇರಳದವರಿಗೂ ಅದು ವಜ್ರಾಘಾತಪ್ರಾಯವೇ ಆಯಿತೆನ್ನಬೇಕು. ವಿಚಾರಣ ಸಮಿತಿಗಳ ನೇಮಕವೆಂದರೆ ದೀರ್ಘಸೂತ್ರದ ಯುಕ್ತಿಯೆಂಬುದು ಪ್ರಸಿದ್ಧವಾಗಿದ್ದರೂ ದರ್ ಸಮಿತಿಯಿಂದ ದಕ್ಷಿಣ ದೇಶಗಳು ಈ ಬಗೆಯ ಅನ್ಯಾಯವನ್ನು ಸ್ವಪ್ನದಲ್ಲಿಯೂ ನಿರೀಕ್ಷಿಸಿದ್ದಿಲ್ಲ. ಹಿಂದುಸ್ತಾನವನ್ನು ಏಕರಾಷ್ಟ್ರವಾಗಿ ಕಟ್ಟುವ ಹಸಿಹಂಬಲದ ಭರದಲ್ಲಿ ಸಮಿತಿಯ ತ್ರಿಮೂರ್ತಿಗಳು ತಮಗೊಪ್ಪಿಸಲ್ಪಟ್ಟ ಪ್ರಮೇಯಗಳಾವುವು, ಅವುಗಳ ಬಗ್ಗೆ ತಮಗೆ ಲಭ್ಯವಾದ ಪ್ರಮಾಣಗಳೇನು, ಅವುಗಳ ಮೇಲಿಂದ ತಾವು ಯಾವ ತೀರ್ಮಾನಕ್ಕೆ ಬರಬೇಕಾದುದು, ಎಂಬೆಲ್ಲ ಮಾತುಗಳನ್ನು ಮರೆತೇಬಿಟ್ಟಂತೆ ಕಾಣುತ್ತವೆ. ಈಗಿನ ಅವ್ಯವಸ್ಥೆಯ ವ್ಯವಸ್ಥೆಯಲ್ಲಿ ಸಂಬಂಧಪಟ್ಟ ಪ್ರಾಂತಗಳಆಡಳಿತೆಯಲ್ಲಿ ಜಟಿಲಸಮಸ್ಯೆಗಳು ಉದ್ಭೂತವಾಗಿವೆಯೆಂದು ಸಮಿತಿ ಒಪ್ಪಿದೆ, ಕೆಲ ಭಾಷಾಪ್ರದೇಶಗಳಿಗೆ ಅನ್ಯಾಯವಾಗಿರುವದು ನಿಜವೆಂದೂ ಅದು ಮನಗಂಡಿದೆ, ಪ್ರಾಂತಗಳಾಗದಿದ್ದರೆ ಸಂಬಂಧಪಟ್ಟ ಪ್ರದೇಶಗಳಲ್ಲಿ ತೀವ್ರ ನಿರಾಶೆಯೂ ಆಡಳಿತೆಗೆ ಆತಂಕವೂ ಉಂಟಾದೀತೆಂದೂ ಅದಕ್ಕೆ ಗೊತ್ತಾಗಿದೆ; ಈ ಎಲ್ಲ ಪ್ರಮಾಣಗಳ ಆಧಾರದಿಂದ ಅದು ಸಂಪಾದಿಸಿದ ನಿಗಮನವೆಂದ್ರರೆ, ಭಾಷಾನುಗುಣ ಪ್ರಾಂತರಚನೆಯನ್ನು ಈಗ ಮಾಡಬಾರದು, ಮಾತ್ರವಲ್ಲ, ಎಂದೂ ಮಾಡಬಾರದು. ವಿದಗ್ಧ ನ್ಯಾಯಾಧೀಶರೂ ಅವರ ಅಭಿಜ್ಞ ಸಂಗಡಿಗರೂ ವಿಚಿತ್ರವಾದ ಹೊಸ ತರ್ಕ ಪದ್ಧತಿಯೊಂದನ್ನು ಸೃಜಿಸಿದಂತೆ ಕಾಣುತ್ತದೆ. ಭಾಷಾನ್ವಯ ಪ್ರಾಂತರಚನೆಯ ಬೇಡಿಕೆಯ ಸಾರಾಸಾರತೆಯನ್ನು ವಿವೇಚಿಸಲು ಇವರನ್ನು ನೇಮಿಸಿದ್ದಲ್ಲ, ಬದಲಿಗೆ ಆ ಬೇಡಿಕೆಯನ್ನು ಹತ್ತಿಕ್ಕಲು ಯಾವ ಉಪಾಯಗಳನ್ನು ಯೋಜಿಸಬಹುದೆಂದು ವಿಚಾರಿಸಲು, ಎಂಬಂತೆ, ಕೇಂದ್ರಕ್ಕೆ ಹೆಚ್ಚಿನ ಅಧಿಕಾರಗಳು ಬೇಕು, ಅದಕ್ಕಾಗಿ ಹೊಸ ಘಟನೆಯಲ್ಲಿ ವ್ಯವಸ್ಥೆ ಮಾಡಬೇಕು, ಇಡಿ ರಾಷ್ಟ್ರದಲ್ಲಿ ಒಂದೇ ಭಾಷೆಯನ್ನು ಜಾರಿಯಲ್ಲಿ ತರಬೇಕು ಎಂದು ಮುಂತಾಗಿ ಅಸಂಬದ್ಧ ವಾದಸರಣಿಯಿಂದ ಸರಕಾರಕ್ಕೆ ಸೂಚನೆ ಕೊಡುವ ಹೊಣೆಯನ್ನು ಸಮಿತಿ ಹೊತ್ತಿದೆ.

ಭಾಷಾತ್ಮಕ ಅಲ್ಪಸಂಖ್ಯಾಕರ ಮೇಲಿನ ದಬ್ಬಾಳಿಕೆ, ಗಡಿನಿರ್ಣಯದ ವೈಮನಸ್ಯ, ಮದ್ರಾಸ ಮುಂಬಯಿ ನಗರಗಳ ಸಮಸ್ಯೆಗಳೇ ಮೊದಲಾದ ಚರ್ವಿತಚರ್ವಣವಾಗಿ ಬಿಟ್ಟಿರುವ ಕೆಲವು ಆಕ್ಷೇಪಗಳನ್ನೂ ಸಮಿತಿಯವರು ಪುನರುಚ್ಚರಿಸಿದ್ದಾರೆ. ಆದರೆ ಇವೆಲ್ಲ ಅವಾಂತರವಾದಗಳು. ಪ್ರಧಾನ ವಾದವೆಂದರೆ ಸಮಿತಿಯ ತಲೆಯಲ್ಲಿ ಉದ್ಭೂತವಾಗಿರುವ ರಾಷ್ಟ್ರವಿಚ್ಛೇದ ಭಯದ ಪೆಡಂಭೂತ ಭಾಷಾನಿಷ್ಠ ಉಪರಾಷ್ಟ್ರೀಯತೆಯನ್ನು ಬೆಳೆಸಲು ಹೊಸ ಪ್ರಾಂತರಚನೆಯು ಕಾರಣವಾಗುವದು, ಅದರಿಂದ ಪ್ರಾಂತಾಭಿಮಾನದ ಭರದಲ್ಲಿ ರಾಷ್ಟ್ರಾಭಿಮಾನ ಕೆಟ್ಟುಹೋಗಿ ರಾಷ್ಟ್ರ ತುಂಡುತುಂಡಾಗಿ ಹೋಗಬಹುದೆಂದು ಅವರು ಭೀತರಾಗಿ ಒಂದೇ ರಾಷ್ಟ್ರದ ಭಾವನೆ ಬೆಳೆಸಲು "ಉಪರಾಷ್ಟ್ರೀಯತೆ"ಯನ್ನು ಹತ್ತಿಕ್ಕಬೇಕು, ಇವೆರಡೂ ಜತೆಜತೆಯಾಗಿ ಬಾಳಲಾರವು. ಎಂದಿದ್ದಾರೆ. ಅವರ ಈ ಸಿದ್ಧಾಂತಕ್ಕೆ ಅವರು ಪ್ರಮಾಣಗಳನ್ನಾಗಲಿ ನಿದರ್ಶನಗಳನ್ನಾಗಲಿ ಕೊಟ್ಟಿಲ್ಲ. ಪ್ರಮಾಣರಹಿತವಾದ ಅವರ ಈ ಉದ್ವ್ಯಕ್ತ ಹೇಳಿಕೆಗಳನ್ನು "ಬಲ್ಲದ ಗಂಡಗೆ ಮೊಸರಲ್ಲಿ ಕಲ್ಲು ಬಂತು" ಎಂಬ ನಾಣ್ಣುಡಿಗೆ ಹೋಲಿಸಬೇಕಾಗುವದು. ರಾಷ್ಟ್ರನಿಷ್ಠೆಯ ಗುತ್ತಿಗೆ ವಿಶಿಷ್ಟ ಪ್ರದೇಶದವರದೆಂಬ ಕಿಡಿಗೇಡಿ ಮನೋವೃತ್ತಿಯೆ ಈ ವರದಿಯ ಹಿಂದಿದೆಯಲ್ಲದೆ ಬೇರಲ್ಲ.

ಈ ನಿರ್ಣಯಕ್ಕೆ ಬರಬೇಕಾಗಿದ್ದರೆ ಸಮಿತಿಯವರು ಇಷ್ಟೆಲ್ಲ ಕೊಂಕಣ ಸುತ್ತಿ ಮೈಲಾರಕ್ಕೆ ಬಂದು, ಇಷ್ಟೆಲ್ಲ ಸಾಕ್ಷಿ ಮನವಿಗಳನ್ನು ಪಡೆಯುವ ತೊಂದರೆಯನ್ನು ಏಕೆ ವಹಿಸಬೇಕಾಗಿತ್ತೋ ಏನೊ! ಏಕೆಂದರೆ, ಅವರ ತೀರ್ಪು ವಿಚಾರಣೆಯ ಮೊದಲೇ ಅವರ ಮನಃಪಟಲದಲ್ಲಿ ಬರೆಯಲ್ಪಟ್ಟಿತ್ತೆಂಬುದು ಅಪಾರದರ್ಶಕ ಕಾಗದದಲ್ಲಿಯೂ ಪಾರದರ್ಶನಮಾಡಿಸುತ್ತಿದೆ!

ಆಹಾರ ಪರಿಸ್ಥಿತಿಯ ಹೊಣೆ

"ನಾನಲ್ಲ ಅವ!"

ವಾರದ ಸಿಂಹಾವಲೋಕನ

ಕರ್ನಾಟಕ ವಕೀಲ ಪರಿಷತ್ತು

ಕೆಲವು ದಿನ ಹಿಂದೆ ಧಾರವಾಡದಲ್ಲಿ ನೆರೆದ ಕರ್ನಾಟಕ ವಕೀಲರ ಪ್ರಥಮ ಪರಿಷತ್ತು ಹಲವು ದೃಷ್ಟಿಗಳಿಂದ ಸ್ಮರಣೀಯವಾಗಿತ್ತು. ಮೊದಲನೆಯದಾಗಿ ಅದು ಶುಷ್ಕ ವ್ಯಾವಸಾಯಿಕ ದಿನಚರಿಯ ಏಕಮುಖ ಜೀವನದಿಂದ ವಕೀಲರು ಉದಾತ್ತತರವಾದ ಸಾರ್ವಜನಿಕ ಮಹಾಪ್ರವಾಹದ ಕಡೆಗೆ ತಮ್ಮ ಸಾಮೂಹಿಕ ಬಲವನ್ನು ಹೊರಳಿಸಿದ್ದರ ದ್ಯೋತಕವಾಗಿದೆ. ಪರಿಷತ್ತನ್ನು ಉದ್ಘಾಟಿಸಿದ ನ್ಯಾಯಮೂರ್ತಿ ಭಗಲಾರವರು ನ್ಯಾಯದಾನದ ಕಾರ್ಯದಲ್ಲಿ ವಕೀಲರ ಮಹತ್ವದ ಸ್ಥಾನದ ಅರಿವು ಮಾಡಿಕೊಟ್ಟು ವಕೀಲರು ವ್ಯಕ್ತಿ ಸ್ವಾತಂತ್ರ್ಯದ ರಕ್ಷಕರೆಂದು ತೋರಿಸಿಕೊಟ್ಟರು. ಜನರಲ್ಲಿ ಈಚೆಗೆ ವಕೀಲರ ಬಗೆಗುಂಟಾದ ಒಂದು ಬಗೆಯ ತಿರಸ್ಕಾರ ಬುದ್ಧಿ— ಅದರ ದೋಷ ಏಕಪಾಕ್ಷಿಕವಲ್ಲ— ಯನ್ನು ನಿವಾರಿಸಲು ಅದು ಸಹಾಯವಾದೀತು. ಅಧಿವೇಶನದ ಅಧ್ಯಕ್ಷರಾಗಿದ್ದ ಮಂಗಳೂರಿನ ಶ್ರೀ ಕೆ. ಆರ್. ಕಾರಂತರು ನಿರ್ಭಯ ನ್ಯಾಯನಿಷ್ಠುರತೆಗೆ ಹೆಸರಾದವರು. ಅವರು ನಿಷ್ಠಾವಂತ ಕಾಂಗ್ರೆಸ್ಸಿಗರಾದರೂ ಇಂದಿನ ನಮ್ಮ ಸರಕಾರಿ ಆಡಳಿತೆಗಳಲ್ಲಿ ರಾಶಿಗೂಡಿರುವ ಹೊಲಸನ್ನು ಬಯಲಿಗೆಳೆದುದು ಉಚಿತವೇ ಆಯಿತು. ನಾಗರಿಕ ಸ್ವಾತಂತ್ರ್ಯದ ಮೇಲೆ ಸರಕಾರಗಳು ಎತ್ತಿದ ಗದೆ, ಸರಕಾರಿ ಖಾತೆಗಳಲ್ಲಿ, ಉಚ್ಚ ಅಧಿಕಾರಿಗಳಲ್ಲಿ, ಮಂತ್ರಿಗಳಲ್ಲಿ ಕೂಡ ಕಂಡುಬರುವ ನೀತಿಭ್ರಷ್ಟತೆ, ಆಡಳಿತದ ಅಸಾಮರ್ಥ್ಯ ಇವುಗಳನ್ನು ಅವರು ಸಪ್ರಮಾಣವಾಗಿ ಸ್ವಾನುಭವದಿಂದ ಉದ್ಘಾಟಿಸಿದರು. ಅವರು ತಮ್ಮ ಮದ್ರಾಸ ಪ್ರಾಂತವನ್ನೆ ಉದಾಹರಣೆಗೆ ತೆಗೆದುಕೊಂಡಿದ್ದರೂ ಅವರೆಂದ ಮಾತುಗಳು ಹೆಚ್ಚು ಕಡಿಮೆ ಎಲ್ಲ ಪ್ರಾಂತಗಳಿಗೂ ಅನ್ವಯಿಸುವಂಥವೆ. ಕಾಂಗ್ರೆಸ್ ಸಂಸ್ಥೆಯೂ ನಾಯಕರೂ ಮಂತ್ರಿಗಳೂ ಜನತೆಯ ವಿಶ್ವಾಸದ ಒಂದಂಶವನ್ನಾದರೂ ಉಳಿಸಿಕೊಳ್ಳುವ ಆತುರವುಳ್ಳವರಾಗಿದ್ದರೆ ಈ ಮಾತುಗಳ ಕಡೆ ಲಕ್ಷ್ಯ ಹೊರಳಿಸಿ ಅವನ್ನು ತಿದ್ದಲು ತಕ್ಷಣ ಪ್ರವೃತ್ತರಾಗುವದವಶ್ಯ. ವಕೀಲರು ಈ ಬಗೆಯಾಗಿ ಜನಸಾಮಾನ್ಯರ ಪರವಾಗಿ ಎದ್ದು ನಿಂತರೆ ಮನಬಂದಂತೆ ಆಡಳಿತ ಸಾಗಿಸುವವರ ದಾರಿ ಅಷ್ಟು ಸರಳವೆನಿಸದು.

ಆರ್. ಎಸ್. ಎಸ್. ಶತಕೃತ್ಯ

ಹತ್ತು ತಿಂಗಳ ಹಿಂದೆ ಗಾಂಧೀಜಿಯ ಕೊಲೆಯಾದ ನಂತರ ಪ್ರತಿಬಂಧಿಸಲ್ಪಟ್ಟಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಆಗ ತಲೆ ತಗ್ಗಿಸಿ ಹೊಡೆತವನ್ನು ಮೌನದಿಂದ ಸ್ವೀಕರಿಸಿದ್ದರೂ ತಣ್ಣಗೆ ಕುಳಿತಿದ್ದಿಲ್ಲವೆಂಬದಕ್ಕೆ ಈಗ ದೇಶಾದ್ಯಂತವೂ ಅವರು ಪ್ರಾರಂಭಿಸಿರುವ "ಸತ್ಯಾಗ್ರಹ"ವೇ ಸಾಕ್ಷಿ. ಸಂಘದ ಸದಸ್ಯರು ಗೋಪ್ಯವಾಗಿ ಸೇರುತ್ತಲೇ ಇದರೆಂಬ ಮಾತು ಎಲ್ಲರಿಗೂ ಗೊತ್ತಿದ್ದರೂ ಸರಕಾರದವರು ಉದಾರ ಧೋರಣೆ ವಹಿಸಿದ್ದರಿಂದ ಈಗ ಸಂಘದ ಈ ಪ್ರದರ್ಶನವನ್ನೆದುರಿಸುವ ಸ್ಥಿತಿ ಬಂದಿದೆ. ಸಂಘದ "ಸತ್ಯಾಗ್ರಹ" ಅತ್ಯಂತ ಖಂಡನೀಯವಾಗಿದೆಯೆಂದು ಎಲ್ಲ ರಾಷ್ಟ್ರೀಯರೂ ಒಪ್ಪದಿರರು. ಬ್ರಿಟಿಶ ಆಳಿಕೆಯಿದ್ದಾಗ, ಭಾರತದ ವಿಭಜನೆಯಾದಾಗ ಕೂಡ ಕೈಕಟ್ಟಿ ಕುಳಿತು ತಮಾಷೆನೋಡುತ್ತಿದ್ದ ಸಂಘದ ಇತಿಹಾಸ ಈಗಿನ ಅದರ "ಹಿಂದೂ ರಾಷ್ಟ್ರೋದ್ಧಾರ"ದ ಆತುರವನ್ನು ಹೀನವಾದ ಡಂಬಾಚಾರವಾಗಿಯೂ ಅದರ "ಸತ್ಯಾಗ್ರಹ"ವನ್ನು ಶುದ್ಧ ಹೇಡಿತನದ್ದಾಗಿಯೂ ಮಾಡಿವೆ. ಎಲ್ಲ ಜಾತೀಯ ಸ್ವಯಂಸೇವಕ ಸಂಸ್ಥೆಗಳೂ ಭಾರತದಲ್ಲಿ ಪ್ರತಿಬಾಧಿತವಾಗಿರುವದರಿಂದ ಸಂಘದ ದೂರು ನ್ಯಾಯವಾದುದಲ್ಲ. ಗಾಂಧೀಜಿ ಹಿಂದೊಮ್ಮೆ ಹೇಳಿರುವಂತೆ, ಸರಕಾರಗಳು ದಾಕ್ಷಿಣ್ಯಶೀಲವಾಗಿದ್ದರೆ ನಡೆಯದು. ಸಂಘದ ಈ ಅನ್ಯಾಯವನ್ನು ಅತ್ಯಂತ ಉಗ್ರವಾಗಿ ಶಿಕ್ಷಿಸುವದು ಕ್ರಮಪ್ರಾಪ್ತವಾದುದು.

ಫೆಬ್ರುವರಿ ಕೊನೆಯೊಳಗಾಗಿ ಸೀದಾ

ಹಿಂದುಸ್ತಾನ ಸರಕಾರವು ಬರುವ ಫೆಬ್ರುವರಿ ಕೊನೆಯೊಳಗಾಗಿ ನಗರಗಳಲ್ಲೆಲ್ಲ ಸೀದಾ ಪ್ರಾರಂಭಿಸಬೇಕೆಂದು ನಿರ್ಧರಿಸಿದೆ. ೧೯೪೯ ರಲ್ಲಿ ೨೦ ಲಕ್ಷ ಟನ್ನ ಅಕ್ಕಿ ಮತ್ತು ೧೦ ಲಕ್ಷ ಟನ್ನ ಇತರ ಆಹಾರ ಧಾನ್ಯಗಳ ಕೊರತೆ ಬೀಳುವದೆಂದು ಅಂದಾಜು ಮಾಡಲಾಗಿದೆ. ಆದುದರಿಂದಲೆ ಫೆಬ್ರುವರಿ ಕೊನೆಯೊಳಗಾಗಿ ಏಳು ಕೋಟಿ ನಗರವಾಸಿಗಳಿಗೆಲ್ಲ ಸೀದಾ ಕೊಡಲಾಗುವದು. ಮುಂಬೈ ಪ್ರಾಂತದಲ್ಲಿ ಫೆಬ್ರುವರಿ ಒಳಗಾಗಿಯೂ ಮದ್ರಾಸದಲ್ಲಿ ಈ ವರ್ಷದ ಕೊನೆಯೊಳಗಾಗಿಯೂ ಬಿಹಾರದಲ್ಲಿ ಫೆಬ್ರುಅರಿ ಕೊನೆಯೊಳಗಾಗಿಯೂ ಸೀದಾ ಜಾರಿಯಲ್ಲಿ ತರಲಾಗುವದೆಂದು ತಿಳಿಯುತ್ತದೆ. ಪಂಜಾಬ, ಬಂಗಾಲ ಮತ್ತು ಆಸಾಮ ಪ್ರಾಂತಗಳಲ್ಲಿ ಸಧ್ಯದಲ್ಲಿಯೇ ನಿಯಂತ್ರಣ ಕ್ಷೇತ್ರವನ್ನು ಹೆಚ್ಚಿಸಲಾಗುವದು. ಗ್ರಾಮಾಂತರಗಳಲ್ಲಿ ಆಹಾರ ಸೀದಾ ವಿಸ್ತರಣದ ಕಾರ್ಯವನ್ನು ಆಯಾ ಪ್ರಾಂತಗಳಿಗೆ ಬಿಡಲಾಗುವದು. ಈ ಸಲ ಆಹಾರ ಧಾನ್ಯಗಳ ವಿತರಣ ಯೋಗ್ಯ ರೀತಿಯಿಂದ ನಡೆಯುವಂತೆ ನೋಡಿಕೊಳ್ಳಲು ಪ್ರಾಂತಗಳಿಗೆ ಕೇಂದ್ರದಿಂದ ಆಹಾರ ಪದಾರ್ಥಗಳನ್ನು ಒದಗಿಸಲಾಗುವದು. ಜನೇವರಿ ಬಗ್ಗೆ ೧೮೦ ಸಾವಿರ ಟನ್ನ ಧಾನ್ಯ ಕೊಡಲಾಗುತಿದ್ದು ಅದರಲ್ಲಿ ಮುಂಬಯಿಯ ಸೀದಾ ೮೦ ಸಾವಿರ ಮತ್ತು ಮದ್ರಾಸಿನದು ೧೪ ಸಾವಿರ ಟನ್ನು ಇದೆ. ನವೆಂಬರದಲ್ಲಿ ೨೨೩ ಸಾವಿರ ಟನ್ನು ಪರದೇಶಗಳಿಂದ ಆಯಾತ ಮಾಡಿಕೊಳ್ಳಲಾಗಿದ್ದು ಡಿಸೆಂಬರದಲ್ಲಿ ೩೪೧ ಸಾವಿರ ಟನ್ನಿಗೆ ತಲ್ಪುವದು. ಒಟ್ಟಾರೆ ಮುಂದಿನ ವರುಷದಲ್ಲಿ ೧೦೦ ಕೋಟಿ ರೂಪಾಯಿಗಳ ಆಹಾರ ಧಾನ್ಯಗಳನ್ನು ಪರದೇಶಗಳಿಂದ ತರಿಸಬೇಕಾಗುವದು. ಪ್ರಕಟವಾದ ಈ ವಿವರಣೆಯನ್ನು ನೋಡಿದರೆ ಹಿಂದುಸ್ತಾನದಲ್ಲೆಲ್ಲ ಬರುವ ಮೂರು ತಿಂಗಳುಗಳಲ್ಲಿ ಸೀದಾ ಪದ್ಧತಿ ಜಾರಿಯಲ್ಲಿ ಬರುವದೆಂಬುದು ಸ್ಪಷ್ಟವಾಗುವದು. ಸಧ್ಯದಲ್ಲಿ ಸೀದಾ ಪದ್ಧತಿ ಬೇಡ ಎಂದು ಎಷ್ಟೊಂದು ಕಂಠಶೋಷ ಮಾಡಿದರೂ ಸರಕಾರದವರು ಅತ್ತ ಗಮನಿಸದೆ ಸೀದಾ ಜಾರಿಯಲ್ಲಿ ತರುವ ಕಾರ್ಯಕ್ರಮವನ್ನು ಭರದಿಂದ ಮುಂಬರಿಸಿದ್ದಾರೆ. ಒಳ್ಳೆ ಕಾಳುಗಳು, ಸಕಾಲಕ್ಕೆ, ಸಾಕಷ್ಟು ಜನತೆಗೆ ಸಿಕ್ಕುವಂತೆ ನೋಡಿಕೊಳ್ಳುವದೂ ಅಂಚಗುಳಿತನ, ಲಾಭಬಡಕತನ ಎಲ್ಲಿಯೂ ತಲೆಯಿದಂತೆ ಮಾಡುವದೂ ಸರಕಾರದ ಹೊಣೆ.

ವಿದೇಶೀ ಉದ್ದಿಮೆಗಾರರು

ಬ್ರಿಟಿಶರ ಛತ್ರಛಾಯೆದಲ್ಲಿ ಮನೆಮಗಳ ರಾಣಿಯ ಮಗನಂತೆ ನಡೆಸಿಕೊಳ್ಳಲ್ಪಡುತಿದ್ದ ವಿದೇಶಿ, ಮುಖ್ಯವಾಗಿ ಬ್ರಿಟಿಶ, ಉದ್ದಿಮೆದಾರರು ಈಗ ಒಮ್ಮಿಂದೊಮ್ಮೆ ತಬ್ಬಲಿಗಳಂತಾಗಿ ಗಾಬರಿಯಾಗಿರುವದು ಸ್ವಾಭಾವಿಕ. ಮೇಲಾಗಿ ವಿದೇಶಿ ಬಂಡವಳವನ್ನು ರಾಷ್ಟ್ರೀಕರಿಸಿ ಬಿಡಬೇಕೆಂದು ಸಾಮ್ಯವಾದಿಗಳು ಕೂಗೆಬ್ಬಿಸಿದ್ದಾರೆ ಮುಖ್ಯಮಂತ್ರಿ ನೆಹರು ಕೂಡ ಪ್ರಚ್ಛನ್ನ ಸಾಮ್ಯವಾದಿಯೆಂದು ಸಂಶಯ ಬೇರೆ ಇದೆ. ಅದರಿಂದ ಕಳೆದ ವಾರ, ಈಚೀಚೆಗಿನ ವರೆಗೆ ವೈಸರಾಯರಿಗಿಂತ ಕೆಳ ದರ್ಜೆಯವರನ್ನು ಪ್ರಾರಂಭ ಭಾಷಣಕ್ಕೆ ಕರೆಯಲು ಹೇಸುತಿದ್ದ ಕಲಕತ್ತೆಯ ವಣಿಕ್ ಸಂಘಗಳ ಮಹಾಮಂಡಲದ ವಾರ್ಷಿಕ ಸಭೆಯ ನಿಯಂತೃಗಳು, ಈ ಬಾರಿ ಬರಿ ಭಾರತೀಯರಾದ ಅರ್ಥ ಸಚಿವ ಜಾನ್ ಮಥಾಯರನ್ನು ಕರೆದು, ಅವರ ಮುಂದೆ ತಮ್ಮ ಭಯ ಆಶಂಕೆಗಳನ್ನೂ ತಾವು ಮೊದಲನೆ ಹೆಂಡತಿಯ ಮಗನಂತೆ ನಡೆಸಿಕೊಳ್ಳಲ್ಪಡುತಿರುವದನ್ನೂ ತೋಡಿಕೊಂಡರು. ನಮ್ಮ ಅರ್ಥ ಸಚಿವರು ಅವರ ಭಯವನ್ನು ನಿವಾರಿಸಿ ವಿದೇಶೀ ಬಂಡವಳದ ಸಹಾಯವಿಲ್ಲದೆ ಈ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಲಾರದಾದುದರಿಂದ ಅವರು ತಮ್ಮ ಬಂಡವಾಳದ ಸುರಕ್ಷಿತತೆಯ ಕುರಿತು ಯಾವ ಶಂಕೆಯನ್ನೂ ಹಚ್ಚಿಕೊಳ್ಳಬೇಕಿಲ್ಲವೆಂದು ಆಶ್ವಾಸನ ಕೊಟ್ಟರೂ ವಿದೇಶೀ ಬಂಡವಳಗಾರರು ಭಾರತದ ಆರ್ಥಿಕ ಧೋರಣೆಯನ್ನನುಸರಿಸಿಯೆ ಇಲ್ಲಿ ವ್ಯವಹರಿಸಬೇಕೆಂಬ ಅಂಶವನ್ನು ಮೊನೆಯಾಗಿ ಹೇಳಿದ್ದಲ್ಲದೆ, ವಿದೇಶಿ ಸಂಸ್ಥೆಗಳು ಅವುಗಳಲ್ಲಿ ನೌಕರಿ ಹಿಡಿದ ಮತ್ತು ಶಿಕ್ಷಣ ಪಡೆಯಬಂದ ಭಾರತೀಯರನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಳ್ಳುತ್ತಿಲ್ಲನೆಂಬ ಪ್ರತಿದೂರನ್ನು ಕೊಟ್ಟರು ಅರ್ಥಮಂತ್ರಿಗಳ ಮಾತುಗಳು ವಿದೇಶಿ ಬಂಡವಳಗಾರರಿಗೆ–ಅವರಲ್ಲಿ ಬಂಡವಳ ತೊಡಗಿಸಲಪೇಕ್ಷಿಸುವ ಅಮೇರಿಕನ್ನರೂ ಸೇರಿದರು–ಸ್ವಾಗತ ಮತ್ತು ಆಶ್ವಾಸನವಾಗಿದ್ದಂತೆ ಅವರ ಚರ್ಯೆಯ ಬಗ್ಗೆ ಎಚ್ಚರಿಕೆಯೂ ಆಗಿದೆ. ಕಳೆದ ತಿಂಗಳಲ್ಲಿ ಮುಂಬಯಿಯಲ್ಲಿ ಅಮೇರಿಕೆಯ ಉಪ–ಪ್ರತಿನಿಧಿಗಳಾಗಿರುವ ಡಾ. ಗೆರೆನ್ನರು, ಅಮೇರಿಕನ್ ಬಂಡವಳಗಾರರು ತಮ್ಮ ಬಂಡವಳದ ಸುರಕ್ಷಿತತೆಯ ಬಗ್ಗೆ ಸಂಶಯವಿದ್ದುದರಿಂದಲೇ ಭಾರತದಲ್ಲಿ ಹಣತೊಡಗಿಸಲು ಹೆದರುತಿರುವದಾಗಿ ಹೇಳಿದ್ದರು. ಡಾ. ಮಥಾಯರ ಭಾಷಣ ಆ ಸಂಶಯವನ್ನು ಸಮಾಧಾನಪಡಿಸಲು ಸಾಕೆಂದು ತೋರುತ್ತದೆ. ಇನ್ನು ಅಮೇರಿಕೆ ಭಾರತಗಳು ಆರ್ಥಿಕ ಕ್ಷೇತ್ರದಲ್ಲಿ "ಪರಸ್ಪರಂ ಭಾವಯಂತಃ" ಎಂದು ನೆರವಾಗಲು ಯಾವ ಅಡ್ಡಿಯೂ ಇಲ್ಲ.

ಐಕ್ಯಕ್ಕಾಗಿ

ಕಳೆದ ಫೆಬ್ರುವರಿಯಲ್ಲಿ "ಹರಿಜನ" ಪತ್ರಿಕೆಯನ್ನು ಮುಂದೆ ನಡೆಸಬೇಕೋ ಬೇಡವೋ ಎಂಬ ಪ್ರಶ್ನೆ ಚರ್ಚೆಗೆ ಬಂದಾಗ, ಅದನ್ನು ನಿಲ್ಲಿಸಿ ಬಿಡುವದಕ್ಕೇ ನನ್ನ ಬಲವಾದ ಒಲವಿತ್ತು. ಅದರ ಸ್ಥಾನದಲ್ಲಿ, ಹೆಚ್ಚು ಕಡಮೆ ಅದೇ ದಾರಿಯನ್ನನುಸರಿಸಿದ ಬೇರೊಂದು ಪತ್ರಿಕೆಯನ್ನು ಪ್ರಾರಂಭಿಸಬೇಕೆಂದು ನನ್ನ ಅಭಿಮತವಾಗಿತ್ತು. ಆಗ, ಬಾಪುವಿನೊಡನೆ ಅಷ್ಟು ಪರಿಪೂರ್ಣವಾಗಿ ಸಂಬದ್ಧವಾದ ಮತ್ತು ಅವರಿಗೆ ಪಾವನವೆನಿಸಿದ ಆ ಹೆಸರು, ಆ ರೀತಿ, ಆ ಪುಟ್ಟ ಪತ್ರಿಕೆಯ ಘನತರವಾದ ಕೀರ್ತಿ ಇವುಗಳನ್ನು ಉಪಯೋಗಿಸಿಕೊಳ್ಳದೆ ನಾವೇ ಸ್ವಪ್ರಯತ್ನದಿಂದ ಕೆಲಸ ಮಾಡಿದಂತಾಗುತಿತ್ತು. ಮೂಲ ರೂಪದಲ್ಲಿ "ಹರಿಜನ" ಮುಂದುವರಿಯುವದು ನನಗಂತೂ ಅಕಲ್ಪನೀಯವಾಗಿತ್ತು. ಅದುದರಿಂದ ಅದನ್ನು ನಡೆಸಿಕೊಂಡು ಹೋಗಬೇಕೆಂದೇ ತೀರ್ಮಾನವಾದಾಗ ಅದಕ್ಕೆ ಲೇಖ ಬರೆಯಲು ನನಗೆ ಮನಸೇ ಬರಲಿಲ್ಲ. ಏಕೆಂದರೆ, ಅನೇಕ ವರ್ಷಗಳಿಂದ "ಹರಿಜನ" ದಲ್ಲಿ ಪ್ರಸಿದ್ಧವಾಗಬೇಕಾದ ಪ್ರತಿಯೊಂದು ಶಬ್ದವೂ ಬಾಪುವಿನ ಕಣ್ಣಿಂದೆ ಹಾದು ಹೋಗುತಿತ್ತು; ಮಹಾದೇವನು ಕೂಡ ಅವರ ಸಂಪಾದಕೀಯ ಲೇಖನಿಯ ಅಭಾವದಿಂದ ಪಾರಾಗಿರಲಿಲ್ಲ. "ಹರಿಜನ"ಕ್ಕೆ ಬಂದ ಇತರರ ಲೇಖಗಳನ್ನು ಅವಲೋಕಿಸುತ್ತ ಕುಳಿತ ಬಾಪುವಿನ ಮುಖವನ್ನು ನೋಡುತ್ತ ನಾನೆಷ್ಟು ಬಾರಿ ಅವರ ಸಮೀಪದಲ್ಲಿ ಕುಳಿತಿದ್ದಿಲ್ಲ! ಅಂಥ ಸಮಯಗಳಲ್ಲಿ ಅವರು ಸಂಪೂರ್ಣ ಏಕಾಗ್ರಚಿತ್ತರಾಗಿರುತಿದ್ದರು. ಪುನಃ ಓದುವದಾಗಲಿ, ಚಿಂತಿಸುವದಾಗಲಿ ಅವರಿಗೆ ಅವಶ್ಯ ಬೀಳುತ್ತಲೇ ಇರಲಿಲ್ಲ. ಸಾವಧಾನವಾಗಿ, ಶಬ್ದಗಳನ್ನು, ವಾಕ್ಯಗಳನ್ನು ಅಥವಾ ಇಡಿ ಇಡಿ ವಾಕ್ಯಪುಂಜಗಳನ್ನು ಹೊಡೆದು ಹಾಕಿ ಆ ಸ್ಥಾನದಲ್ಲಿ ತಮ್ಮ ಒಂದೆರಡು ಶಬ್ದಗಳನ್ನು ಇರಿಸುತಿದ್ದರು. ಒಮ್ಮೊಮ್ಮೆ ಸ್ವಯಂ ಮಹಾದೇವನು ತನ್ನ ಲೇಖಗಳ ಮೇಲೆಯೆ ನಡೆಯುವ ಇಂಥ ಕತ್ತರಿ ಪ್ರಯೋಗವನ್ನು ನಿರೀಕ್ಷಿಸುತ್ತ ಕುಳ್ಳಿರಬೇಕಾಗುತಿತ್ತು; ತಾನು ಬರೆದ ವಾಕ್ಯ ವಾಕ್ಯಗಳ ಮೇಲೆಯೆ ಬಾಪುವಿನ ನಿರ್ದಯ ಲೇಖನಿಧಾರೆ ಓಡುತ್ತಿರುವದನ್ನು ನೋಡಿ ಅವನ ಕಂಠದಿಂದ ಅಸ್ಪಷ್ಟದ ಇಲ್ಲವೆ ಕಿಂಚಿತ್ ನಿರಾಶೆಯ ಗುಟುರು ಹೊರಬೀಳುತಿದ್ದುದುಂಟು. ಆ ಮೇಲೆ, ಬಾಪು ತಮ್ಮ ತಿದ್ದುಪಾಡುಗಳನ್ನು ಬರೆಯತೊಡಗಿದಾಗ ಅವನು ಮುಂದೆ ಬಗ್ಗಿ, ತಾನು ಒಂದು ಇಡಿ ಪರಿಚ್ಛೇದದಲ್ಲಿ ಬರೆದ ಭಾವವನ್ನು ಸ್ವಲ್ಪದರಲ್ಲೆ ವ್ಯಕ್ತಗೊಳಿಸಲು ಅವರು ಯಾವ ಶಬ್ದಗಳನ್ನು ಉಪಯೋಗಿಸುತಿರಬಹುದೆಂದು ನಿತಾಂತ ಕುತೂಹಲದಿಂದ ಹಣಕುತಿದ್ದನು!

ಇಂಥ ವಿಚಾರಗಳೂ ಪವಿತ್ರಸ್ಮೃತಿಗಳೂ ಬರೆಯುವ ನನ್ನ ಕೈಯನ್ನು ಈ ವರೆಗೆ ತಡೆದಿದ್ದವು. ಇಲ್ಲದಿದ್ದರೆ, ಶ್ರೀ ಕಿಶೋರಲಾಲಭಾಯಿಯವರಂಥ ಹಳೆ ಗೆಳೆಯರು ತಮ್ಮ ದುಸ್ಸಹ ಅನಾರೋಗ್ಯದ ನಡುವೆಯೂ ತಮ್ಮ ದುರ್ಬಲ, ಆದರೂ ಅವಿಶ್ರಾಂತ ಭುಜಗಳ ಮೇಲೆ ಈ ಪತ್ರಿಕೆಯ ಸಂಪಾದಕತ್ವದ ಭಾರವನ್ನು ಹೊತ್ತಿರುವಾಗ ಅವರಿಗೆ ಸಹಾಯದ ಕೈ ನೀಡಲು ನನಗೆ ಆನಂದವೇ ಆಗುತಿತ್ತು. ಆದರೆ ಈಚೆಗೆ ಪಶುಲೋಕದಿಂದ ಹೊರಬಿದ್ದು ದಿಲ್ಲಿಯಲ್ಲಿ ಹತ್ತು ದಿನಗಳನ್ನು ಕಳೆಯುತಿದ್ದಾಗ ನಮ್ಮ ನಮ್ಮಲ್ಲಿನ ಸಹಕಾರಾಭಾವದ ವರ್ತನೆಯನ್ನು ನೆನೆದು ಚಿಂತಾಕ್ರಾಂತಳಾದೆ. ವಿನೋಬಾ ಎಲ್ಲಿ ಹೋದರೋ ಹೇಳುವವರಿದ್ದಿಲ್ಲ, ಕುಮಾರಪ್ಪನವರು ಎಲ್ಲಿ ಕಣ್ಮರೆಯಾಗಿದ್ದರೋ ಯಾರಿಗೂ ಗೊತ್ತಿದ್ದಿಲ್ಲ, ಕೃಪಾಲಾನಿಯವರ ಪತ್ತೆಯೇ ಇದ್ದಿಲ್ಲ, ಪ್ಯಾರೇಲಾಲರ ಕಾರ್ಯಕ್ರಮ ಅಜ್ಞಾತವಾಗಿತ್ತು, ಇತ್ಯಾದಿ. ನಮ್ಮ ಚಟುವಟಿಕೆಗಳೂ ನಮ್ಮ ಹಾಗೇ ಪರಸ್ಪರ ಅಸಂಬದ್ಧವಾಗಿದ್ದವು. ಬಾಪುವೇ ಕೇಂದ್ರ ಶಕ್ತಿಯಾಗಿದ್ದು, ಅವರ ಸುತ್ತಲೂ ನಾವು ಸಾಮಾನ್ಯ ಭಕ್ತಿಯಿಂದ ನೆರೆದಿದ್ದೆವು. ಅವರ ಭೌತಿಕ ಶರೀರ ಉಳಿದಿಲ್ಲೆಂಬ ಕಾರಣದಿಂದ ನಾವು ಆ ಸಂಬಂಧವನ್ನು ಕಳೆದುಕೊಳ್ಳಬೇಕೆ? ಅದೀಗ ಜಾರಂತಗಳಲ್ಲಿ ದುರಂತವೆನಿಸೀತು. ಏಕೆಂದರೆ ಬಾಪುವಿನ ಹೆಸರಲ್ಲಿ ನಾವು ಕಟ್ಟಬಹುದಾದ ಅತ್ಯುನ್ನತ ಸ್ಮಾರಕವೆಂದರೆ ನಮ್ಮೊಳಗಿನ ಸ್ನೇಹೈಕ್ಯ, ಮತ್ತು ಕರ್ಮೈಕ್ಯ. ನಮ್ಮ ವಾರಪತ್ರಿಕೆ ಸಹಜವಾಗಿ ನಮ್ಮ ವಿಚಾರಗಳ ಸಂಗಮಕ್ಷೇತ್ರವಾಗಬೇಕು. ಆದುದರಿಂದಲೇ ಮೇಲೆ ಹೇಳಿದ ಭಾವನೆಗಳಿದ್ದರೂ ನಾನು ತಿರುಗಿ ಈ ಪತ್ರಿಕೆಯಲ್ಲಿ ಪ್ರತ್ಯಕ್ಷಗಳಾಗಲು ಮನಸು ಮಾಡಿದ್ದೇನೆ.

ನಾವು ಹಳೆಗಾಲದಲ್ಲಿ ಸ್ವತಂತ್ರ ಭಾರತಕ್ಕಾಗಿ ಕನಸಿನಲ್ಲಿ ಕೂಡ ಕಲ್ಪಿಸಿರದಂಥ ಸಿದ್ಧಾಂತಗಳೂ ಧೋರಣಗಳೂ ಇಂದು ಸುತ್ತಲಿಲ್ಲ ತಲೆಯೆತ್ತಿವೆ. ಈ ಪ್ರಗತಿಯ ಮತ್ತು ವಿಲಯದ ಕಾಲದಲ್ಲಿ ಇನ್ನೂ ಶ್ರದ್ಧಾಳುಗಳಾಗಿ ಉಳಿದ ನಮ್ಮಂಥವರು ಕೊನೆಯ ವರೆಗೂ ಒಗ್ಗಟ್ಟಾಗಿ ಸಾಗುವದು ಕರ್ತವ್ಯ. ನಾವು ಸಮುದ್ರ ಮಧ್ಯದಲ್ಲಿ ಹಡಗೊಡೆದು ನೀರುಪಾಲಾಗಿ ಒಂದು ಕೈಯಲ್ಲಿ ತುಣುಕು ಹಲಗೆಯನ್ನೂ ಇನ್ನೊಂದರಲ್ಲಿ ಅಮೂಲ್ಯ ರತ್ನಮಂಜೂಷೆಯನ್ನೂ ಹಿಡಿದು ಭಯಾನಕ ಚಂಡಮಾರುತವನ್ನೆದುರಿಸುವ ನಾವಿಕರಂತಾಗಿದ್ದೇವೆ. ಆದರೆ ನಮ್ಮ ತಲೆಯ ಮೇಲೊಂದು ನಕ್ಷತ್ರವಿದೆ, ಅದನ್ನನುಸರಿಸಿಯೇ ನಮ್ಮ ಹಲಗೆ ತೇಲುತ್ತದೆ. ಎಲ್ಲಿವರೆಗೆ ನಾವು ಅದನ್ನು ಬಿಗಿಯಾಗಿ ಅಪ್ಪಿಕೊಂಡಿರುವೆವೊ ಆ ವರೆಗೆ ಎಂಥ ತೆರೆಗಳೂ ನಮ್ಮನ್ನು ಮುಳುಗಿಸಲಾರವು. ಎಂಥ ದುರ್ಧರ ಪ್ರಸಂಗವೂ ಸತ್ಯವೆಂಬ ನಮ್ಮ ಅಮೂಲ್ಯ ಮಂಜೂಷೆ ಸಹಿತ ರೇವು ಸೇರದಂತೆ ನಮ್ಮನ್ನು ತಡೆಯಲಾರವು.

ಪಶುಲೋಕ
೨-೧೨-೪೮ —ಮೀರಾ ಬೆನ್

(ಮೀರಾ ಬೆನ್ನಳ ಪುನರಾಗಮನವನ್ನು ಓದುಗರು ಸ್ವಾಗತಿಸುವರೆಂದು ಖಂಡಿತವಾಗಿ ನಂಬಿದ್ದೇನೆ. —ಕಿ. ಘ. ಮ.)

ಭಾರತದ ಸ್ವಾತಂತ್ರ್ಯ ರಕ್ಷಣೆಯ ಉಪಾಯ

ಪುಣೆಯ ಗ್ರಾಮೋದ್ಧಾರದ ಪ್ರಮುಖ ಕಾರ್ಯಕರ್ತರಾದ ಪ್ರೊ. ಎಸ್. ಆರ್. ಭಾಗವತರು ಭಾರತದ ಸ್ವಾತಂತ್ರ್ಯ ರಕ್ಷಣೆಯ ಬಗೆ ಕೆಲವು ಸೂಚನೆಗಳನ್ನು ಕಳಿಸಿದ್ದು, ಅವುಗಳ ಸಾರಾಂಶ ಹೀಗಿದೆ:—

(೧) ಒಂದು ಕ್ಷಣವೂ ತಡಮಾಡದೆ ಹಿಂದುಸ್ತಾನವು ಎಲ್ಲ ಬಗೆಯ ನೈಸರ್ಗಿಕ ಮತ್ತು ಭೌಗೋಲಿಕ ಶಕ್ತಿ ಸಂಪದಗಳನ್ನು ಪರಮಾವಧಿ ಲಾಭದೃಷ್ಟಿಯಿಂದ ಒಟ್ಟುಗೂಡಿಸಬೇಕು, ಬೆಳೆಸಬೇಕು, ಈ ಮೂಲಕ ಅನ್ನ ವಸ್ತ್ರ ಮತ್ತು ಇನ್ನುಳಿದ ಜೀವನಾವಶ್ಯಕ ಪದಾರ್ಥಗಳ ವಿಷಯದಲ್ಲಿ ಭಾರತವು ಸ್ವಾವಲಂಬಿಯಾಗಿ ಪ್ರತಿಯೊಬ್ಬ ನಾಗರಿಕನ ಜೀವನವು ಸುಖಸಮೃದ್ಧವಾಗಿರುವಂತೆ ಮಾಡಬೇಕು.

(೨) ಸುಶಿಕ್ಷಿತ ಭಾರತೀಯರು, ಅವರಲ್ಲಿಯೂ ಭೌತಿಕಶಾಸ್ತ್ರಜ್ಞರೂ ಯಂತ್ರಜ್ಞರೂ ತಂತ್ರಜ್ಞರೂ ಸಂಕುಚಿತ ಅನೀತಿಕರ ವೃತ್ತಿಯನ್ನು ತೊರೆದು, ಇಷ್ಟು ದಿನಗಳ ವರೆಗಿನ ವಿದೇಶೀಯ ಮೋಹಜಾಲವನ್ನು ಹರಿದು ದೇಶದ ಹಿತಅಭಿವೃದ್ಧಿಗಳೇ ತಮ್ಮ ಹಿತಅಭಿವೃದ್ಧಿಗಳೆಂದು ಬಗೆದು, ತಮ್ಮ ವೈಯಕ್ತಿಕ ಹಿತಸಂಬಂಧಗಳನ್ನು ಭಾರತದ ಅಸಂಖ್ಯಾಕ ಜನಸಾಮಾನ್ಯರ ಹಿತದಲ್ಲಿ ವಿಲೀನಗೊಳಿಸಲು ಮುಂದೆ ಬರಬೇಕು.

(೩) ಭಾರತೀಯರ ಬಡತನ, ಅಜ್ಞಾನ, ಶಾರೀರಿಕ ದೌರ್ಬಲ್ಯ, ದೇಶದ ಪ್ರಾಕೃತಿಕ ಉತ್ಪಾದಕ ಸಂಪದವನ್ನು ದುರ್ಲಕ್ಷಿಸುವಿಕೆ, ವಿಶಾಲ ದೃಷ್ಟಿಯ ಅಭಾವದಿಂದ ತಜ್ಞರು ಮೂಲೆಗುಂಪಾಗಿ ಕುಳಿತಿರುವ ದುಸ್ಥಿತಿ, ಇವುಗಳನ್ನೆಲ್ಲ ಅನುಲಕ್ಷಿಸಿ, ಪರೀಕ್ಷಿಸಿ, ಇವಕ್ಕೆ ಹೊಂದುಗೂಡುವಂತೆ ಕಾರ್ಯಪದ್ಧತಿಯನ್ನು ನಿರ್ಧರಿಸಬೇಕಲ್ಲದೆ ತಕ್ಕ ಶಾಸನಗಳನ್ನೂ ರಚಿಸಬೇಕು.

(೪) ಈ ಕೆಳಗೆ ಕಾಣಿಸಿದ ದುಶ್ಚಕ್ರದಿಂದ ಪಾರಾಗಲು ನಿರ್ಧಾರದಿಂದಲೂ ಧೈರ್ಯದಿಂದಲೂ ಪರಮಾವಧಿ ಪ್ರಯತ್ನ ಮಾಡುವದು ಅಗತ್ಯ.

(ಅ) ಏರಿಕೆಯ ಬೆಲೆಗಳು ಹಾಗೂ ಹೀಗ ಬಾರದ ಮಿತಿಮೀರಿದ ಜೀವನದ ವೆಚ್ಚ.

(ಆ) ಏರುತ್ತಿರುವ ಕೂಲಿ, ಸಂಬಳ, ಪ್ರತಿಫಲ.

(ಇ) ದಿನದಿನಕ್ಕೂ ಹೆಚ್ಚುತ್ತಿರುವ ಕರಭಾರ.

(ಈ) ನಿಜವಾಗಿ ಸಂಪದಭಿವೃದ್ಧಿ ಮಾಡುವವರು ದಿನದಿನಕ್ಕೂ ಕೂಳಿಲ್ಲದೆ ಬಳಲುತ್ತಿರುವದನ್ನೂ ಸಂಘಟನಾ ಶಕ್ತಿಯಿಲ್ಲದೆ ವಿಶೃಂಖಲರಾಗುತ್ತಿರುವದನ್ನೂ ತಡೆಗಟ್ಟುವದು.

(ಉ) ಫಲಪ್ರದ ಭೂಮಿಯನ್ನೂ ನೈಸರ್ಗಿಕ ಸಂಪದುತ್ಪಾದಕ ಸಾಧನಗಳನ್ನೂ ದಿನದಿನವೂ ಅಲಕ್ಷಿಸಲಾಗುತ್ತಿದ್ದು ಈ ಮೂಲಕ ಆಗುವ ನಾಡಿನ ಈ ಧನಕ್ಷಯವನ್ನೂ ಅನ್ನನಾಶವನ್ನೂ ತಡೆಗಟ್ಟಬೇಕು.

(ಊ) ಜೀವನಾವಶ್ಯಕ ಪದಾರ್ಥಗಳ ಉತ್ಪಾದನೆಯು ದಿನದಿನಕ್ಕೂ ಕುಗ್ಗುತ್ತಿದ್ದನ್ನು ಸರಿಪಡಿಸಬೇಕು.

ಇವುಗಳನ್ನು ನಿಯಂತ್ರಣದಲ್ಲಿ ತರಲು ಕೂಡಲೇ ತಾತ್ಕಾಲಿಕ ಯೋಜನೆಗಳನ್ನು ಕೈಕೊಳ್ಳಬೇಕು. ಮನುಷ್ಯಬಲ, ಪಶುಬಲ, ವಿದ್ಯುದ್ಬಲ, ಯಂತ್ರಬಲ ಇವನ್ನೆಲ್ಲ ಒಟ್ಟುಗೂಡಿಸಿ ನಾಡಿಗೆ ಒದಗುತ್ತಿರುವ ಹಾನಿಯನ್ನು ತಡೆಗಟ್ಟಬೇಕಲ್ಲದೆ ಕ್ರಮೇಣ ಯೋಗ್ಯವಾದ ದೀರ್ಘಕಾಲದ ಯೋಜನೆಗಳನ್ನು ಕೈಕೊಂಡು ಫಲಪ್ರದವಾದ [illegible] ಮಾಡಿ ಕಾರ್ಯವನ್ನು ಪ್ರಾರಂಭಿಸಬೇಕು.

(೫) ವಿದೇಶೀಯರ [illegible] ಈ ಸಂಸ್ಥಾನದ [illegible] ಜನಸಾಮಾನ್ಯರ [illegible] ಅವರ [illegible] ಅಭಿವೃದ್ಧಿಗೂ ಅವರ [illegible] ವಿಶಾಲವಾಗಿದೆ.

[illegible] ಸೂಚನೆಗಳನ್ನು [illegible] ಎಲ್ಲ [illegible] ಪ್ರೊ. ಭಾಗವತರು [illegible] ಪ್ರತ್ಯಕ್ಷ [illegible] ತಿಳಿಯಬಯಸಿದ್ದಾರೆ. ಆ [illegible] ಪ್ರೊ. ಭಾಗವತರು ತಾವು [illegible] ಕಾರ್ಯಕ್ಷೇತ್ರದಲ್ಲಿ [illegible] ಅಭ್ಯಸಿಸಲಿದ್ದಾರೆ.

ಈ ಬಗ್ಗೆ ಆಸಕ್ತಿಯುಳ್ಳವರು ಪ್ರೊ. ಭಾಗವತರೊಡನೆ, ೨೭೩, ಸದಾಶಿವಪೇಟೆ, ಪೂನಾ ೨ ಈ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

—ಕಿಶೋರಲಾಲ ಮಶ್ರುವಾಲಾ

ಅಧಿಕಾರಿಗಳನ್ನು ಕುರಿತು ಪ್ರಶ್ನೆಗಳು

ಈ ಕೆಳಗಿನ ಪ್ರಶ್ನೆಗಳನ್ನು ಬೇರೆ ಬೇರೆ ಪತ್ರಕರ್ತರು ನನಗೆ ಹಾಕಿದ್ದಾರೆ. ಅವುಗಳಲ್ಲಿ ಕೆಲವು ಮೇಲಿಂದ ಮೇಲೆ ನನ್ನೆಡೆಗೆ ಬಹಳ ಕಾಲದಿಂದ ಬರುತ್ತಿವೆ. ಯುಕ್ತ ವಿಷಯ ಸಂಗ್ರಹವಿಲ್ಲದೆ ನಾನು ಅವುಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸದೆ ಸುಮ್ಮನೆ ಇದ್ದೆ. ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಕಾರ್ಯದ ವಿವರಣೆಯನ್ನು ಕೊಟ್ಟಾರೆಂಬ ಭರವಸೆಯಿಂದ ಅವನ್ನು ಬಹಳ ಕಾಲ ನಾನು ದೂರ ಇಟ್ಟೆ. ಆದರೆ ಅದಿನ್ನೂ ಆಗಲಿಲ್ಲ. ಜನರ ಕೇಳಿಕೆಗಳನ್ನು ನಾನು ಇನ್ನೂ ಮುಂದಕ್ಕೆ ದೂಡುವುದು ಯೋಗ್ಯವಲ್ಲವೆಂದು ತೋರುತ್ತದೆ. ಅಧಿಕೃತ ಉತ್ತರಗಳು ಬಂದರೆ ಅವನ್ನು ಬಹಳ ಸಂತೋಷದಿಂದ ನಾನು ಪ್ರಕಟಿಸುವೆನು.

೧ ಗವರ್ನರ್ ಜನರಲ್ ತೆಗೆದು ಕೊಳ್ಳುತ್ತಿರುವ ತಿಂಗಳೊಂದರ ೨೦,೦೦೦ ರೂಪಾಯಿ ಸಂಬಳವನ್ನು ವಿರೋಧಿಸುವುದು ಮುಖ್ಯವಾದದ್ದು. "ಬಹುಶಃ ನಮ್ಮ ನಾಡಿನಲ್ಲಿಯೆ ಅತ್ಯಂತ ಮಿತವ್ಯಯಿಯೂ ಸರಳ ಜೀವಿಯೂ ಆದ ಮುಖಂಡರಿಗೆ ಅಸಮರ್ಥನೀಯವಾಗುವಷ್ಟು ಹೆಚ್ಚಿನ ಸಂಬಳ ಕೊಡುವುದು, ಅತ್ಯಂತ ದೊಡ್ಡ ಅರಮನೆಯಲ್ಲಿ ವಾಸಿಸುವಂತೆ ಮಾಡಿರುವದು, ಮತ್ತು ಅನವಶ್ಯಕವಾಗಿ ಅಸಂಖ್ಯ ಶಿಬಿರವಾಸಿಗಳೊಡನೆ ಸಂಚರಿಸುವಂತೆ ಏರ್ಪಡಿಸಿರುವದು" ಇವುಗಳ ಬಗ್ಗೆ ಬಹಳ ಜನ ಪತ್ರಕರ್ತರು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ.

೨ ಮುಂಬಯಿ ಗವರ್ನರರ ಸಂಬಳ ಟೀಕಿಸಲ್ಪಟ್ಟ ಇನ್ನೊಂದು ಸಂಗತಿಯಾಗಿದೆ. ಅವರು ತಮ್ಮ ಇಚ್ಛಾನುಸಾರವಾಗಿ ತಮ್ಮ ಸಂಬಳವನ್ನು ತಿಂಗಳೊಂದಕ್ಕೆ ೧೦,೦೦೦ ದಿಂದ ೫,೫೦೦ ರೂಪಾಯಿಗಳಿಗಿಳಿಸಿ ಕೊಂಡಿದ್ದಾರೆ. ಆದರೆ ಅದು ಇನ್ನೂ ಮಿಕ್ಕ ಗವರ್ನರರಿಗಿಂತ ತಿಂಗಳಿಗೆ ೨,೫೦೦ ರಷ್ಟು ಹೆಚ್ಚೆಂದು ತಿಳಿಯುತ್ತದೆ.

೩ ಹಿಂದೀ ರಾಯಭಾರಿಗಳ ಸಂಬಳ ತಿಂಗಳೊಂದಕ್ಕೆ ೪,೦೦೦ ದಿಂದ ೧೫,೦೦೦ ರೂಪಾಯಿಗಳ ವರೆಗೆ ಇರುತ್ತದೆ; ಅದರ ಜೊತೆಗೆ ಅವರಿಗೆ ಪ್ರಾತಿನಿಧ್ಯದ ಭತ್ತೆಗಳೂ ಸಲ್ಲುತ್ತವೆ. ಅವರು ಬಹಳ ಹಣವನ್ನು ವೇತನ ಕೊಡುವುದಕ್ಕೆ ಖರ್ಚು ಮಾಡುತ್ತಾರೆಂಬ ಆರೋಪವಿದೆ; ಅಷ್ಟೇ ಅಲ್ಲ, ಈ ವೇತನ ಸಮಾರಂಭಗಳಲ್ಲಿ ಮದ್ಯವನ್ನು ಕೂಡ ಬಡಿಸಲಾಗುತ್ತದೆ. ಈ ಸಂಬಳಗಳಿಗೂ ಮದ್ಯೋಪಯೋಗಕ್ಕೂ ಏನಾದರೂ ನ್ಯಾಯವಾದ ಆಧಾರವಿರುವುದೆ? ಅದೇನು ಹಿಂದುಸ್ತಾನದ ಜನಸಾಮಾನ್ಯರ ಧೋರಣೆಗೆ ಅನುಸಾರವಾಗಿದೆಯೋ ಹೇಗೆ?

೪ ಜಯಪುರದ ಕಾಂಗ್ರೆಸ್ ಅಧಿವೇಶನದ ಪ್ರವೇಶ ಪತ್ರದ ಪ್ರಥಮಾವಧಿ [illegible] ರೂಪಾಯಿಗಳು. ಅದು ಹಿಂದುಸ್ತಾನದ ಬಡ ಜನ

[ಮುಂದಿನ ಪುಟಕ್ಕೆ]

ರಾಷ್ಟ್ರೀಯ ಸ್ವಯಂಸೇವಕ ಸಂಘ

ಈ ಸಂಸ್ಥೆಗೆ ಸಂಬಂಧಿಸಿದ ಸ್ವಲ್ಪ ವಾಙ್ಮಯ ಇತ್ತೀಚೆಗೆ ನನಗೆ ಸಿಕ್ಕಿದೆ. ಈ ಸಂಸ್ಥೆಯ ಮೇಲಿನ ಬಹಿಷ್ಕಾರವನ್ನು ತೆಗೆಯಲು ನಾನು ಬೆಂಬಲವೀಯಬೇಕೆಂಬ ಬೇಡಿಕೆಯೊಡನೆ ಅನೇಕ ಪತ್ರಕರ್ತರಿಂದ ನನಗೆ ಅದು ಬಂದಿದೆ. ಸರಕಾರ ಅದನ್ನು ಬಹಿಷ್ಕರಿಸಿದ್ದು ಅನ್ಯಾಯವೆಂಬ ಬಗ್ಗೆ ನನಲ್ಲಿ ಸಾಕಷ್ಟು ವಿಷಯಸಂಗ್ರಹವಿಲ್ಲದುದರಿಂದ ಹರಿಜನದಲ್ಲಿ ಅದರ ಉಲ್ಲೇಖ ಮಾಡುವುದು ಬೇಡವೆಂದುಕೊಂಡಿದ್ದೆ. ಕಡೆಯ ಪಕ್ಷ ಗುಜರಾತಿನಲ್ಲಿ ಈ ಸಂಸ್ಥೆಯ ಕೆಲ ಸಹಾನುಭೂತಿಪರರು ಕೆಲಸಮಾಡುತ್ತಿದ್ದಾರೆಂದು ತೋರುತ್ತದೆ. ಈ ಪರಿಸ್ಥಿತಿಯಲ್ಲಿ ನನ್ನ ಮತವನ್ನು ಸಾರ್ವಜನಿಕವಾಗಿ ಪ್ರಕಾಶಪಡಿಸುವುದು ಅಗತ್ಯವಾಗಿದೆ.

ಈ ಸಂಸ್ಥೆಯಲ್ಲಿ ಇವೆಯೆಂದು ಹೇಳಲಾದ ಹಿಂಸಾಪರ ಪ್ರವೃತ್ತಿ ಮತ್ತು ಉದ್ದೇಶ ಆದರ್ಶಗಳ ಉನ್ನತಿಯ ಬಗ್ಗೆ ನನಗೆ ಶಂಕೆಗಳಿವೆಯೆಂದು ವಿಷಾದದಿಂದ ಹೇಳಬೇಕಾಗಿದೆ. ಗಾಂಧಿಯವರ ಮರಣಕ್ಕೂ ಮೊದಲು, ಅಂದರೆ ಸುಮಾರು ೧೯೪೦ ರಲ್ಲಿಯೇ ನಾನು ಈ ಅಭಿಪ್ರಾಯಕ್ಕೆ ಬಂದಿದ್ದೆ. ೧೯೪೨—೪೪ ರಲ್ಲಿ ನಾನು ಕಾರಾವಾಸವನ್ನು ಅನುಭವಿಸುತ್ತಿದ್ದಾಗ, ಈ ಸಂಸ್ಥೆಯ ಹಿತೈಷಿಗಳೂ ಟೀಕಾಕಾರರೂ ಇದರ ಬಗ್ಗೆ ಮಾಡಿದ ವಾದಪ್ರತಿವಾದಗಳನ್ನು ಕೆಲ ಮರಾಠೀ ಮಾಸಿಕಗಳಲ್ಲಿ ಓದುವ ಸಂದರ್ಭ ನನಗೆ ಸಿಕ್ಕಿತ್ತು. ವರ್ಧಾದಲ್ಲಿಯೂ ಅದರ ಬಗ್ಗೆ ನನಗೆ ಸುದ್ದಿ ಸಿಕ್ಕುತ್ತಿತ್ತು. ಪ್ರತಿಸಲವೂ ಅದರ ಬಗ್ಗೆ ನನಗಿದ್ದ ಶಂಕೆಗಳು ಬಲವತ್ತರವಾಗುತ್ತ ಹೋದವು. ಅದರ ಉದ್ಘೋಷವಾದ "ಹಿಂದು ಧರ್ಮದ ಬಗ್ಗೆ ಪ್ರೇಮ ಮತ್ತು ಯಾರ ಬಗ್ಗೂ ದ್ವೇಷಿಸುವದಿಲ್ಲ," ಎಂಬುದರಲ್ಲಿ ಕಡೆಯ ಅರ್ಧ ನನ್ನ ಅಭಿಪ್ರಾಯದಲ್ಲಿ ನಿಜವಲ್ಲ. ನಾನು ಅದರ ಬಗ್ಗೆ ಕೇಳಿ ಮತ್ತು ಅದರ ವಾಙ್ಮಯವನ್ನು ಓದಿ ತಿಳಿದುಕೊಂಡ ಪ್ರಕಾರ ಅದಕ್ಕೆ ಮುಸಲ್ಮಾನರ ಬಗ್ಗೆ ದುರಿಚ್ಛೆ ಮತ್ತು ಅಪ್ರೀತಿಗಳಿವೆ.

ನನ್ನ ಪ್ರೀತಿಯ ಮತ್ತು ಗೌರವಸ್ಥರಾದ ಕೆಲ ಸ್ನೇಹಿತರು ಅದರ ಪ್ರಭಾವಕ್ಕೆ ಸಾಕಷ್ಟು ಸಿಕ್ಕು ಅದರ ಬಗ್ಗೆ ಸಹಾನುಭೂತಿ ತೋರುವವರಾಗಿದ್ದರು ಮತ್ತು ಅವರು ಅದರತ್ತ ನನ್ನನ್ನು ಎಳೆಯಲು ಪ್ರಯತ್ನಿಸಿದರು. ತಪ್ಪು ಮಾಡದಿರಬೇಕೆಂದು ಅವರನ್ನು ನಾನು ಎಚ್ಚರಿಸಿದೆ. ಆಗ ಅದನ್ನು ಅವರು ಮೆಚ್ಚಲಿಲ್ಲ. ಅನಂತರ ಅವರ ಅಭಿಪ್ರಾಯ ಬದಲಾಯಿತು; ಅವರೀಗ ತಾವು ಆಗ ಅದಕ್ಕೆ ಒಂದು ಬಗೆಯಿಂದ ನೆರವಿತ್ತುದು ತಪ್ಪೆಂದು ವಿಷಾದಿಸುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ರಾ. ಸ್ವ. ಸೇವಕ ಸಂಘದ ಪರವಾಗಿ ಬೇಡಿಕೊಳ್ಳಲು ನನಗೆ ಶಕ್ತಿಯಿಲ್ಲದಾಗಿದೆ.

ಮುಂಬಯಿ, ೬-೧೨-೪೮

ಕಿ. ಘ. ಮಶ್ರುವಾಲಾ

ವರ್ಧಂತಿ

"ಹುಟ್ಟಿಂಬುದು ನಿಜವಾಗಿಯೂ ಒಂದು ಕುತೂಹಲ ಕೆರಳಿಸುವ ರಹಸ್ಯವೆಂದು ಕೊಂಡಿರುವ ಮಕ್ಕಳಿಗಾಗಿ ವರ್ಧಂತ್ಯುತ್ಸವಗಳನ್ನು ಮೀಸಲಿರಿಸುವದು ಯೋಗ್ಯವೆಂದು ನನಗನಿಸುತ್ತದೆ. ನನ್ನ ವಯಸ್ಸಿನವರಿಗೆ ಕಾರ್ಯವಲ್ಲದೆ ಕಾಲಿಕ ಪಟ್ಟಿಯಲ್ಲಿರುವ ತಾರೀಕು ಮುಖ್ಯವೆನಿಸದು."

ಶ್ರೀ ಸಿ. ರಾಜಗೋಪಾಲಾಚಾರಿ

ಕ್ಷೌರಿಕರಿಂದ ಒತ್ತಾಯದ ಸೇವೆ

ಗುಜರಾತದ ಕುಂಬಾರರಿಂದ ಒತ್ತಾಯದ ಸೇವೆ (ವೇಠ) ತೆಗೆದುಕೊಳ್ಳುವ ರೂಢಿಯನ್ನು ಕುರಿತು " ಹರಿಜನ " ದಲ್ಲಿ ಹಿಂದೊಮ್ಮೆ "ಪ್ರಸ್ತಾಪ" ಬಂದಿದೆ. ಗುಜರಾತ ನಾಯಿ ಬ್ರಾಹ್ಮಣ ಸಭೆಯವರಿಂದ ವೇಠ ಪದ್ಧತಿಯನ್ನು ಕಿತ್ತುಹಾಕುವದಕ್ಕೋಸ್ಕರ ನೇಮಿಸಲ್ಪಟ್ಟ ಸಮಿತಿಯ ಕಾರ್ಯದರ್ಶಿಯಾದ ಶ್ರೀ ಪುರುಷೋತ್ತಮ ಪರೇಖರಿಂದ ಬಂದ ಈ ಕೆಳಗಿನ ಪತ್ರದಲ್ಲಿ ಗುಜರಾತದ ನಾಯಿಂದ (ಕ್ಷೌರಿಕ) ರಿಂದ ಒತ್ತಾಯದಿಂದ ಮಾಡಿಸಲ್ಪಡುವ ಸೇವೆಯ ವಿವರಗಳಿವೆ. ಅವರ ಬೇಡಿಕೆಗಳು ಅತ್ಯಂತ ನ್ಯಾಯ್ಯವಾಗಿರುವಂತೆ ತೋರುವದರಿಂದ ಅವನ್ನು ಪೂರೈಸುವಲ್ಲಿ ಯಾವ ಅಡ್ಡಿಯೂ ಇರಲಾರದು:

" ಗುಜರಾತದ ಹಳ್ಳಿಗಳಲ್ಲಿ ಒತ್ತಾಯದ ಸೇವೆಯ ಪದ್ಧತಿಯಿಂದ ಕಷ್ಟಕೊಳಗಾಗಿರುವ ವರ್ಗಗಳು ಎರಡೇ ಎರಡಿವೆ. ಅವೆಂದರೆ ವಸವೈಯಾ (ವಲಸೆಬಂದ) ಕೆಲಸಗಾರರು) ವರ್ಗಕ್ಕೆ ಸೇರಿದ ಕುಂಬಾರರು ಮತ್ತು ನಾಯಿ(ಕ್ಷೌರಿಕ)ಗಳು. ಕುಂಬಾರರು ನೀರು ಹೊತ್ತು ತರಬೇಕೆಂಬುದು ಎಲ್ಲ ಕಡೆಯೂ ಅನುಲ್ಲಂಘನೀಯ ವಿಧಿ. ಆದರೆ ಕ್ಷೌರಿಕರ ಮೇಲೆ ಇಡಿ ದಿನ ಹೊರಿಸಲ್ಪಡುವ ಅತ್ಯಂತ ಅವಮಾನಕರ ಕರ್ತವ್ಯಗಳನ್ನು ಬಣ್ಣಿಸುವಾಗ ನನ್ನ ಮೈ ನಡುಗುತ್ತದೆ.

"ಬೆಳಗಾದೊಡನೆ ಅವನು ಹಳ್ಳಿಗೆ ಬಂದ ಅಧಿಕಾರಿಯ ಮುಂದೆ ಹಾಜರಾಗಬೇಕು. ಅವನು ಮುಖ ತೊಳೆಯುತ್ತ ಹಲ್ಲು ತೊಳೆಯುತ್ತ ಇರುವಾಗ ಅವನಿಗೆ ಹಲ್ಲುಕಡ್ಡಿ, ನೀರು ಮೊದಲಾದವುಗಳನ್ನು ಕೊಡುತ್ತ ನಿಂದಿರಬೇಕು. ಆಮೇಲೆ ಹಾಲು ತಂದು ಚಹಾ ಮಾಡಿಕೊಟ್ಟು ಮನೆಯನ್ನು ಉಡುಗಿ ಸ್ವಚ್ಛ ಮಾಡಬೇಕು. ಆದಾದ ಬಳಿಕ ಅವನು ಅಧಿಕಾರಿಯ ಮೈಗೆ ಎಣ್ಣೆ ತಿಕ್ಕಿ ಅಭ್ಯಂಜನ ಮಾಡಿಸಿ, ಅವನ ಬಟ್ಟೆಗಳನ್ನು ಒಗೆಯುವನು. ಅನಂತರ ಅಧಿಕಾರಿಯ ಮಧ್ಯಾಹ್ನದ ಊಟಕ್ಕೆ ಬೇಕಾದ ಸಾಮುಗ್ರಿಗಳನ್ನು ತರಲು ಪೇಟೆಗೆ ಹೋಗಬೇಕು ಅಡಿಗೆಗೂ ಊಟಕ್ಕೂ ಉಪಯೋಗಿಸಿದ ಪಾತ್ರ ಪರಡಿಗಳನ್ನು ಅವನೇ ತಿಕ್ಕಿ ಕೊಡಬೇಕು. ಮತ್ತೆ ಮೂರು ಗಂಟೆಗೆ ಸಾಯಂಕಾಲದ ಚಹಾ ಮಾಡಿಕೊಡಲು ಅವನು ಹಾಜರಾಗಬೇಕು ಇದರ ಅಂಗವಾಗಿ ಹಾಲು, ಸಕ್ಕರೆ, ಮತ್ತು ಚಹಾ ಪುಡಿ ತರುವದು, ಕಷಾಯ ಕುದಿಸುವದು, ಅದನ್ನು ಅಧಿಕಾರಿಗೆ ಕೊಟ್ಟು ತಿರುಗಿ ಪಾತ್ರಗಳನ್ನು ತೊಳೆಯುವದು ಮುಂ ತಾ ದ ಕೆ ಲ ಸ ಗಳು ಅವನಿಗೆ ಗಂಟುಬೀಳುವವು. ಇಷ್ಟಾದ ಮೇಲೆ ಅಧಿಕಾರಿಯ ರಾತ್ರಿ ಶಯನಕ್ಕಾಗಿ ಮಂಚ, ಹಾಸಿಗೆ, ಹೊದಿಕೆ ಮೊದಲಾದವುಗಳನ್ನು ಹಳ್ಳಿಯ ಬೇರೆ ಬೇರೆ ಕಡೆಗಳಿಂದ ಬೇಡಿ ತಂದು ಅವನ್ನು ಸರಿಯಾಗಿ ಹೊಂದಿಸಿಡಬೇಕಾಗುವದು. ತಿರುಗಿ ರಾತ್ರಿ ಊಟದ ಸಾಹಿತ್ಯ ತರುವದೂ ಪಾತ್ರ ತೊಳೆಯುವದೂ ಆಗಬೇಕು. ಸಂಜೆಯ ಹೊತ್ತಿಗೆ ದೀಪ ಹಚ್ಚಲಿಕ್ಕೂ ಅವನು ಸನ್ನದ್ಧನಾಗಿರಬೇಕಲ್ಲದೆ, ರಾತ್ರಿ ಅಧಿಕಾರಿ ಮಲಗಿದೊಡನೆ ಅವನ ಕಾಲುಗಳನ್ನೊತ್ತಬೇಕು. ಇವೆಲ್ಲ ಕೆಲಸಗಳನ್ನು ಮುಗಿಸಿ ಅವನು ಮನೆಸೇರಬೇಕಾದರೆ ನಟ್ಟಿರುಳಾಗಿರುತ್ತದೆ. ಈ ಪ್ರಕಾರ, ಶತಮಾನಶತಮಾನಗಳಿಂದ ದೊಡ್ಡ ಗುಜರಾತ ಸಂಸ್ಥಾನಗಳಲ್ಲಿ ಗ್ರಾಮ ಸೇವಕರಿಂದ ಒತ್ತಾಯದ " ವೇಠ " ಸೇವೆ ಪಡೆಯುವ ದಬ್ಬಾಳಿಕೆಯ ಪದ್ಧತಿ ರೂಢವಾಗಿದೆ. ಇಷ್ಟೆಲ್ಲ ಕೆಲಸಕ್ಕೆ ಅವನಿಗೆ ದೊರೆಯುವ ಪ್ರತಿಫಲವೆಂದರೆ ವರ್ಷಕ್ಕೆ ಎಂಟು ಹತ್ತು ರೂಪಾಯಿ.

" ಒಂದೊಂದು ಹಳ್ಳಿಯಲ್ಲಿ ಕುಂಬಾರರ ಮತ್ತು ಕ್ಷೌರಿಕರ ೧೦—೧೫, ೧೦—೧೫ ಮನೆಗಳಿರುತ್ತವೆ. ಇವೆರಡೂ ಜಾತಿಯ ಜನರು ಈ ಅಸಹ್ಯ ಉಪದ್ರವವನ್ನು ತಾಳಬೇಕಾಗುತ್ತದೆ. ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆಯೂ ಇನ್ನೆಷ್ಟು ದಿನ ಇದು ಸಾಗುತ್ತ ಹೋಗಬೇಕೋ ಎಂದು ನಾವು ಆಶ್ಚರ್ಯಪಡುತ್ತಿದ್ದೇವೆ !

"ಪ್ರತಿ ಹಳ್ಳಿಗೂ ಒಬ್ಬೊಬ್ಬ ಸಂಬಳ ಪಡೆಯುವ ಕ್ಷೌರಿಕ, ಕಮ್ಮಾರ, ಬಡಗಿ, ಕುಂಬಾರರನ್ನು ನೇಮಿಸಬೇಕೆಂದು ನನ್ನ ಸೂಚನೆಯುಂಟು. ಸರಕಾರಿ ಅಧಿಕಾರಿಗಳು ಹಳ್ಳಿಗಳಿಗೆ ಭೆಟ್ಟಿಕೊಟ್ಟಾಗ ಕಮ್ಮಾರನೂ ಬಡಗಿಯೂ ಯಾವ ಸೇವೆಯನ್ನೂ ಸಲ್ಲಿಸಬೇಕಾಗಿಲ್ಲ. ಆದರೆ ಈ ಕರ್ಮಕಾರರು ಹಳ್ಳಿಯ ಒಕ್ಕಲಿಗರ ಉಪಯೋಗಕ್ಕೆ ಬೇಕಾಗಿದ್ದಾರೆ. ಹಳ್ಳಿಗಳ ಸ್ಥಾಪನೆಯಾದಾಗ ಉದ್ದೇಶಪೂರ್ವಕವಾಗಿ ಅವರನ್ನು ಅಲ್ಲಿ ನೆಲೆಗೊಳಿಸಿ ಅವರಿಗೆ ಭೂಮಿ ಕಾಣಿ ಉಂಬಳಿ ಬಿಡಲಾಗಿತ್ತು. ಈ ಭೂಮಿ ಅವರ ಪಿತ್ರಾರ್ಜಿತ ಸೊತ್ತೆಂದು ಒಪ್ಪಿಕೊಳ್ಳಬೇಕು.

" ಕ್ಷೌರಿಕರಿಗೂ ಕುಂಬಾರರಿಗೂ ಈ 'ವೇಠ' ಪದ್ಧತಿಯ ಪೀಡೆ ಗಂಟುಬಿದ್ದಿರುವದು. ಕುಂಬಾರರು ಪುಕ್ಕಟೆಯಾಗಿ ಗಡಿಗೆಗಳನ್ನು ಒದಗಿಸಬೇಕಲ್ಲದೆ ನೀರು ತಂದು ಕೊಡಬೇಕು. ಅದೇ ಪ್ರಕಾರ ಕ್ಷೌರ ಮಾಡುವದೇ ಮೊದಲಾದ ಜಾತಿಕಸುಬಿಗೆ ಸಂಬಂಧಿಸಿದ ಸೇವೆಗಳಲ್ಲದೆ ಕ್ಷೌರಿಕರು ಮೇಲೆ ಹೇಳಿದ ಸೇವೆಗಳನ್ನೂ ಮಾಡಬೇಕು. ಇವೆಲ್ಲವೂ ರೊಕ್ಕ ಕೊಟ್ಟು ಮಾಡಿಸಬಹುದಾದ ಕೆಲಸಗಳು. ಯಾವ ಜಾತಿಯವನು ಅವನ್ನು ಮಾಡಿದರೂ ಯಾರೂ ಆಕ್ಷೇಪವೆತ್ತಲಾರರು. ಮನಸ್ಸುಳ್ಳವರು ಯಾರು ಬೇಕಾದರೂ ಹಣ ತೆಗೆದುಕೊಂಡು ಇದನ್ನು ಮಾಡಬಹುದು. ಇದರ ಬದಲು ಈ ಒತ್ತಾಯದ ಸೇವೆಯನ್ನು ಲಗುತಬಲದಿಂದ ವಿಶಿಷ್ಟ ಜಾತಿಯವರಿಂದ ತೆಗೆದುಕೊಳ್ಳಲಾಗುತ್ತಿದೆ. ಅದನ್ನು ಕಿತ್ತೊಗೆಯಲು ಈ ಹಿಂದೆ ಚಳವಳಿಗಳಾದುದುಂಟು. ಈಗ ಅದನ್ನು ಕ್ಷಣವೂ ತಡ ಮಾಡದೆ ನಿವಾರಿಸಬೇಕು ; ಒತ್ತಾಯದ "ವೇಠ" ವನ್ನು ದಂಡನೀಯವಾಗಿ ಮಾಡಬೇಕು.

"ನೂರಾರು ವರುಷಗಳ ಹಿಂದೆ ಹಳ್ಳಿಗಳು ಸ್ಥಾಪಿಸಲ್ಪಟ್ಟಾಗ ಈ ಜಾತಿಗಳ ಜನರು ಆಯಾ ಹಳ್ಳಿಗಳ ಜನರ ಸಾಮಾಜಿಕ ಆರ್ಥಿಕ ಸೌಕರ್ಯಕ್ಕಾಗಿ ಅಲ್ಲಿ ನೆಲೆಗೊಳಿಸಲ್ಪಟ್ಟಿದ್ದರು. ಅವರ ಸೇವೆಗೆ ಪ್ರತಿಯಾಗಿ ಅವರಿಗೆ ಸಣ್ಣಪುಟ್ಟ ಲಾವಣಿಯಿಲ್ಲದ ಭೂಮಿಗಳನ್ನು ಉದರಂಭರಣಕ್ಕಾಗಿ ಉಂಬಳಿ ಬಿಡಲಾಗಿತ್ತು. ಈ ಜಾತಿಗಳು ಇಂದು ಹಳ್ಳಿಗಳಲ್ಲಿದ್ದು ಹಳ್ಳಿಯ ಆರ್ಥಿಕ ಜೀವನದಲ್ಲಿ ಉಪಯುಕ್ತ ಕಾರ್ಯ ಮಾಡುತ್ತಾರೆ. ಆದರೆ ಕುಂಬಾರ, ಕ್ಷೌರಿಕರಿಂದ ಮಾಡಿಸಲ್ಪಡುವ ಈ ಒತ್ತಾಯದ ಸೇವೆಯನ್ನು ಬ್ರಿಟಿಶ ಆಳಿಕೆಯಲ್ಲಿ ರೂಢಿಗೆ ತರಲಾಯಿತೆಂದು ನಂಬಲಾಗಿದೆ. ಆದುದರಿಂದ ಈ ಸೇವೆಗಳಿಗೂ ಅವರ ಉಂಬಳಿ ಹಕ್ಕಿಗೂ ಯಾವ ಸಂಬಂಧವೂ ಇಲ್ಲ. ಆದರೂ ಈ " ವೇಠ " ಮಾಡಲೊಪ್ಪದ ವಸವಯ್ಯರು ಈ ಬಗೆಯ ದಾಸ್ಯದಿಂದ ಮುಕ್ತರಾಗುವ ಸಲುವಾಗಿ ತಮ್ಮ ಭೂಮಿಯ ಮೇಲೆ ಸಾಧಾರಣ ತೆರಿಗೆಯನ್ನು ಸರಕಾರಕ್ಕೆ ತುಂಬಲು ಸಿದ್ಧರಾಗಬೇಕು.

ಮುಂಬಯಿ —ಕಿ. ಘ ಮಶ್ರೂವಾಲಾ
೯—೧೧—೪೮

ನೋಸದ ಔಷಧಗಳು

ನೋಸದ ಮತ್ತು ಬೀಭತ್ಸ ಜಾಹೀರಾತುಗಳು ಎಂಬ ತಲೆಬರೆಹದ ಲೇಖವನ್ನು ಹರಿಜನದಲ್ಲಿ ನೋಡಿ ಓರ್ವ ಡಾಕ್ಟರರು ನನ್ನ ಅವಗಾಹನೆಗಾಗಿ ಇಂಗ್ಲಂಡದ ಪತ್ರಿಕೆಯ ಒಡೆಯರ ಸಂಘದವರು ತೀರ್ಮಾನಿಸಿದ ಗೊತ್ತುವಳಿಯ ಪ್ರತಿಯೊಂದನ್ನು ಕಳಿಸಿದ್ದಾರೆ. ಅದು ಹೀಗಿದೆ:—

" ೧) ಕೆಳಗೆ ಕಾಣಿಸಿದ ರೋಗಗಳಿಗೆ ರಾಮಬಾಣವೆಂದು ಹೇಳಿಕೊಳ್ಳುವ ಜಾಹೀರಾತುಗಳನ್ನು ಸ್ವೀಕರಿಸಕೂಡದು. ಬ್ರಾಯಿಟ್ಸ ಡಿಸೀಜ, ಕ್ಯಾನ್ಸರ, ಕ್ಷಯ, ಮಧುಮೇಹ, ಅಪಸ್ಮಾರ, ಬೆನ್ನಹುರಿಗೆ ಸಂಬಂಧಿಸಿದ ರೋಗಗಳು, ರಜೋದೋಷ, ಕುಷ್ಠ, ಚೀರ ಇಳಿಯುವದು, ಅಂಧತ್ವ, ಗರ್ಭಪಾತಗೊಳಿಸುವದು ಮೊದಲಾದವುಗಳು.

" ೨) ಪತ್ರದ್ವಾರದಿಂದ ವಿವರ ತಿಳಿದು ರೋಗ ನಿದಾನಮಾಡಿ ಚಿಕಿತ್ಸೆ ಕೊಡುವೆನೆಂದು ಹೇಳುವ ಮುದ್ರಿತ ವಿಷಯದ ಮೂಲಕ ಅಥವಾ ಬಾಯಿಮಾತಿನಿಂದ ಪ್ರಸಾರಗೊಳಿಸುವಂತಹರ ಯಾವ ಜಾಹೀರಾತುಗಳನ್ನೂ ಸ್ವೀಕರಿಸಕೂಡದು.

" ೩) ಅಧಿಕೃತ ಬ್ರಿಟಿಶ ಚಿಕಿತ್ಸಕರ, ಡಾಕ್ಟರರ ಶಿಫಾರಸು ಪತ್ರಗಳಲ್ಲದೆ ಬೇರೆಯವರ ಶಿಫಾರಸುಪತ್ರಗಳನ್ನು ಜಾಹೀರಾತಿಗಾಗಿ ಸ್ವೀಕರಿಸಕೂಡದು. ಇದರಂತೆ ಯಾರಾದರೂ ವೈಯಕ್ತಿಕವಾಗಿ ಕೊಟ್ಟ ತಮ್ಮ ಸ್ವಂತದ ಅತಿರಂಜಿತವಲ್ಲದ ಶಿಫಾರಸುಗಳನ್ನಲ್ಲದೆ ಉಳಿದವುಗಳನ್ನು ಜಾಹೀರಾತಿಗಾಗಿ ಸ್ವೀಕರಿಸಕೂಡದು.

" ೪) ಮನಸ್ಸಿಗೆ ಭ್ರಮೆಯನ್ನುಂಟು ಮಾಡುವಂತಹ ಸುಳ್ಳು ಮತ್ತು ವಿದ್ರೂಪಗೊಳಿಸಲ್ಪಟ್ಟ ಅತಿವರ್ಣಿತ ಚಿತ್ರಗಳನ್ನು ಜಾಹೀರಾತಿಗಾಗಿ ಸ್ವೀಕರಿಸಕೂಡದು.

" ೫) ಒಂದು ಔಷಧವು ವಿಖ್ಯಾತವಾದ ಆಸ್ಪತ್ರೆಯಿಂದಲೋ ಅಧಿಕೃತ ಸ್ಥಾನದಿಂದಲೋ ಬಂದುದೆಂದು ಜನರಿಗೆ ನಂಬಿಗೆ ಹುಟ್ಟಿಸುವಂತಹ ಜಾಹೀರಾತುಗಳನ್ನು ಸ್ವೀಕರಿಸಕೂಡದು. ಹಾಗೆ ಅದು ಇದ್ದುದೇ ನಿಜವಿದ್ದಲ್ಲಿ ಅದನ್ನು ಸಮರ್ಥಿಸಲು ಆಯಾ ಸ್ಥಳಗಳಿಂದ ದೊರೆಕಿಸಿದ ಪ್ರಮಾಣಪತ್ರಗಳನ್ನು ಜೊತೆಗೆ ಇರಿಸಿರಬೇಕು.

" ಮೇಲ್ಕಾಣಿಸಿದ ನಿಯಮಗಳನ್ನು ಇಂಗ್ಲಂಡದಲ್ಲಿನ ಎಲ್ಲ "ವೃತ್ತಪತ್ರಿಕೆಗಳೂ ಈಗ ಅನುಸರಿಸುತ್ತಿವೆ. "

ಆ ಡಾಕ್ಟರರು ಮುಂದೆ ಹೀಗೆಂದಿದ್ದಾರೆ.

" ವೃತ್ತಪತ್ರಿಕೆಗಳ ಒಡೆಯರು ಇದೇ ಬಗೆಯ ಧೋರಣೆಯನ್ನು ಅನುಸರಿಸಿದರೆ ಮತ್ತು ಸರಕಾರವಾದರೂ ಇಂತಹ ಕಾನೂನನ್ನು ಮಾಡುವವಾದರೆ ಅಸಂಖ್ಯಾತ ತಿಳಿಗೇಡಿ ಹಾಗೂ ಬಡಜನರ ಕೋಟ್ಯಾವಧಿ ರೂಪಾಯಿಗಳು ವ್ಯರ್ಥವಾಗಿ ಹಾಳಾಗದೆ ಉಳಿಯುವವು. ಅವರು ಈ ಬಗೆಯ ಮೋಸದ ಜಾಹೀರಾತಿಗೆ ಅತಿ ಸುಲಭವಾಗಿ ಮರುಳಾಗಿ ಬಲಿಬೀಳುತ್ತಾರೆ. ಮೋಸಗಾರರು ತಮ್ಮ ಔಷಧಗಳ ಜಾಹೀರಾತಿನಿಂದ ಅಜ್ಞ ಜನರನ್ನು ಸುಲಿಯುವರಲ್ಲದೆ ಅವರ ಆರೋಗ್ಯವನ್ನೂ ಸೂರೆಗೊಳ್ಳುತ್ತಾರೆ.

" ನಾನೂ ಕ್ಷಯರೋಗದ ಆಸ್ಪತ್ರೆಯಲ್ಲಿ ಮುಖ್ಯ ಚಿಕಿತ್ಸಾಧಿಕಾರಿಯಾಗಿದ್ದೇನೆ. ಈ ಹನ್ನೊಂದು ವರ್ಷಗಳ ನನ್ನ ಅನುಭವದಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ನಾನು ಕಂಡಿದ್ದೇನೆ. ಅನೇಕ ಕ್ಷಯರೋಗಿಗಳು ಮೋಸಹೋಗಿ ಬಹು ಭಾರವಾದ ಬೆಲೆಯ ಔಷಧ ಕೊಂಡುದುಂಟು. ೬-೭ ತಿಂಗಳ ಹೀಗೆ ಸಿಕ್ಕಾಬಟ್ಟೆ ಅಲೆದಾಡಿ ಉಪಾಯಗಾಣದೆ ಸಾರ್ವಜನಿಕ ಆಸ್ಪತ್ರೆಗೆ ಆರೋಗ್ಯ ಭಂಗಹೊಂದಿ ಕರುಣಾಜನಕ ಸ್ಥಿತಿಯಲ್ಲಿ ಬರುತ್ತಾರೆ. ಇಂತಹ ಮೋಸಗಾರಿಕೆಯ ಜಾಹೀರಾತುಗಾರರು ಲಂಚಕೊಟ್ಟು ಒಳ್ಳೆ ಆಕರ್ಷಕ ಶಿಫಾರಸು ಪತ್ರಗಳನ್ನು ಕೂಡ ಬರೆಯಿಸಿಕೊಳ್ಳುತ್ತಾರೆ. ಪತ್ರಿಕಾಕರ್ತರು ಇಂತಹ ಜಾಹೀರಾತುಗಳಿಗೆ ಆಸ್ಪದ ಕೊಡದಿದ್ದರೆ ಈ ಮೋಸದ ವ್ಯವಹಾರವನ್ನು ತಡೆಗಟ್ಟಿದ ಶ್ರೇಯಕ್ಕೆ ಪಾತ್ರರಾಗುತ್ತಾರೆ."

ಡಾಕ್ಟರರು ಬಯಸಿದಂತೆ ಇಂಗ್ಲಂಡದ ಪತ್ರಿಕಾಕರ್ತರ ದಾರಿಯಲ್ಲಿಯೇ ನಮ್ಮ ನಾಡಿನ ಪತ್ರಿಕಾಕರ್ತರೂ ಹೆಜ್ಜೆ ಹಾಕುವರೆಂದು ನಾನು ಆಶಿಸುತ್ತೇನೆ. ಸರಕಾರವಾದರೂ ಇಂತಹ ಮೋಸಗಾರಿಕೆಯ ಜಾಹೀರಾತುಗಳನ್ನು ತಡೆಗಟ್ಟಲು ತಕ್ಕ ಉಪಾಯ ಯೋಜಿಸುವದು ಯುಕ್ತವಾಗಿದೆ.

ಮುಂಬಯಿ ಕಿಶೋರಲಾಲ ಮಶ್ರೂವಾಲಾ
೧೬—೧೧—೪೮

ಅಧಿಕಾರಿಗಳನ್ನು ಕುರಿತು ಪ್ರಶ್ನೆಗಳು

[೯ನೆಯ ಪುಟದಿಂದ]

ರಿಗೆ ಬಹಳ ಭಾರವಾಗಿದೆ. ಏಕೆಂದರೆ ಅಲ್ಲಿಗೆ ಹೋದವರು ಈ ತಿಕೀಟಿನ ವೆಚ್ಚವನ್ನಲ್ಲದೆ ಊಟ, ವಸತಿ, ಪ್ರಯಾಣ, ಪ್ರದರ್ಶನ ಮುಂತಾದ ಇತರ ಅನೇಕ ವಿಷಯಗಳ ಬಗ್ಗೆ ಖರ್ಚನ್ನು ಹೊರಬೇಕಾಗುತ್ತದೆ. ಈ ಕರಭಾರ ಭಾರತದ ದೀನರನ್ನು ಒಳ್ಳೆಯ ಪರಿಣಾಮಕರವಾಗಿ ದೂರ ಇಡುತ್ತದೆ; ಮತ್ತು ಆ ಶ್ರೀಮದ್ಗಂಭೀರ ಸಭೆಯನ್ನು ಶ್ರೀಮಂತರಿಗಾಗಿಯೇ ಮೀಸಲಿರಿಸುತ್ತದೆ. ಸಮ್ಮೇಲನಕ್ಕೆ ೫೦ ಲಕ್ಷ ರೂಪಾಯಿಯ ಖರ್ಚು ಅಗತ್ಯವೆಂದು ಲೆಕ್ಕ ಹಾಕಲಾಗಿದೆ. ಇಂದಿನ ರೂಪಾಯಿ ಮೊದಲಿನ ರೂಪಾಯಿಯ ನಾಲ್ಕನೆಯ ಒಂದಂಶ ಬೆಲೆಯುಳ್ಳದ್ದೆಂದು ಹಣಿಸಿದರೂ ಖರ್ಚು ೧೨ ರಿಂದ ೧೩ ಲಕ್ಷದಷ್ಟಾಗುತ್ತದೆ. ಇದರಿಂದ ಕಾಂಗ್ರೆಸ್ಸಿನ ತೀವಿ ವರುವರುಷಕ್ಕೆ ವಿಲಾಸ, ಸುಖ ಮತ್ತು ಪ್ರದರ್ಶನಗಳತ್ತ ಏರುತ್ತ ಸಾಗಿದೆ ಎಂದು ತಿಳಿದು ಬರುತ್ತದೆ. ಒಂದಾದ ಮೇಲೊಂದರಂತೆ ಬರುವ ಪ್ರತಿಯೊಂದು ಸ್ವಾಗತ ಸಮಿತಿಯೂ ಹಿಂದಿನ ಸಮಿತಿಯನ್ನು ವೈಲಾಸಿಕ ಪ್ರದರ್ಶನವನ್ನು ಮಾಡುವುದರಲ್ಲಿ ಮೀರಿಸಬೇಕೆಂದು ಭಾವಿಸಿದಂತೆ ತೋರುತ್ತದೆ. ಈಗ ಕಾಂಗ್ರೆಸ್ಸು ಭಾರತವನ್ನು ಆಳುತ್ತಿದೆ; ಆದುದರಿಂದ ಅದು ಅದನು ವ್ಯವಸ್ಥೆಗೊಳಿಸಲು ಶಕ್ತವಾಗಿದೆ. ಆದರೆ ಅದು ನ್ಯಾಯವಾದುದೇನು? ಅದರಿಂದ ಭಾರತಕ್ಕೆ ಯಾವ ಲಾಭವಿದೆ? ಹಾಗಿದ್ದರೆ ಅದ ಯಾವ ಬಗೆಯಿಂದ? ೫. ಭಾರತದ ಉತ್ತರ ಭಾಗದಲ್ಲಿ ಈ ಚಳಿಗಾಲವನ್ನು ಸಭೆ ನಡೆಸಲು ಕಾಂಗ್ರೆಸ್ಸು ಏಕೆ ಆರಿಸಿಕೊಂಡಿತೆಂದೂ ಕೇಳಲಾಗಿದೆ. ಈ ಋತುವೇ ಸ್ವತಃ ದರ್ಶನಾರ್ಥಿಗಳ ಖರ್ಚನ್ನು ಹೆಚ್ಚಿಸುತ್ತದೆ. ಈ ಕಾಲದಲ್ಲಿ ಉಣ್ಣೆಯ ಬಟ್ಟೆಗಳಿಗೆ ತಲೆಯೊಂದಕ್ಕೆ ನೂರು ರೂಪಾಯಿ ಬೀಳುತ್ತದೆ. ಇದರ ಮೇಲೆ, ದಕ್ಷಿಣ ಹಿಂದುಸ್ತಾನದವರಿಗೆ ಉತ್ತರದ ಚಳಿಯ ಅಬ್ಬರದ ಬಗ್ಗೆ ಸರಿಯಾದ ಕಲ್ಪನೆ ಇರಲಿಕ್ಕಿಲ್ಲ. ಪ್ರಾಯಶಃ ಅವರು ವಸ್ತ್ರ ಬಟ್ಟೆಗಳನ್ನು ಬೇಕಾದಷ್ಟು ತರದೆ ಕಾಹಿಲೆ ಬೀಳಬಹುದಾಗಿದೆ. ಕಾಂಗ್ರೆಸ್ ಸಮ್ಮೇಲನವನ್ನು ಮಾರ್ಚ ಅಥವಾ ಅದರ ಹಿಂದೆಮುಂದಿನ ವೇಳೆಯಲ್ಲಿ ಸೇರಿಸುವ ಹಳೆಯ ಗೊತ್ತುವಳಿಯನ್ನು ಬಿಟ್ಟದ್ದೇಕೆ?

ಜನರ ಈ ಕುತೂಹಲವನ್ನು ಅಧಿಕಾರಿಗಳು ಬಗೆಹರಿಸುವರೆಂದು ನಾನು ಆಶಿಸುತ್ತೇನೆ.

ಮುಂಬಯಿ,
೫-೧೨-೪೮ ಕಿ. ಘ. ಮಶ್ರೂವಾಲಾ

ಮ. ಗಾಂಧಿ ಕೊಲೆಯ ಖಟ್ಲೆ

ಮಹಾತ್ಮಾ ಗಾಂಧಿ ಕೊಲೆಯ ಖಟ್ಲೆಯಲ್ಲಿ ತಾ. ೧೧,೧೨,೧೫ ಈ ಮೂರು ದಿನ ನಾರಾಯಣ ಆಪಟೆಯ ವಕೀಲರಾದ ಶ್ರೀ ವೆಂಗಳೆಯವರು ತಮ್ಮ ಪ್ರತಿಪಾದನೆಯಲ್ಲಿ, ಕೊಲೆಯ ಕಾಲಕ್ಕೆ ಆಪಟೆಯು ದಿಲ್ಲಿಯಲ್ಲಿರಲಿಲ್ಲವೆಂದೂ ಅವನು ಜಾನೇವರಿ ತಾ. ೩೦ ಹಾಗು ೩೧ ಕ್ಕೆ ಮುಂಬಯಿಯಲ್ಲಿಯೇ ಇದ್ದನೆಂದೂ ಸರಕಾರಿ ವಕೀಲರ ಪ್ರತಿಪಾದನೆಯ ಆಧಾರದಿಂದಲೇ ಸಾಧಿಸಲೆಳಸಿದರು. ಈ ಮೂರುದಿನಗಳ ಪ್ರತಿಪಾದನೆಯ ಸಾರ ಹೀಗಿದೆ:-

ಜಾನೇವರಿ ೩೦, ೩೧ ಕ್ಕೆ ತಾನು ಮುಂಬಯಿಯಲ್ಲಿದ್ದುದಾಗಿ ಆಪಟೆ ಹೇಳಿದ್ದು ಈ ಬಗ್ಗೆ ಸಾಕ್ಷಿದಾರರನ್ನು ಹಾಜರ ಮಾಡುವ ಅವಶ್ಯಕತೆ ಕಾಣುವದಿಲ್ಲ. ಯಾಕಂದರೆ ಇದನ್ನು ಸಿದ್ಧಮಾಡಲು ರೇಲ್ವೆ ತಿಕೀಟು, ತಾರಿನ ಪಾವತಿ ಮೊದಲಾದವು ಇದೆ. ಇವು ಕಳವಿನವೆಂದು ಸಿದ್ಧಮಾಡಲ್ಪಟ್ಟಿಲ್ಲ. ಆಪಟೆಯು ಅಂದು ದಿಲ್ಲಿಯಲ್ಲಿದ್ದರೆ ಗೋಡಸೆಯು ಆ ಪತ್ರವನ್ನು ಆಪಟೆಗೆ ಬರೆವ ಅಗತ್ಯವಿರುತ್ತಿದ್ದಿಲ್ಲ. ಆಪಟೆಯು ಗ್ವಾಲೇರದಿಂದ ಮುಂಬಯಿಗೆ ತೆರಳಿದನೆಂದು ಈ ಪತ್ರದಿಂದ ವ್ಯಕ್ತವಾಗುತ್ತದೆ. ಇದರಿಂದ ಆಪಟೆಯು ಜಾನೇವರಿ ೩೦ ಕ್ಕೆ ದಿಲ್ಲಿಯಲ್ಲಿ ಇದ್ದಿಲ್ಲವೆಂದೂ ಮಹಾತ್ಮರ ಕೊಲೆಯನ್ನು ಗೋಡಸೆಯು ಒಬ್ಬನೇ ಮಾಡಿದನೆಂದೂ ಸಿದ್ಧವಾಗುವದು. ಆದರೆ ಆರೋಪಿ ಪಕ್ಷದವರು ಈ ವಿಷಯದಲ್ಲಿ ಸಾಕ್ಷಿಗಳನ್ನು ಕರೆಸದಿರುವದು ದುರ್ದೈವ. ಆಪಟೆಯ ಬಂಧುವು ಮೊದಲು ಅವನ ಪತ್ರವನ್ನು ಒಡೆದಿದ್ದನು. ಅವನಾದರೂ ಬಂದು ಸಾಕ್ಷಿಹೇಳಬಹುದಿತ್ತು.

ವಿಮಾ ಪಾಲಿಸಿಗಳನ್ನು ಬೇರೆ ಹೆಸರಿಗೆ ವರ್ಗಾಯಿಸಿದ ಮಾತೆತ್ತಿ ಶ್ರೀ ವೆಂಗಳೆಯವರು ಹೀಗೆನುಡಿದರು—ಮತ ಪ್ರದರ್ಶನಕ್ಕೆ ತಾವು ದಿಲ್ಲಿಗೆ ಹೋಗುತ್ತಿರುವದರಿಂದ ತಮ್ಮ ವಿಮೆಗಳನ್ನು ಶ್ರೀಮತಿ ಗೋಪಾಲ ಗೋಡಸೆ, ಶ್ರೀಮತಿ ಆಪಟೆ ಇವರ ಹೆಸರಿಗೆ ವರ್ಗಾಯಿಸಿದರೆ, ಒಂದುವೇಳೆ ತಮ್ಮ ಬಂಧನವಾದರೂ ವಿಮಾ ಕಂತುಗಳನ್ನು ಕಟ್ಟಲು ಅನುಕೂಲವಾಗುವದೆಂದು ಅವರು ಯೋಚಿಸಿರಬೇಕು. ಈ ಎಲ್ಲ ಕಾರಣಗಳಿಗಾಗಿ ಆಪಟೆಯು ನಿರ್ದೋಷಿಯಾಗಿರುವನಾದ ಕಾರಣ ಅವನ ಬಿಡುಗಡೆಯಾಗಬೇಕು ಎಂದು ಮೊದಲಾಗಿ ಪ್ರತಿಪಾದಿಸಿದರು.

ಪಾಲಿಸ್ತಾನದ ಅನುನಯಸಮಿತಿ

ಸಂ. ರಾ. ಸಂಘದ ಸರ್ವ ಸದಸ್ಯರ ಸಭೆ ಹಿಂದಿನ ಬರ್ನದೊತ್ತೆಯ ಯೋಜನೆಯನ್ನು ಆಶೇಷವಾಗಿ ಬದಿಗಿಟ್ಟು ೩ ಜನರ ಒಂದು ಅನುನಯ ಸಮಿತಿಯನ್ನು ಪಾಲಿಸ್ತಾನದ ಪಕ್ಷದ್ವಯವನ್ನು ಸಂತೈಸಲು ಕಳುಹುವ ನಿರ್ಣಯವನ್ನು ಸ್ವೀಕರಿಸಿತು. ಪವಿತ್ರ ಸ್ಥಳಗಳನ್ನು ರಕ್ಷಿಸಬೇಕೆಂದೂ ಜೆರೂಸಲೇಮಿನಲ್ಲಿ ನಿಃಶಸ್ತ್ರೀಕರಣ ಮಾಡಬೇಕೆಂದೂ ಅದು ಸಂ. ರಾ. ಸಂಘದವರ ವಶದಲ್ಲಿರಬೇಕೆಂದೂ ಆ ನಿರ್ಣಯದಲ್ಲಿ ಹೇಳಲಾಗಿದೆ. ಈ ನಿರ್ಣಯದಿಂದ ಕಿಂಗ್ ಅಬ್ದುಲ್ಲನ ಆಧಿಪತ್ಯ ಅರಬ ಪಾಲಿಸ್ತಾನದಲ್ಲಿ ಸ್ಥಾಪಿತವಾಗುವುದು ಮತ್ತು ಯೆಹೂದಿಗಳಿಗೆ ಇಸ್ರೇಲ್ ಪಾಲಿಸ್ತಾನ ಉಳಿಯುವುದು ನಿಶ್ಚಿತವಾಗುವಂತಾಯಿತು. ಮೊದಲಿನ ಪೂರ್ಣ ಪಾಲಿಸ್ತಾನ ಆಳಬೇಕೆಂಬ ಅರಬರ ಗುರಿ ಮಣ್ಣುಪಾಲಾಗುವುದು ಸಂಭಾವ್ಯವಾಯಿತು.

ಬಾಲಪ್ರಪಂಚ

ಊಟ ಉಪಚಾರ

ಮಗೂ, ಚಿನ್ನ,

ನೊನ್ನೆ ಲಂಡನ್ನಿನಲ್ಲಿ ನಗರಾಧ್ಯಕ್ಷ ದೊಡ್ಡ ಮನುಷ್ಯರಿಗೆಲ್ಲ ಒಂದು ಔತಣವನು ಏರ್ಪಡಿಸಿದ್ದ. ಆ ಏರ್ಪಾಟಿನ ಚಿತ್ರ ಕೆಳಗಿದೆ, ನೋಡು. ಅದೇನು ತಟ್ಟೆ, ಬಟ್ಟಲು, ಝಗ ಝಗ, ಅದೆಂಥ ತಿಂಡಿ ತಿನಿಸುಗಳ ಮಘ ಮಘ! ಆ ಊಟ ಶುಚಿಯಾಗಿ, ರುಚಿಯಾಗಿ, ಅಂದವಾಗಿ, ಚೆಂದವಾಗಿ, ಕಂಪಾಗಿ, ತಂಪಾಗಿ, ಏನೇನೋ ಆಗಿ ಇತ್ತು! ಆದರೆ ಅಲ್ಲಿಂದ ಬಂದವನೊಬ್ಬ ನನಗೆ ಹೇಳಿದ. ಬಡಿಸಿದ ಪದಾರ್ಥಗಳಲ್ಲಿ ಅರ್ಧಕ್ಕಿಂತ ಹೆಚ್ಚನ್ನ ಕೆಲ ಅತಿಥಿಗಳು ಹಾಗೇ ಬಿಟ್ಟು ಹೋದರು, ಎಂದು- ಇದೇನಪಾ! ಅಂದೆ, ನಾನು. ಮೇಲೆ ಹೇಳಿದ ಎಲ್ಲ ಗುಣಗಳಿದ್ದೂ ಆ ಊಟ, ಆ ತಿಂಡಿ ಹೇಗಪ್ಪಾ ಆ ದೊಡ್ಡ ಮನುಷ್ಯರಿಗೆ ಬೇಡವಾಯಿತು? ಎಂದು ಕೇಳಿದೆ. ಅದಕ್ಕವ ನೆಂದ: Hunger is the best sauce ಹಸಿವೆಗಿಂತ ಪಚ್ಚಡಿ (ನಂಜಿಕೊಳ್ಳುವ ಪದಾರ್ಥ) ಬೇರಿಲ್ಲ. ಕ್ಷುಧಾತುರಾಣಾಂ ನರುಚಿರ್ನ ಪಕ್ವಂ- ಹಸಿದವನಿಗೆ ರುಚಿಯಾಗಬೇಕಿಲ್ಲ, ಬೆಂದಿರಬೇಕಿಲ್ಲ. ಹಸಿವೆಯಿಲ್ಲದವನಿಗೆ ಏನು ಬಡಿಸಿದರೇನು? ಅವನ ಅರುಚಿ ಅಗ್ನಿಮಾಂದ್ಯಗಳನ್ನ [illegible] ಪಕ್ವಾನ್ನ ಇಳಿಸಬಲ್ಲದು?

ಕೆಲವರಿಗೆ ಹಸಿವಿಲ್ಲ. ಮತ್ತೆ ಕೆಲವರಿಗ ದೊಡ್ಡಸ್ತಿಕೆ! ದೊಡ್ಡಸ್ತಿಕೆಗೆ ಮರ್ಯಾದೆ ಎಂಬೊಂದು ಅಂದ [illegible]. ಹಸಿವೆ ಇದ್ದರೂ ಸ್ವಾಹಾ ತಿನ್ನಲು ಆನು ಬಿಡದು, ಎಲ್ಲಿ [illegible] ಎಂದುಬಿಟ್ಟಾರೆಯೋ ಎಂಬ ಭಯ! ಮತ್ತೆ ಕೆಲವರಿಗೆ ಇಷ್ಟರ ಮಟ್ಟಿ [illegible] ಇವರಿಗಿಂತ ಹೆಚ್ಚು [illegible] ಗಳನ್ನ ಮಾಡುತ್ತೇವೆ ಎಂಬ ಅಹಂಕಾರ! ಹೀಗೆ ಅರುಚಿ, ಮರ್ಯಾದೆ, ಅಹಂಕಾರಗಳು ಅವರಿಗೆ ಅಡ್ಡ ಬಂದ [illegible] ಎಲ್ಲ ಬಿಟ್ಟು ಹೋದರಂತೆ. ನಿನಗೆ ಹಾಗೇನಾದರೂ ಸಂಕೋಚಗಳಿವೆಯೋ ನಪ್ಪಾ ಮಗು? ಏನೂ ಇಲ್ಲ. ನಿನ್ನ ಸರಳತನ ಅವರ ಮರ್ಯಾದೆಗಿಂತ ಹೆಚ್ಚಿನದು. ಅದನ್ನು ಕಾಯ್ದುಕೊಂಡರೆ ದೊಡ್ಡಸ್ತಿಕೆ ನಾಗರಿಕ ನೆಂದು ನೋಸ ಹೋದರೆ ಜೀವನದಲ್ಲಿ ಒಂದು ನಿಮಿಷವೂ ನಿಜವಾದ, ಶಾಂತಿದಾಯಕವಾದ ರಸನಿಮಿಷ ನಿನಗೆ ಸಿಗದಂತಾದೀತು. ಕಸ್ತೂರಿಯವರ ಮಾತಿನಲ್ಲಿ ಹೇಳಬೇಕಾದರೆ ಇವೆಲ್ಲ ಮನುಷ್ಯರ ಡೊಂಕುಗಳು! ವಕ್ರ ಮಾರ್ಗ ಚೆಂದವಾದೀತೆ? ಎಂದೂ ಆಗದು. ವಕ್ರವಾದದ್ದು ಚೆಂದವೆಂದೇ ಜಗತ್ತು ಗೋಳಿಗೀಡಾಯಿತು!

ನೇರ ನುಡಿಯ ನೇರ್ನಡೆಯ ನೇರ್ಪಿನ
ಗೆರೆಲಿ ನನ್ನ ಕಂದ:
ನೂರು ಡೊಂಕುಗಳ ಛಾಪ [illegible]
[illegible] ಅಂದ!
ಶರಳರೆಲ್ಲರೂ ಚೆಂದ— ಏಕೆ? ಆ
ಸರಳ ಭಾವದಿಂದ:
ಸರಳವಲ್ಲದೀಯೆಲ್ಲ ದುರುಳವೋ
ಕಕ್ಕ ಬುದ್ಧಿಯಿಂದ!

ಅಡ್ಡಡ್ಡ ಹರಿಯುಗುರಿ [illegible] ಎಷ್ಟೆ
[illegible]
ದೊಡ್ಡವರಿಗಲ್ಲ ದೊಡ್ಡವರಿಗೆ [illegible]
[illegible] ಇದು ಸೊಗಸು!
ಅಡ್ಡಗಲ ಬೆಳೆವ ದ [illegible] ಕಣ್ಣುಗಳ
[illegible]
ದೊಡ್ಡವರು ಸಣ್ಣವರು, ಸಣ್ಣ ಚಿಣ್ಣ ದೊ–
ಡ್ಡವನು ಬುದ್ಧಿಯಿಂದ!

— ಮಾವ

ಆಳುಗುಂಡು

ಮಗೂ,

ಬುದ್ಧಿವಂತರು ಬುದ್ಧಿಯಿಲ್ಲದ ಮಕ್ಕಳಂತೆ ಜಗಳ ಮಾಡುವುದಕ್ಕೆ ಯುದ್ಧವೆನ್ನುತ್ತಾರೆ ಎಂಬುದನ್ನ ಹಿಂದೊಮ್ಮೆ ಅಕ್ಕ ನಿನಗೆ ತಿಳಿಸಿದ್ದಳು. ಇಂದು ಸಾಹಸ ಕಾರ್ಯ ಮಾಡಿ, ಜನರನ್ನ ಬೆರಗುಗೊಳಿಸಿ, ಮೆಚ್ಚಿಗೆ ಪಡೆದು ಹಣ ಗಳಿಸಲು ಅಪಾಯಕರವಾದ ಕೃತ್ಯಗಳನ್ನ ಮಾಡಿ ಕೈಕಾಲು ಮುರಿದುಕೊಳ್ಳುತ್ತ ಬಂದಿರುವ ಒಂದು ಮನೆತನದವರ ಕತೆ ಹೇಳುತ್ತೇನೆ, ಕೇಳು:

ಅಮೇರಿಕದ ತಂಪಾ ಎಂಬಲ್ಲಿ "ಜಾಕಿನೀಶ್" ಎಂಬ ೩೫ ಜನರಿರುವ ಒಂದು ಕುಟುಂಬವಿದೆ. ಆ ಕುಟುಂಬದವರಿಗೆ ಐದು ಹೆಮ್ಮನೆಗಳಿವೆ. ಅವುಗಳೆದುರು ೧೦ ಎಕರೆ ವಿಸ್ತಾರದ ಒಂದು ದೊಡ್ಡ ಮೈದಾನವಿದೆ. ಅದರಲ್ಲಿ ಅಲ್ಲಲ್ಲಿ ತಾಳೆ ಮರಗಳು ತಲೆಯೆತ್ತಿ ನಿಂತಿವೆ. ಅವರಲ್ಲಿ ೧೨ ಮಹಾ ವೇಗದ ಮೋಟಾರುಗಳೂ, ೨೫ ಸಾಮಾನು ಮತ್ತು ಬಂದೂಕುಗಳನ್ನ ಹೊರುವ ಮೋಟಾರುಗಳೂ ಇವೆ. ಮೂರು ಯಂತ್ರದಂಗಡಿಗಳನ್ನ ಅವರಿಟ್ಟಿದ್ದಾರೆ.

[illegible] ತೋರಿಸುವ ಅದ್ಭುತದ ಸರ್ಕಸ್ಸೆಂದರೆ "ಆಳುಗುಂಡು" ಎನಿಸುವುದು! ಒಬ್ಬನು ನೆಟ್ಟಗೆ ಕೈ ಮೇಲೆ ಮಾಡಿ ನಿಲ್ಲುವನು. ಅವನನ್ನು [illegible] ಗುಂಡಿನಂತೆ [illegible] ನಳಿಗೆಯ [illegible] ಹೊರಬೀಳುವ [illegible] ಅವನು [illegible] ಹಾರಿ [illegible] ಇಬ್ಬರು [illegible] ಕಡೆಗೆ [illegible] ಆಳುಗುಂಡು [illegible] ಆಳುಗುಂಡು [illegible] ಕಾನನ್ ಬಾಲ್ [illegible] ಎನ್ನುತ್ತಾರೆ. ಈ [illegible] ಜಾಕಿನೀಶ್‌ರಲ್ಲಿ [illegible] ಆದರೆ [illegible] ಇದ್ದಾರೆ. ಅವನ [illegible] ಸಲಾಕೆ [illegible]

[illegible] ಅವನ [illegible] ಹಾರಿಸಿದ ಆಳುಗುಂಡನ್ನು [illegible] ತಿಳಿಸುತ್ತಾರೆ. [illegible] ದಾಕ್ಷಣ ನಳಿಗೆಯಲ್ಲಿ ಸಲಾಕೆ [illegible] ಹಿಡಿದು ಸಿದ್ಧವಾಗುತ್ತವೆ; [illegible] ತ್ತದೆ. ಆಳುಗುಂಡು ೧೦೦ ಅಡಿ ಎತ್ತರಕ್ಕೇರಿ ೩೦೦ ಅಡಿ ದೂರದಲ್ಲಿ ಬೀಳುತ್ತದೆ.

ಇದನ್ನ ಮೊದಲ್ಲು ಊಹಿಸಿ ತಯಾರಿಸಿದವನು ಅವರ ಹಿರಿಯಣ್ಣ ಎಡ್ಮಂಡೊ. ಅವನು ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಇಟೆಲಿಯಲ್ಲಿದ್ದ. ೧೯೨೨ ರಲ್ಲಿ ಅವನಿಗೆ ಈ ಕಲ್ಪನೆ ಹೊಳೆಯಿತು. ಅವನು ತನ್ನ ತಮ್ಮಂದಿರನ್ನೂ ಕಡೆಗೆ ತನ್ನ ಇಬ್ಬರು ಮಗಳಿಯರನ್ನೂ ಆಳುಗುಂಡುಗಳನ್ನಾಗಿ ಬಳಸಿ ಜನರಿಗೆ ಆಶ್ಚರ್ಯವನ್ನುಂಟು ಮಾಡಿದನು. ಮೊದಲು ಏಕಕಾಲದಲ್ಲಿ ಎರಡು ನಳಿಗೆಗಳಿಂದ ಇಬ್ಬರನ್ನ ಹಾರಿಸುತ್ತಿದ್ದನು. ಕಡೆಗೆ ೧೯೪೦ ರ ಹೊತ್ತಿಗೆ ಏನೂ ಅಪಾಯವಾಗದಂಥ ತೋಪಿನ [illegible] ನಿರ್ಮಿಸಿ ಒಬ್ಬರನ್ನೇ ಹಾರಿಸುವ ಆಟವನ್ನ ಕಂಡು ಹಿಡಿದನು. ಆ ಮೇಲೆ ಎರಡು ನಳಿಗೆ [illegible] ಕೊಳಿಸಿ [illegible] ಹಾರಿಸಿದನು. [illegible] ಕೆಲ [illegible] ಆದರೂ ಅವನ ಸಾಹಸ [illegible] ಆ [illegible] ಈ [illegible] ಅನೇಕಾನೇಕ [illegible] ತಣಿಸುತ್ತಿದೆ.

ನೀನು [illegible] ನನಗೆ ಗೊತ್ತು. ಆದರೆ [illegible] ಜೀವನದಲ್ಲಿ [illegible] ಮಕ್ಕಳಲ್ಲ [illegible] ಪಡಿಸುವುದು [illegible]?

— ಅಕ್ಕ

[illegible]

[illegible]

*

[illegible]

[illegible]

ಗಿಲ್ಡ್‌ಹಾಲ್ ಔತಣ: ಇದರಲ್ಲಿ ಸರ್ ಜಾರ್ಜ್ [illegible] ನಿವೃತ್ತನಾಗುತ್ತಿರುವ ಲಾರ್ಡ್ ಮೇಯರ್ ಸರ್ ಫ್ರೆಡರಿಕ್ ವೆಲ್ಸ್ ಇದೀಗ [illegible].

ಜನಪದ ಸಾಹಿತ್ಯವು ಗ್ರಾಮಜೀವನದ ವಾಸ್ತವ ಚಿತ್ರಣ

....ಲೇ: ಶ್ರೀ ಗೋವಿಂದಮೂರ್ತಿ ದೇಸಾಯಿ, ಸವಣೂರು. ....

ಜನಪದ ಸಾಹಿತ್ಯವು ಗ್ರಾಮ್ಯಜೀವನದ ಅನುಭವದಿಂದ ಜನಿಸಿದೆ. ಈ ಸಾಹಿತ್ಯದಲ್ಲಿ ಹಳ್ಳಿಗರಿಗೆ ನಿಲುಕದ ಭಾವಭಾವನೆಗಳೂ, ಕಾಣದೇ ಇಲ್ಲ. ವಿಚಾರ-ಅವಿಚಾರಗಳೂ, ನಡೆಯಲು ಬಾರದ ರೀತಿ ನೀತಿಗಳೂ, ನುಡಿಯಲು ಬಾರದ ಶಬ್ದ-ಸಂವಾದಗಳೂ ಇಲ್ಲ. ಒಂದೊಂದು ಮಾತಿನ ಹಿಂದೆ ಒಂದೊಂದು ದೊಡ್ಡ ಕತೆಯನ್ನೇ ಕಲ್ಪಿಸಿ ಹಳ್ಳಿಗರಿಗೆ ಅವು ಸರಿಯಾಗಿ ತಿಳಿಯುವಂತೆ ಮಾಡಿರುತ್ತಾರೆ ಅಂತಲೇ ಅವರು ಈ ಸಾಹಿತ್ಯದ ಸವಿಹೊನಲನ್ನು ಮೆಚ್ಚುತ್ತಾರೆ, ಹಾಡುತ್ತಾರೆ, ಕುಣಿಯುತ್ತಾರೆ.

ನಮ್ಮ ಉಚ್ಚ ಸಂಸ್ಕೃತಿಯು ಇನ್ನೂ ಅಚ್ಚಳಿಯದೇ ಉಳಿದದ್ದು ಕೇವಲ ಗ್ರಾಮಗಳಲ್ಲಿ. ಹೀಗೆ ಉಳಿಸಲು ಪ್ರಯತ್ನ ನಡೆಸಿದ್ದು ಈ ನಮ್ಮ ಜನಪದ ಸಾಹಿತ್ಯ. ಇಂದು ನಗರವು ಸಂಸ್ಕೃತಿಯ ದ್ಯೋತಕವೆಂದು ಹೇಳುವದು ತೀರಾ ತಪ್ಪು. ನಮ್ಮ ಜನಪದ ಸಾಹಿತ್ಯದಿಂದಲೇ ಜನಕ್ಕೆ ರಾಮಾಯಣ, ಮಹಾಭಾರತಗಳ ನಿಕಟ ಸಂಬಂಧ ಒದಗಿದೆ. ಇಂತಹ ನಾಸ್ತಿಕ ಪ್ರಪಂಚದಲ್ಲಿಯೂ ಅವರು ಅಸ್ತಿಕರಾಗಿಯೂ ಶ್ರದ್ಧಾವಂತರಾಗಿಯೂ ದಾನಧರ್ಮ ಪ್ರೇರಣೆಯುಳ್ಳವರಾಗಿಯೂ ತಮ್ಮ ಊರು ದೇಶದ ಅಭಿಮಾನ ಉಳ್ಳವರಾಗಿಯೂ ಇರುವರು. ಇದೆಲ್ಲವೂ ಈ ಸಾಹಿತ್ಯದ ಸಿದ್ಧಿಯು.

“ಯಾರು ರಾಜರಾದರೇನು ರಾಗೀ ಬೀಸುವದು ನಮ್ಮ ಪಾಲಿಗೆ ತಪ್ಪಿದ್ದಲ್ಲ” ಎಂಬ ಮಾತು ಅವರ ದಿನದ ಮನೆಯ ಮಾತಾಗಿದೆ. ಅವರು ತಮ್ಮ ನಿತ್ಯಕರ್ಮದಲ್ಲಿ ಎಂದೂ ಚ್ಯುತರಾಗುವದಿಲ್ಲ. ಸುಶಿಕ್ಷಿತರಾದ ನಾವು ನಾವೇ ಆರಿಸಿ ಕಳುಹಿದ ಮುಖಂಡರನ್ನು ಟೀಕೆಗೆ ಗುರಿಮಾಡುತ್ತೇವೆ. ಅವರ ಮೇಲಿನ ವಿಶ್ವಾಸವನ್ನು ಕಳೆದುಕೊಂಡು ನಾಡಿನ ಹದವನ್ನೇ ಕೆಡಿಸಿದ್ದೇವೆ. ಆದರೆ ಅವರಲ್ಲಿ ಇಂತಹ ಭಾವನೆಗಳು ಎಂದಿಗೂ ಬರಲಾರವು. ‘ಬಾಪೂಜೀ ಎಂದರೆ ನಮ್ಮ ಗ್ರಾಮಪ್ರಾಣ’ ಎಂದು ಪ್ರತಿಒಬ್ಬ ಗ್ರಾಮಜೀವಿಯೂ ತಿಳಿದಿದ್ದಾನೆ. ಆದರೆ ನಾವು ಮಾತ್ರ ಇಲ್ಲ.

ಇಂದು ನಾವೆಲ್ಲ ಕೇವಲ ಆಂಗ್ಲಭಾಷಾ ವ್ಯಾಮೋಹದಿಂದ ಅದರ ಥಳಕನ್ನು ನಮ್ಮ ಸಾಹಿತ್ಯಕ್ಕೆ ತಂದು ಅದನ್ನು ಕೃತಕವನ್ನಾಗಿ ಮಾಡುತ್ತ ಹೊರಟಿದ್ದೇವೆ. ಇಂದು ನಾವೆಲ್ಲರೂ ಅಂತರ ರಾಷ್ಟ್ರೀಯ ತಿರುಗಣಿಮಡುವಿಗೆ ಸಿಕ್ಕು ನಮ್ಮ ನಿಜ ನಾಗರಿಕತೆಯನ್ನು ಮರೆತಿದ್ದೇವೆ. ನಮ್ಮ ನಾಗರಿಕತೆಯು ಹೇಗೆ ಬದಲಾವಣೆಯನ್ನು ಹೊಂದಿದೆಯೋ ಹಾಗೆ ನಮ್ಮ ಸಾಹಿತ್ಯವೂ ಬದಲಾಯಿಸಿದೆ. ನಾವು ನಮ್ಮ ಸ್ವೈಜತೆಯನ್ನು ಕಂಡುಕೊಳ್ಳಬೇಕಾದರೆ ಹಳ್ಳಿಗೋಡಬೇಕು. ಅಲ್ಲಿಗೆ ಹೋಗಬೇಕಾದರೆ ಈ ಸಾಹಿತ್ಯವು ಬೇಕೇ ಬೇಕು. “ಜನಪದ ಸಾಹಿತ್ಯವು ನಮ್ಮ ಸಾಹಿತ್ಯದ ಬೆನ್ನೆಲುಬು” ಸೂಕ್ಷ್ಮವಾಗಿ ಇದರ ಅಭ್ಯಾಸವನ್ನು ಮಾಡಿದರೆ ನಮ್ಮ ಹಿಂದಿನ ಅವಿದ್ಯಾವಂತನ ರೀತಿ ನೀತಿಗಳು ಹೇಗಿದ್ದವು, ಅವನ ಮನಸ್ಸೆಷ್ಟು ವಿಶಾಲವಿತ್ತು, ಅವನ ಬಾಳು ಎಷ್ಟು ಸುಖವಿತ್ತು ಎಂಬುದರ ಅರಿವು ನಮಗೆ ಬಾರದಿರದು.

ಲಾವಣಿ ಚಾತ್ರಪದ, ಕೋಲಾಟಪದ, ಹೋಳಿಯಪದ, ಹಂತಿಯಪದ, ಹೆಜ್ಜೆಯಪದ ಬೀಸುವಪದ, ಜೋಗುಳದ ಹಾಡು, ಒನಕೆ ಹಾಡು, ಆರತಿಹಾಡು, ಬೀಗರಹಾಡು, ಭೂಮದಹಾಡು, ಮುಯ್ಯದಹಾಡು, ಯಕ್ಷಗಾನ ಹಾಗೂ ಸುಗ್ಗಿಯ ನೃತ್ಯಗಳು ಜನಪದ ಸಾಹಿತ್ಯದ ಅಂಗಗಳು. ಇವೆಲ್ಲವುಗಳೂ ಹಳ್ಳಿಯ ಪೂರ್ಣಚಿತ್ರವನ್ನು ಕೊಡುತ್ತವೆ. ನಮ್ಮ ಹಿಂದಿನ ಉಜ್ವಲ ಇತಿಹಾಸವನ್ನು ಹೇಳುತ್ತವೆ. ನಮ್ಮ ಪೂರ್ವಜರ ಶೂರತನದ ಕೃತ್ಯಗಳನ್ನು ನೆನಪಿಗೆ ತಂದುಕೊಡುತ್ತವೆ. ನಮ್ಮ ಪ್ರಾಚೀನ ನಾಗರಿಕತೆಯನ್ನು ಹೇಳಿಕೊಡುತ್ತವೆ. ಸಮಾಜದ ರೀತಿ ನೀತಿಗಳನ್ನು ಶ್ರುತಪಡಿಸುತ್ತವೆ. ಇಂದಿನ ಮನೋವಿಶ್ಲೇಷಣಾತ್ಮಕ ಕಾದಂಬರಿಗಳಷ್ಟೇ ಅವು ಮಾನವನ ಮನಸ್ಸನ್ನು ತಿದ್ದಬಲ್ಲವು. ಇಂದಿನ ನಮ್ಮ ಸಾಹಿತ್ಯವು ಮಾಡುವ ಕಾರ್ಯಕ್ಕಿಂತಲೂ ಹೆಚ್ಚಿನ ಕಾರ್ಯವನ್ನು ಅದು ಮಾಡುತ್ತದೆಂದು ಹೇಳಿದರೆ ಅತಿಶಯೋಕ್ತಿ ಎನಿಸಲಾರದು.

ಶಿಕ್ಷಣದ ಮುಖ್ಯಕರ್ತವ್ಯವು ಮಾನವನ ಮನಸ್ಸನ್ನು ವಿಶಾಲಗೊಳಿಸುವದು ಕೇವಲ ಓದಲು ಬರೆಯಲು ಬಂದರೆ ಅದು ಸಾಕ್ಷರತೆಯಲ್ಲ. ಅವನಿಗೆ ತಾನು ಓದಿದ್ದು ಪೂರ್ಣ ತಿಳಿಯಬೇಕು. ಇಂದು ಅನೇಕ ಸುಶಿಕ್ಷಿತರುಂಟು, ಪದವೀಧರರುಂಟು ಅವರೆಲ್ಲರೂ ತಮ್ಮ ವಿದ್ಯೆಯ ಪೂರ್ಣ ಲಾಭವನ್ನು ಪಡೆದಿರಲಾರರೆಂದು ನನ್ನ ಭಾವನೆ ಆದರೆ ತಾವು ಓದಿದ ಸಾರವನ್ನು ಗ್ರಹಿಸಿ ‘ಅದರಂತೆ ನಡೆಯಲು ಪ್ರಯತ್ನಿಸುವವರೇ ವಿದ್ಯಾವಂತರು. ನೋಡಿರಿ, ಹಳ್ಳಿಗರು ತಮ್ಮ ಮನಸ್ಸಿನಲ್ಲಿ ಮೂಡುತ್ತಿದ್ದ ಭಾವನೆಗಳನ್ನು ಬಾಯಲ್ಲಿ ಅಂದುಕೊಂಡು ತಮ್ಮ ಮನಸ್ಸನ್ನು ವಿಶಾಲಗೊಳಿಸಿಕೊಳ್ಳುತ್ತಾರೆ. ಮನಸ್ಸಿನ ಕೃಷಿಯೇ ವಿದ್ಯೆಯ ಮುಖ್ಯ ಗುರಿ. ಕೇವಲ ಸಹಸ್ರಾರು ಗ್ರಂಥಗಳನ್ನು ಮುಖೋದ್ಗತ ಮಾಡುವದರಲ್ಲಿ ಯಾವ ಸಾರ್ಥಕತೆಯೂ ಇಲ್ಲ.

“ಬಡವಿ ಆಡಿದ ಮಾತು ಜನಕ್ಕೆರುಚಿಸದು. ಒಡವೆ ಇಟ್ಟವ್ವ ಒನಜನಸು ಹೇಳಿದರೆ ಜನ ಬಾಯಿ, ಬಾಯಿ, ಬಿಡುತಾರೆ” ಎಂದು ದರಿದ್ರ ಸಿರಿವಂತರಲ್ಲಿಯ ಭೇದಭಾವವನ್ನು ಹೇಳಿದ್ದಾರೆ. ಅವರ ಮಾತು ಇಷ್ಟು ಸುಲಭವಾಗಿದ್ದರೂ ಅದರಲ್ಲಿಯ ಮಾತಿನ ಪೆಟ್ಟು ‘ಎಷ್ಟು ಬಲವಾಗಿದೆ ನೋಡಿರಿ. ಅದು ಅಂದು ಹೇಳಿದ ಮಾತಾದರೂ ಇಂದಿನ ಸಮಯಕ್ಕೆ ಅನ್ವಯಿಸುತ್ತದೆ. ಇಂತಹ ಮಾತಿನಿಂದ ಹಳ್ಳಿಯ ಜನರನ್ನು ನಾವು ತಿದ್ದಬೇಕಲ್ಲದೇ ಸಾಮ್ಯವಾದದ ತತ್ವಗಳಿಂದಲ್ಲ.

“ಕಾಳಿಗೆ ಒಡವೇಕೆ? ಬೋಳಿಗೆ ತುರುಬೇಕೆ? ಬಡವನ ಮಡದಿಗೆ ಬೆಡಗೇಕೆ?” ಎಂದು ದರಿದ್ರರು ಇರಬೇಕಾದ ರೀತಿಯನ್ನು ಹೇಳಿದ್ದಾರೆ. ಅಂತೂ ಜನಪದ ಸಾಹಿತ್ಯವು ಮಾನವನ ಜೀವನದ ಕನ್ನಡಿ.

ಹುಲಿಗೆ ಹಸಿವಾದರೆ ಹುಲ್ಲು ತಿನ್ನುವದೆ? ಇಲಿಗೆ ಹಸಿವಾದರೆ ಕಲ್ಲು ತಿನ್ನುವದೆ? ಮುಡಿಯರಳು ಮುಪ್ಪಾದರೆ ಪರಿಮಳ ಬಿಡುವದೆ? ದೊರೆಯ ಮಕ್ಕಳಿಗೆ ಬಡತನ ಬಂದರೆ ಸಿರಿತನದ ರೀತಿ ಬಿಡುವರೆ?

ಎಂದು ಹಳ್ಳಿಯ ಜನರು ತಮ್ಮ ಮಕ್ಕಳಿಗೆ ಬುದ್ಧಿಯನ್ನು ಹೇಳುವಾಗ ಅನ್ನುತ್ತಾರೆ. ಅವರಿಗೆ ಇಂತಹವುಗಳನ್ನು ಹೇಳಿ ಅವರ ಮನಸ್ಸನ್ನು ತಿದ್ದುತ್ತಾರೆ.

ರಸಿಕನ ಸಹೃದಯತೆಗೆ ಬೇಕಾಗುವಷ್ಟು ಭಾವಕ ದೃಷ್ಟಿಯಿಲ್ಲದ್ದರಿಂದ ಇಂದು ನಮ್ಮ ಕಾವ್ಯಗಳೆಲ್ಲಾ ಕಾಲಕಸವಾಗಿವೆ. ಚಿಕ್ಕ ಬಾಲಕರ ಸ್ವತ್ತಾಗಿವೆ. ಆದರೆ ಈ ಸಾಹಿತ್ಯವು ಹಾಗಲ್ಲ. ಇದು ಪೂರ್ಣವಾಗಿ ರಸಿಕನ ಹೃದಯದಿಂದ ಹೊರಟ ಧ್ವನಿ. ಅಂತಲೇ ಇದು ಗ್ರಾಮಜೀವನದ ವಾಸ್ತವ ಚಿತ್ರವನ್ನು ತೋರುತ್ತದೆ.

ಚಂದಾದಾರರಲ್ಲಿ ವಿನಂತಿ

ಯಾವದೆ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚಿಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆವೆಚ್ಚ ಸಹಿತ (ಚಂದಾಹಣ ಮುಂಗಡ)

೧ ವರ್ಷ	೬-೪-೦
೬ ತಿಂಗಳಿಗೆ . . .	೩-೪-೦
೩ ,, ...	೧-೧೨-೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೭ ಆಣೆ ಹೆಚ್ಚಿಗೆ ಬೀಳುವದು.

ರೂಪರಂಗ

ಕಲೆ ಮತ್ತು ಸತ್ಯ

“ಇಂಡಿಯನ್ ಸೋಶಲ್ ರಿಫಾರ್ಮರ್” ಪತ್ರಿಕೆ ಭಾರತದಲ್ಲಿ ಈಗಿರುವ ಚಲಚ್ಚಿತ್ರ ಪರಿಶೀಲನ ಪದ್ಧತಿಯನ್ನು ಟೀಕಿಸಿ ಅದರಬದಲು ಅ. ಭಾ. ಚಲಚ್ಚಿತ್ರ ಪಂಡಿತರದೊಂದು ಸಮಿತಿಯನ್ನು ನಿಯಮಿಸಿ, ಅದು ನಿರ್ಮಾಪಕರಿಗೆ ನೀತಿಅನೀತಿ ವಿಷಯದಲ್ಲಿ ಸಲಹೆ ಕೊಡುವಂತೆಯೂ ಕಥಾಸಾಹಿತ್ಯಾದಿ ರಚನೆಯಲ್ಲಿ ಕಲೆಯಲ್ಲಿಯ ಸತ್ಯವನ್ನೇ ಆರಾಧಿಸುವ ಅಲ್ಪಸಂಖ್ಯರಿಗಾಗಿ ವಿಶೇಷ ಪ್ರದರ್ಶನ ನಡೆಸಲು ಏರ್ಪಾಡುಮಾಡುವಂತೆಯೂ ವ್ಯವಸ್ಥೆಗೊಳಿಸಬೇಕೆಂದೂ ಪ್ರತಿಪಾದಿಸಿದೆ. ಈ ಪ್ರತಿಪಾದನೆಯಲ್ಲಿ ಪರಿಶೀಲಕಸಮಿತಿಯವರು Virtue is knowledge ಸುಗುಣವೇ ಜ್ಞಾನ ಎಂಬ ಸಾಕ್ರೆಟೀಸವಾದಿಗಳೆಂದೂ ಮುಂಬಯಿಯಲ್ಲಿ ನಡೆಯುತ್ತಿರುವ ಹ್ಯಾಮ್ಲೆಟ ಚಿತ್ರದ ಪ್ರದರ್ಶನದಲ್ಲಿ ಮದ್ಯಪಾನವನ್ನು ನಿಷೇಧಿಸದೆ ಆದರಲ್ಲಿಯ ಅನೀಶ್ವರ ಅಂಶವನ್ನು ಇಂಗ್ಲೆಂಡಿನಲ್ಲೀ ವಿದ್ಯಾರ್ಥಿಗಳ ದೃಷ್ಟಿಯಿಂದ ಆಗಲೇ ತೆಗೆದುಹಾಕಲಾಗಿದೆಯೆಂದು ಪತ್ರಿಕೆಗಳ ಟೀಕೆಗೆ ಸರಕಾರಕೊಟ್ಟ ಉತ್ತರಕ್ಕೆ ಪ್ರತಿಯಾಗಿ ಮುಂಬಯಿಯ ಬಹುಸಂಖ್ಯ ಪ್ರೇಕ್ಷಕರನ್ನು ಸರಕಾರ ಇಂಗ್ಲೆಂಡಿನ ಬಾಲಬಾಲಕಿಯರಿಗೆ ಹೋಲಿಸಿತೆಂದೂ ಟೀಕಿಸಿದೆ. ಒಂದು ನಿಮಿಷ ಈ ಟೀಕೆಯ ಬಲೆಯಲ್ಲಿ ತರ್ಕದ ಕತ್ತರಿಯನ್ನು ಪ್ರಯೋಗಿಸಿ ನೋಡೋಣ ಬನ್ನಿರಿ:

ಮೊದಲನೆಯದಾಗಿ ಸರಕಾರವು ಅ. ಭಾ. ಚಲಚ್ಚಿತ್ರಕುಶಲಸಮಿತಿಯನ್ನು ರಚಿಸಿ ಕಲೋದ್ಧಾರಕ್ಕೆ ನೆರವಾಗಬೇಕೆಂಬ ಸಲಹೆ ಐಸೋದುಪ್ಪವೆನ್ನಲು ಬರದು. ಆದರೆ ಆ ಕೆಲಸದಲ್ಲಿ ಅಲ್ಪಸಂಖ್ಯರೆನಿಸುವ ಕಲೆಯಲ್ಲಿಯ ಸತ್ಯದ ಆರಾಧಕರಾದವರಿಗೆ ವಿಶೇಷ ಚಿತ್ರಗಳನ್ನು ತಯಾರಿಸಲು ಬೀಳುವ ಲಾಭರಹಿತವೂ ನಷ್ಟಕಾರಕವೂ ಆದ ಪ್ರಯತ್ನಕ್ಕೆ ನಿರ್ಮಾಪಕರನ್ನು ಹಚ್ಚುವುದು ಈ ಪಂಡಿತಸಮಿತಿಗೆ ಹೇಗೆ ಮತ್ತು ಏಕೆ ಸಾಧ್ಯವಾಗಬೇಕು? ಈ ಕೆಲಸವನ್ನು ಈ ನಿರ್ಮಾಪಕರೇ ತಮ್ಮದೊಂದು ಅ. ಭಾ. ಚ. ಚಿ. ಪಂಡಿತ ಸಮಿತಿ ನಿರ್ಮಾಪನದಿಂದ ತನ್ಮೂಲಕ ಅನ್ಯವಸಾರ್ಹ, ಯೋಗ್ಯ, ಅಯೋಗ್ಯ, ರಸಾವಹ, ಅಶ್ಲೀಲ ಮುಂತಾದ ಅಂಶಗಳನ್ನು ನಿರ್ಣಯಿಸಿಕೊಳ್ಳಲು ಈ ಪರಿಶೀಲಕಸಮಿತಿಯ ನಿಷೇಧಾತ್ಮಕ ಪ್ರಯೋಗ ಪ್ರೋತ್ಸಾಹಿಸುವಂತಾಗಬಾರದೇಕೆ? ಹಾಗೇಕೆ ನಿರ್ಮಾಪಕರು ಸಾಗಬಾರದು? ಎರಡನೆಯದಾಗಿ Vritue ಅಥವಾ ಸುಗುಣಗಳನ್ನು ಪ್ರೇರಿಸದ ಭಾವನೆಗಳನ್ನು ಪ್ರಚೋದಿಸುವದು ಎಂದೂ ರಸಾವಹವೆನಿಸುವ ಕಲೆಯೆನಿಸದು ಎಂಬ ಮಾತನ್ನು ಮೇಲೆ ಹೇಳಿದ ಪತ್ರಿಕೆ ತಿಳಿದುಕೊಂಡಿಲ್ಲ. ಆದ್ದರಿಂದ ಕಲೆ ಕಲೆಗಾಗಿ (ಅಥವಾ ಮಾನವನಾಗರಿಕತೆಯ ಕೊಲೆಗಾಗಿ) ಎಂಬ ಇಂಥ ವಾದಿಗಳಕೈಯಲ್ಲಿ ಸಿಕ್ಕಾಗ ಆಗಬಹುದಾದ ಅದರ ಪರಿಣಾಮವನ್ನು ಬಣ್ಣಿಸಲು ಬರದು. ಸುಗುಣ ದುರ್ಗುಣ ಎಂಬ ಭೇದವನ್ನು ಗ್ರಹಿಸದೆ ಮನುಷ್ಯನ ಯಾವ ವ್ಯವಹಾರವೂ ಸಾಗದು. ಅದನ್ನು ನಿರ್ಣಯಿಸಲು ಇನ್ನು ಇಂಥವರೇ ಆಗಿ ಪಂಡಿತ ಸಮಿತಿಯ ಸದಸ್ಯರಿರಬೇಕೆಂದರೆ ಅವರಾದರೂ ಈ ಪತ್ರಿಕೆ ಸದ್ಯದ ಪರಿಶೀಲಕರ ಬಗ್ಗೆ ಹೇಳಿದಂತೆ ನಿರ್ಮಾಪಕರ ಪ್ರಭಾವಕ್ಕೇಕೆ ವಶರಾಗಬಾರದು? ಅವರ ಸ್ಥಿರಬುದ್ಧಿ ಮತ್ತು ಪ್ರಾಮಾಣಿಕ ಪರಹಿತೋದ್ದೇಶಗಳ ಬಗ್ಗೆ ಖಾತ್ರಿಯೇನು? ಅವರಿಗೇಕೆ ಇವರಂತೆಯೇ ಪೂರ್ವಗ್ರಹ, ವಿಶಿಷ್ಟಸಂಸ್ಕಾರ, ಸಂಪ್ರದಾಯಪ್ರಿಯತೆಗಳಿರಬಾರದು? ಇವೆಲ್ಲ ಅವ್ಯವಸ್ಥೆಗೊಯ್ಯುವ ಆರೋಪಗಳಲ್ಲದೆ ವ್ಯವಹಾರ್ಯವಲ್ಲ. ಇದರ ಮೇಲೆ ವಯಸ್ಸಿನಲ್ಲಿ ದೊಡ್ಡವರೆನಿಸಿದವರೆಲ್ಲ ಮಕ್ಕಳಿಗಿಂತ ಪ್ರಬುದ್ಧರೆಂದು ಮೇಲಿನ ಪತ್ರಿಕೆ ಹೇಳುವದರಲ್ಲಿ ಅರ್ಥವಿಲ್ಲ. ಹಾಗೆನ್ನುವದೂ ಬೆಳ್ಳಗಿರುವುದೆಲ್ಲ ಹಾಲು ಎನ್ನುವುದೂ ಒಂದೇ ಎಂಬುದು ಯಾರ ಅನುಭವಕ್ಕೆ ಬಂದಿಲ್ಲ? ಆದುದರಿಂದ ಈಗ ಸರಕಾರದ ಪರಿಶೀಲಕ ಸಮಿತಿಯವರು ಸಾಗಿದ ಮತ್ತು ಘೋಷಿಸಿದ ಧೋರಣ ಅಸಮರ್ಪಕ ಎನ್ನಲು ಬರದು. ಸದ್ಯ: ಹ್ಯಾಮ್ಲೆಟ್ ಚಿತ್ರದ ಬಗ್ಗೆ ಸರಕಾರ ಕೊಟ್ಟ ವಿವರ ಮಾತ್ರ ಪೂರ್ಣ ಹೊಣೆಗಾರಿಕೆಯದೆನ್ನಲಾಗದು. ಇವರೇನಾದರೂ ತಮ್ಮ ನ್ಯೂನತೆಯಿಂದ ತಪ್ಪುಮಾಡಿದರೆ ರಸಿಕರು ಅವರಿಗೆ ಅದನ್ನು ಎತ್ತಿತೋರಿಸಬೇಕು, ಅವರು ಅದನ್ನು ತಿದ್ದಿಕೊಳ್ಳುವಂತೆ ಮಾಡಬೇಕು, ಅಷ್ಟೆ. ರಸಿಕರು ಇತ್ತ ಲಕ್ಷ್ಯವಿತ್ತು ತಮ್ಮ ಪಾಲಿನ ಸಮಾಜಸೇವೆಯನ್ನು ಮಾಡಬೇಕು. ಮಾಡುತ್ತಾರೆಂದು ನಂಬಬಹುದಲ್ಲವೇ?

— ಚಿತ್ರಚಂದ್ರಮ

ಚಿಕ್ಕ ಹುಡುಗ

ಟಿಕೇಟು ಪರೀಕ್ಷಕ— ಈ ಚಿಕ್ಕ ಹುಡುಗನಿಗೆ ಎಷ್ಟು ವರ್ಷ ವಯಸ್ಸಮ್ಮಾ?

ತಾಯಿ— ನಾಲ್ಕು ವರ್ಷ.

ಟಿ. ಪ.— ಎಷ್ಟು ವರ್ಷ ನಿನಗೆ ಮಗು?

ಚಿಕ್ಕ ಹುಡುಗ— ನಾಲ್ಕು

ಟಿ. ಪ. — ಈಸಲಕ್ಕೆ ಅವನಿಗೆ ತಿಕೀಟಿಲ್ಲದೆ ಪ್ರಯಾಣ ಮಾಡಲು ಬಿಡುವೆನು. ಅವನು ದೊಡ್ಡವನಾದ ಮೇಲೆ ಏನಾಗುತ್ತಾನೆಂಬುದು ನನಗೆ ಗೊತ್ತು.

ತಾಯಿ · ಏನಾಗುತ್ತಾನೆ?

ಟಿ. ಪ. — ನಿನ್ನ ಪೋಷಣೆಯಿಂದ ಅವನು ಒಂದೇ ಸುಳ್ಳುಗಾರನಾಗುತ್ತಾನೆ ಇಲ್ಲದೆ ದೊಡ್ಡ ಜಗಜಟ್ಟಿಯಾಗುತ್ತಾನೆ!

ದಿ ಅರುಣ ಪಾಟರೀಜ ಲಿ.

ಖಾನಾಪುರ, ಜಿ: ಬೆಳಗಾವಿ

ಫಾಯರ ಬ್ರಿಕ್ಸ, ಫಾಯರ ಕ್ಲೇವೇರ್ಸ ಮತ್ತು ಇತರ ಸೆರೆಮಿಕ್ ಪ್ರಾಡಕ್ಟ್ಸ

(ಕುಂಬಾರನ ತಯಾರಿಕೆಗಳನ್ನು)

ಪೂರೈಸುತ್ತೇವೆ.

ವಿಚಾರಣೆಗಳಿಗೆ ಸ್ವಾಗತ.

೧೯೪೯ ನೇ ವರ್ಷದಲ್ಲಿ ಏನಾಗುವುದಿದೆ?

೧೯೪೯ ನೇ ವರ್ಷದಲ್ಲಿಯ ನಿಮ್ಮ ಸುಖ ದುಃಖಗಳನ್ನು ಮುಂಚೆಯೇ ತಿಳಿದುಕೊಳ್ಳುವದಿದ್ದರೆ ನಮಗೆ ಪೋಸ್ಟ ಕಾರ್ಡಿನ ಮೇಲೆ ನಿಮ್ಮ ವಿಳಾಸ ಬರೆದು, ಯಾವದಾದರೊಂದು ಹಣ್ಣಿನ ಹೆಸರು ಬರೆದು ಕಳಿಸಿರಿ. ಅಷ್ಟರಿಂದಲೇ ನಾವು ಜ್ಯೋತಿಷ್ಯ ಶಾಸ್ತ್ರದ ಬಲದಿಂದ ನಿಮಗೆ ಬರುವ ೧೨ ತಿಂಗಳಲ್ಲಿ ಆಗುವ ಲಾಭಾಲಾಭ, ಯಾವ ವ್ಯಾಪಾರದಲ್ಲಿ ಹಾನಿ, ಯಾವ ರೀತಿ ದ್ರವ್ಯಲಾಭ, ನೌಕರಿ ಎಂದು ಸಿಗುವದು, ಉದ್ಯೋಗದಲ್ಲಿ ಬಡತಿ ಹಿಂಬಡತಿ ಹಾಗೂ ವರ್ಗಾವರ್ಗಿ, ನಿಮ್ಮ ಹೆಂಡಿರು ಮಕ್ಕಳ ಸುಖ, ಆರೋಗ್ಯ, ಆಜಾರಿ ದೂರಿನ ಪ್ರವಾಸ, ಖಟ್ಲೆ ಹಾಗೂ ಪರೀಕ್ಷೆಗಳಲ್ಲಿ ಯಶ, ಲಗ್ನ, ಹೊಲ ಮನೆಗಳ ಸುರಕ್ಷಿತೆ ಹೊಸ ಸಂಬಂಧ ಅಥವಾ ಲಾಭ, ಸಟ್ಟಾ ಇಲ್ಲವೆ ಇತರ ಅನಿರೀಕ್ಷಿತ ದ್ರವ್ಯಲಾಭ, ಮುಂತಾದ್ದನ್ನು ನಿಮ್ಮ ಪತ್ರದ ತಾರೀಖಿನಿಂದ ಒಂದು ವರ್ಷದ ವರೆಗೆ ಆಗತಕ್ಕ ಎಲ್ಲ ಘಟನೆಗಳನ್ನು ಸವಿಸ್ತರವಾಗಿ ಬರೆದು, ನಿಮಗೆ ೧೨ ತಿಂಗಳ ಪೂರ್ಣ ಭವಿಷ್ಯ ತಯಾರಿಸಿ ಕೇವಲ ಒಂದು ರೂಪಾಯಿ ನಾಲ್ಕಾಣೆಯೊಳಗೆ ವ್ಹಿ. ಪಿ. ಮಾಡಿ ಕಳಿಸಲಾಗುವದು. ಪೋಸ್ಟ ವೆಚ್ಚ ಬೇರೆ. ಅದರ ಜೊತೆಗೆ ನಿಮ್ಮ ಮುಂದ ಭಾಗ್ಯವನ್ನು ಉಜ್ವಲಗೊಳಿಸುವ ಉಪಾಯವನ್ನೂ ಬರೆದು ತಿಳಿಸುವೆವು. ಅದರಿಂದ ಮುಂಬರುವ ಸಂಕಟಗಳಿಂದ ಪಾರಾಗಲು ಹಗುರಾಗುವದು. ಇದೊಂದೇ ಅನುಭವದಿಂದ ನಿಮಗೆ ನಮ್ಮ ಜ್ಯೋತಿಷ್ಯ ಜ್ಞಾನದ ಖಾತ್ರಿಯಾಗುವದು. ಇದು ಸುಳ್ಳೆಂದು ಸಿದ್ಧಮಾಡಿ ಕೊಟ್ಟರೆ ಹಣ ವಾಪಸ ಕಳಿಸಿ ಕೊಡುವೆವು.

Shri Swami Sat Narayan Jotish Ashram (S.K.D.)
Jullundur City.

ಕರ್ನಾಟಕ

ಸುಧಾರಿಸಿದ ಏತಗಳು

ಲೇ— ಶ್ರೀ ಸಂಜೀವರಾವ ಕಲ್ಲಾಪೂರ,
ಧಾರವಾಡ.

ಹಿಂದುಸ್ಥಾನದಲ್ಲಿ ಬೇಸಾಯದ ಬಗ್ಗೆ ನೀರು ಸೇದಲು ಹಲವು ಬಗೆಯ ಜಲಯಂತ್ರಗಳು ಪ್ರಚಾರದಲ್ಲಿರುತ್ತವೆ. ಇವುಗಳಲ್ಲಿ ಉತ್ತರ ಕನ್ನಡದಲ್ಲಿ 'ದೊಟ್ಟಿ' (ಜೊಟ್ಟೆ, ಯಾತ) ಗಳೆಂದು ಹೆಸರುಗೊಂಡಿರುವವು ಒಂದು ಪ್ರಕಾರದವು. ಇವು ಕರಾವಳಿಯ ಪ್ರದೇಶದಲ್ಲಿ ದೊಡ್ಡ ಪ್ರಮಾಣದಿಂದ ಕಂಡು ಬರುತ್ತವೆ. ೨—೩ ಮಾರು ಆಳವಾದ ಬಾವಿ ಮತ್ತು ಹೊಂಡಗಳಿಂದ ನೀರು ಎತ್ತಲು ಇವು ಅತ್ಯಂತ ಉಪಯುಕ್ತವಾಗಿರುತ್ತವೆ. ತೆಂಗು ಅಡಿಕೆಗಳ ತೋಟಕ್ಕೂ ಕಾಯಿಪಲ್ಲೆಗಳ ಹಿತ್ತಲಿಗೂ ಇವುಗಳಿಂದ ನೀರು ಹಾಕುತ್ತಾರೆ.

ಈ ರೀತಿಯ 'ದೊಟ್ಟಿ' ಗಳನ್ನು ತಯಾರಿಸುವದು ಅತಿ ಸುಲಭ. ಇವುಗಳನ್ನು ಮನೆಯಲ್ಲಿಯೇ ರೈತರು ತಯಾರಿಸಿಕೊಳ್ಳುತ್ತಾರೆ. ಈ ಬಗ್ಗೆ ವಿಶೇಷ ಖರ್ಚು ತಗಲುವದಿಲ್ಲ. ಎರಡು ಕಂಬ, ಒಂದು ಎಳೆ, ೨—೩ ಮಾರು ಉದ್ದದ ಬಿದಿರು ಇದ್ದರೆ ತೀರಿತು. ಕಟ್ಟಿಗೆಯ ಅಥವಾ ಕಬ್ಬಿಣದ 'ಎಕ್ಸೆಲ್' (ಅಣಿ) ತಯಾರಿಸಿಕೊಳ್ಳಬರುತ್ತದೆ. ಬಾವಿಯ ಬದಿಗೆ ಕಂಬ ನಿಲ್ಲಿಸುತ್ತಾರೆ. ಅವುಗಳ ತುದಿಗಿರುವ ಅಣಿಯ ಮೇಲೆ ಎಳೆಯನ್ನು ಹೇರಿ ಕೂಡಿಸುತ್ತಾರೆ. ಎಳೆಯ ಒಂದು (ಬಾವಿಯ ಕಡೆಯ) ತುದಿಗೆ ಬಿದಿರನ್ನು ಕಟ್ಟಿ ಅದಕ್ಕೆ ನೀರು ನೊಗೆಯುವ ಕೊಡ ಅಥವಾ ಪಾತ್ರೆಯನ್ನು ಕಟ್ಟಲು ಬರುವಂತೆ ಮಾಡಿರುತ್ತಾರೆ. ಎಳೆಯ ಇನ್ನೊಂದು ತುದಿಗೆ ಒಂದು ಕಲ್ಲು ಕಟ್ಟಿರುತ್ತಾರೆ. ಕಂಬದ ಎತ್ತರ ಎಳೆಯ ಉದ್ದಳತೆಗಳು ಬಾವಿಯ ಆಳವನ್ನವಲಂಬಿಸಿರುತ್ತವೆ.

ಬಾವಿಯ ದಂಡೆಗೆ ನಿಂತು ಬಿದಿರನ್ನು ಜಗ್ಗಲು ಕೊಡ (ಅಥವಾ ಪಾತ್ರೆ) ವು ಕೆಳಗೆ ಹೋಗಿ ನೀರು ತುಂಬಿಕೊಳ್ಳುತ್ತದೆ. ಆ ಮೇಲೆ ಸ್ವಲ್ಪ ಕಸುವಿನಿಂದ ಮೇಲೆ ಎತ್ತಿದೊಡನೆಯೇ ಇನ್ನೊಂದು ತುದಿಗೆ ಕಟ್ಟಿರುವ ಕಲ್ಲಿನ ಭಾರದ ಮೂಲಕ— ನೀರು ತುಂಬಿದ ಪಾತ್ರೆಯು ಮೇಲೆ ಬರುತ್ತದೆ. ಹೀಗೆ ಕೆಳಗೆ ಜಗ್ಗಲಿಕ್ಕೂ ಮೇಲೆ ಎತ್ತಲಿಕ್ಕೂ ಹಗುರಾಗುವಂತೆ ಆ ಕಲ್ಲಿನ ಭಾರವಿರುತ್ತದೆ.

ಈ ರೀತಿಯ ಜಲಯಂತ್ರಗಳು ರೂಢಿಯಲ್ಲಿ ಬಂದು ಎಷ್ಟೋ ಶತಮಾನಗಳಾದವು. ಆದರೂ ಅವುಗಳಲ್ಲಿ ಯಾವ ಸುಧಾರಣೆಯಾದದ್ದೂ ಕಂಡುಬರುವದಿಲ್ಲ. ಅತಿ ಸ್ವಲ್ಪ ಬದಲಾವಣೆಯಿಂದ ಈ ಯಂತ್ರದ ಉಪಯುಕ್ತತೆಯನ್ನು ಇಮ್ಮಡಿಸಬಹುದೆಂದು ನಾವು ಕಂಡು ಹಿಡಿದಿರುತ್ತೇವೆ. ಈ ಸುಧಾರಣೆಯು ಕಬ್ಬಿಣದ ಅಣಿಯಲ್ಲಿ ಕಂಡುಬರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಎಳೆಯು ಅಣಿಗೆ ಹೊಂದಿಕೊಂಡೇ ಇರುವುದರಿಂದ ಸೇದುವಾಗ ಕಬ್ಬಿಣ ಕಟ್ಟಿಗೆಗಳ ಘರ್ಷಣದಿಂದ ಕಾವೂ, ಸಪ್ಪಳವೂ ಹುಟ್ಟುತ್ತದೆ. ಇದರಿಂದ ಎತ್ತುವವನಿಗೆ ಶ್ರಮವಾಗುತ್ತದೆ. ಆದರೆ ಎಳೆಗೂ ಅಣಿಗೂ ನಡುವೆ ಒಂದು ಬಾಲ್‌ಬೇರಿಂಗ್ ಇಟ್ಟರೆ ಮೇಲೆ ಹೇಳುವ ದೋಷವು ಹೋಗುತ್ತದೆ. ಈಗ ರೂಢಿಯಲ್ಲಿದ್ದ "ದೊಟ್ಟಿ" ಗಳಿಂದ ಒಬ್ಬನು ೫ ನಿಮಿಷಗಳಲ್ಲಿ ೪ ಗ್ಯಾಲನ್ ನೀರನ್ನು ೮ ಫೂಟು ಮೇಲಕ್ಕೆ ೩೬ ಸಲ ಎತ್ತಬಹುದು. ಆದರೆ ಬಾಲ್‌ಬೇರಿಂಗ್ ಹಾಕಿ ಸುಧಾರಿಸಿದ ಯಂತ್ರಗಳಿಂದ ೪೭ ಸಾರೆ ಎತ್ತಬಹುದು ಇದಲ್ಲದೆ ಈಗಿನಷ್ಟು ಬೇಗ ಎತ್ತುವವನ ಕೈ ಸೋಲುವದಿಲ್ಲ. ಈಗಿನಕಿಂತ ಒಂದೂಕಾಲುಪಟ್ಟು ಹೆಚ್ಚು ಹೊತ್ತು ಅವನು ಎತ್ತಬಹುದು.

ಎಳೆಗೂ ಅಣಿಗೂ ನಡುವೆ ಬಾಲ್‌ಬೇರಿಂಗ್ ಇಡುವ ಬದಲು ಒಂದೊಂದು ಕಂಬದ ತುದಿಗೆ ಒಂದೊಂದರಂತೆ ಬಾಲ್‌ಬೇರಿಂಗ್ ಇಟ್ಟು ನೋಡಿದೆವು. ಬಾವಿಗಳು ೧೫ ಫೂಟಗಿಂತ ಕಡಿಮೆ ಆಳವಾಗಿರುವಲ್ಲೆಲ್ಲ ಅಣಿಯ ನಡುವೆ ಒಂದೇ ಬಾಲ್‌ಬೇರಿಂಗ್ ಇಡುವದೇ ಒಳಿತೆಂತಲೂ ಅದಕ್ಕಿಂತ ಹೆಚ್ಚು ಆಳವಾಗಿರುವಲ್ಲಿ ಎರಡು ಬಾಲ್‌ಬೇರಿಂಗ್‌ಗಳನ್ನು ಇಡುವದು ಒಳಿತೆಂದೂ ನಮ್ಮ ಅನುಭವವಾಗಿದೆ.

ಹೊನ್ನಾವರದ ಕೋಆಪರೇಟಿವ್ ವರ್ಕ್‌ಶಾಪ್‌ದಲ್ಲಿ ನಾವು ಇವುಗಳನ್ನು ತಯಾರಿಸಿದೆವು. ಕಬ್ಬಿಣದ ಅಣಿ, ಅದನ್ನು ಉರುಟು ಮಾಡಿಸುವ ಖರ್ಚು ಮತ್ತು ಅದಕ್ಕೆ ಬಾಲ್‌ಬೇರಿಂಗ್ ಕೂಡಿಸುವ ಖರ್ಚು ಇವುಗಳಿಗೆ ಒಂದು ಜೇರಿಂಗಿಗೆ ೧೫ ರೂ. ಈ ಪ್ರಕಾರ ಖರ್ಚು ತಗಲುತ್ತದೆ. ಇಷ್ಟು ಖರ್ಚನ್ನು ನಾನ್ನೂರದ ಒಂದು ಎಕರೆ ತೋಟ ಅಥವಾ ಹಿತ್ತಲು ಗದ್ದೆಗಳನ್ನು ಮಾಡುವವರು ಸಹಜವಾಗಿ ಒಂದೂ ಕಾಲು ಎಕರೆಯನ್ನು ಮಾಡಬಹುದು. ಬೇರಿಂಗ್ ಮುಂತಾದವು ಒಂದೇ ವರ್ಷ ಬಂದರೂ ಸಾಕು; ಅದರಿಂದ ಲಾಭವಾಗುತ್ತದೆ. ಆದರೆ ಅವು ಒಂದು ವರ್ಷಕ್ಕಿಂತ ಹೆಚ್ಚು ಬರುವವು.

ಧಾರವಾಡ

ಹಾನಗಲ್ ತಾಲೂಕಿನ ಬೆಳಗಾಲ ಪೇಟೆಯ ಗ್ರಾಮದಲ್ಲಿರುವ ೧೫೦ ಎಕರೆ ವಿಸ್ತಾರದ ದೊಡ್ಡ ಕೆರೆಗೆ ಬೊಮ್ಮನಹಳ್ಳಿಯ ಒಡ್ಡಿನ ಕೆರೆಯಿಂದ ನೀರು ತರುತಿದ್ದ ಕಾಲಿವೆ ಕೆಟ್ಟಿರುವದರಿಂದ ಅದರಲ್ಲಿ ನೀರಿಲ್ಲದಾಗಿದೆಯೆಂದೂ ಅವನ್ನು ಸರಿಪಡಿಸಿದರೆ ೫೦೦೦ ಎಕರೆ ಭೂಮಿ ನೀರುಂಡು ವರ್ಷಕ್ಕೆ ೬೦-೫೦ ಸಾವಿರ ಚೀಲ ಭತ್ತ ಬೆಳೆಯುವಂತಿರುವದರಿಂದ ಸರಕಾರದವರು ಇತ್ತ ಗಮನಿಸಬೇಕೆಂದೂ ಅಲ್ಲಿಯ ರೈತರು ಬಿನ್ನವಿಸಿದ್ದಾರೆ.

ಹುಬ್ಬಳ್ಳಿಯ ಗಂಗಾಧರ ಕಾಮರ್ಸ ಕಾಲೇಜಿಗೆ ಗದುಗಿನ ಪ್ರಸಿದ್ಧ ವರ್ತಕರಾದ ಶ್ರೀ ದಾಂತಪ್ಪ ಅಂಡಾ ಯಳಮಲಿಯವರು ತಮ್ಮ ಮಕ್ಕಳ ವಿವಾಹ ಸಂದರ್ಭದಲ್ಲಿ ೫೦೦೦ ರೂ. ಕಾಣಿಕೆ ಕೊಟ್ಟಿದ್ದಾರೆ. ಅವರು ಈ ಕಾಲೇಜಿಗೆ ೫೦೦೦ ನ ಕಾಣಿಕೆ ಕೊಡುವದು ಇದು ಎರಡನೆ ಬಾರಿ.

ಕನ್ನಡದಲ್ಲಿ ಕಾವ್ಯಗಾಯನ ಕಲೆಯ ಪ್ರೋತ್ಸಾಹನಕ್ಕಾಗಿ, ಹುಬ್ಬಳ್ಳಿಯ ಗಂಗಾಧರ ಕಾಮರ್ಸ ಕಾಲೇಜಿನ ಕರ್ನಾಟಕ ಸಂಘದವರು ಹುಬ್ಬಳ್ಳಿ ಮತ್ತು ಧಾರವಾಡ ನಗರಗಳಲ್ಲಿನ ಕಾಲೇಜು ಮತ್ತು ಹೈಸ್ಕೂಲುಗಳ ನಡುವೆ ಕಾವ್ಯಗಾಯನ ಸ್ಪರ್ಧೆಯನ್ನೇರ್ಪಡಿಸಿ ಆ ಬಗ್ಗೆ ಒಂದು ಬೆಳ್ಳಿಯ ರೋಲಿಂಗ್ ಶೀಲ್ಡನ್ನು ಇರಿಸಬೇಕೆಂದು ಸಂಕಲ್ಪಿಸಿದ್ದಾರೆ.

ಧಾರವಾಡ ಜಿಲ್ಲೆಯಿಂದ ದಿನಕ್ಕೆ ಸರಾಸರಿ ೩೦೦೦ ಚೀಲದಂತೆ ಜೋಳ ಹೊರಗೆ ಹೋಗುತ್ತಿರುವದರಿಂದ ಆಹಾರ ಪರಿಸ್ಥಿತಿ ಬಿಗಡಾಯಿಸಬಹುದು. ತಕ್ಕ ಪ್ರತೀಕಾರೋಪಾಯ ಕೈಕೊಳ್ಳಬೇಕೆಂದು ಕರ್ನಾಟಕ ವಣಿಕ್ಸಂಘದವರು ಧಾರವಾಡ ಕಲೆಕ್ಟರರಿಗೆ ತಂತಿ ಕಳಿಸಿದ್ದಾರೆ.

ಧಾರವಾಡದ ಕೆ. ಈ. ಬೋರ್ಡ ಆರ್ಟ್ಸ ಕಾಲೇಜಿಗೆ ಉದಾರ ಮಹನೀಯರಿಂದ ಈಗಾಗಲೆ ೨೦೦೦೦ ರೂಪಾಯಿಗಿಂತ ಹೆಚ್ಚು ಧನಸಹಾಯದ ವಾಗ್ದಾನ ಬಂದಿದೆಯೆಂದು ತಿಳಿಯುತ್ತದೆ. ಶ್ರೀ ಶ್ರೀಪಾದರಾವ ಶೇವಡೆ, ಜಿ. ಆರ್ ದೇಸಾಯಿ ಕಲ್ಲಾಪುರ, ಶ್ರೀ ರಾಘವೇಂದ್ರಸ್ವಾಮಿ ಮಠಾಧಿಪತಿಗಳು, ಶಿವಲಿಂಗಪ್ಪಾ ಅಲಮೇಲ, ಮಗ್ಗಾವಿಲಾಸ, ಡಾ ಎಸ್ ಜಿ ಜೋಶಿ, ಡಾ ಜಿ ಎನ್ ಪಾಳನೇಕರ ಎ. ಎಸ್ ದಾತಾರ, ಬಾಬುರಾವ ಪುಸಾಳಕರ, ಡಾ ವಾಗಳೆ ಮೊದಲಾದವರು ಸಹಾಯಕರಲ್ಲಿರುವರು.

ಬೆಳಗಾವಿ

ಬೆಳಗಾವಿಯ ಪ್ರಸಿದ್ಧ ಚಿನಿವಾಲರಾದ ಶ್ರೀ ಪೋತದಾರರ ಅಂಗಡಿಗೆ ಮಾರೋ ಒಬ್ಬನು ಬಂದು, ತಾನು ಅಹಮದಾಬಾದಿನ ಮಾಣಿಕಚಂದ ಪ್ರೇಮಚಂದ ಅಗ್ರವಾಲಾ ಎಂಬ ಚಿನಿವಾಲನೆಂದು ಹೇಳಿ,೨೦೦ತೊಲೆ ಚಿನ್ನ ತೂಗಿಸಿ, ೨೦೦ ರೂಪಾಯಿ ಮುಂಗಡ ಕೊಟ್ಟು, ತಾನು ಎರಡು ದಿನದಲ್ಲಿ ಮರಳಿ ಪೂರ್ಣ ಹಣ ಕೊಡುವ ವರೆಗೆ ಅದನ್ನು ಒಂದು ಡಬ್ಬಿಯಲ್ಲಿ ಹಾಕಿ ಬೆಸೆಸಿ ಇಡಬೇಕೆಂದು ಡಬ್ಬಿ ಕೊಟ್ಟು, ಚಿನ್ನ ಹಾಕಿಸಿ ಬೆಸೆಸಿ, ಬೆಸಿಗೆ ಹೇಗಾಗಿದೆಯೆಂದು ಕೈಲಿ ತೆಗೆದುಕೊಂಡು ನೋಡಿ ಕೊಟ್ಟು ಹೋದವನು ಮತ್ತೆ ಮುಖ ತೋರಿಸಲಿಲ್ಲ. ಸಂಶಯ ಬಂದು ಡಬ್ಬಿ ಒಡೆದು ನೋಡಲು ಅದರಲ್ಲಿದ್ದುದು ಅಷ್ಟೆ ತೂಕದ ಸೀಸ. ಕೈಚಳಕ ನಿಪುಣನಾದ ಈ ಠಕ್ಕನ ಬಗ್ಗೆ ಈಗ ಪೋಲೀಸರ ಶೋಧ ನಡೆದಿದೆ.

ಗಾಂಧೀಜಿಯ ಕೊಲೆಯಾದ ನಂತರ ನಡೆದ ಅತ್ಯಾಚಾರಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ತೀರ್ಮಾನಿಸಲು ಬೆಳಗಾವಿ ಜಿಲ್ಲಾ ಮತ್ತು ಸೆಶನ್ಸ ಜಜ್ಜರಾದ ಶ್ರೀ ಗುಂಜಾಳರಿಗೆ ವಿಶೇಷ ನ್ಯಾಯಸ್ಥಾನದ ಅಧಿಕಾರ ಕೊಡಲಾಗಿದೆ.

ಮುಖ್ಯಮಂತ್ರಿ ಶ್ರೀ ಬಾಳ ಸಾಹೇಬ ಖೇರರೂ ಅಬಕಾರಿ ಮಂತ್ರಿ ಶ್ರೀ ಎಂ. ಪಿ. ಪಾಟೀಲರೊಡನೆ ಬೆಳಗಾವಿ, ಹುಬ್ಬಳ್ಳಿ, ಗುಲ್ಬರ್ಗಾ ಮೊದಲಾದ [illegible] ಸಂದರ್ಶಿಸಿ [illegible] ಉದ್ಘಾಟನೆ ಮೊದಲಾದ ಚಟುವಟಿಕೆಗಳನ್ನು ನಡೆಸಿದರು.

ಬೆಳಗಾವಿಯಲ್ಲಿ ಮುಖ್ಯ ಮಂತ್ರಿಯವರು ತಾ. ೮ ಕ್ಕೆ ನಗರ ವಾಚನಾಲಯದ ರಜತಮಹೋತ್ಸವದಲ್ಲಿ ಭಾಷಣ ಮಾಡಿ ವಾಚನಾಲಯಗಳು ಜ್ಞಾನದ ಜೀವಂತ ಝರಿಗಳೆಂದು ಹೇಳಿದರು. ಮುತ್ತು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬೆಳವಿ, ಧನಸಹಾಯ ಮಾಡಿದ ರಾಜಾ ಲಖಮನಗೌಡ ಸರದೇಸಾಯಿ, ಹಾಗು ಶ್ರೀ. ಕೆ. ಬಿ. ಜೋಗರ ತೈಲಚಿತ್ರಗಳ ಅನಾವರಣ ಮಾಡಿದರು. ಸಂಜೆ ಕಾಂಗ್ರೆಸ ಕಾರ್ಯಕರ್ತರೊಡನೆ ನಡೆದ ಚರ್ಚೆಯಲ್ಲಿ ಪತ್ರಿ ಯೋಜನೆಯ ಬಗ್ಗೆ ಈಗಾಗಲೆ ಇಂಜನಿಯರರು ಕಾರ್ಯ ಪ್ರವೃತ್ತರಾಗಿರುವರೆಂದು ಆಶ್ವಾಸನವಿತ್ತು ಅದು ಮುಗಿಯಲು ೧೨ ವರ್ಷ ಹಿಡಿಯಬಹುದೆಂದರು.

ಗೋಕಾಕ ನಗರ ಸಭಾ ಚುನಾವಣೆಗಳು ತಾ. ೨೦ ಕ್ಕೆ ಜರುಗಲಿದ್ದು ಮೂವರು ಅವಿರೋಧವಾಗಿ ಆರಿಸಿ ಬಂದಿದ್ದಾರೆ. ಉಳಿದ ೧೩ ಸ್ಥಾನಗಳಿಗೆ ೨೭ ಹುರಿಯಾಳುಗಳಿದ್ದಾರೆ.

ದಕ್ಷಿಣ ಕನ್ನಡ

ಶ್ರೀ ದೇವಿಯ ಮೂಲಸ್ಥಾನವಾದ ಪೊಳಲಿ ಶ್ರೀ ರಾಜರಾಜೇಶ್ವರಿ ಅಮ್ಮನವರಿಗೆ ಮೈಸೂರು ಶ್ರೀಮನ್ಮಹಾರಾಜರು ೮ ನೇ ತಾರೀಖು ೬೦೦ ರೂಪಾಯಿ ಬೆಲೆ ಬಾಳುವ ಪೂಜಾ ಸಾಮಾನುಗಳನ್ನು ಕಳುಹಿಸಿರುವರು. ಶ್ರೀ ಮನ್ಮಹಾರಾಜರಿಗೆ ಅಮ್ಮನವರು ಆಯುರಾರೋಗ್ಯಾದಿಗಳನ್ನು ದಯಪಾಲಿಸಲೆಂದು ಬೇಡಿಕೊಂಡು ಪ್ರಸಾದವನ್ನು ಅರಮನೆಗೆ ಕಳಿಸಲಾಯಿತು.

ಕುಂದಾಪುರ ತಾಲೂಕ ಹೆರಂಜಾಲು ಗ್ರಾಮದ ಶ್ರೀ ಮಹಿಷಮರ್ದಿನಿ ದೇವಸ್ಥಾನದ ಶ್ರೀ ರಾಮಮಂದಿರದಲ್ಲಿನಗರಭಜನೆಯುಇಷೇ ಕಳೆದಕಾರ್ತಿಕ ಶುದ್ಧ ಪಾಡ್ಯ ಪ್ರಾರಂಭವಾಗಿ ಕಾರ್ತಿಕ ಅಮವಾಸ್ಯೆ ಬೆಳಗ್ಗೆ ೮ ಗಂಟೆಗೆ ಜ್ಯೋತಿ ಸ್ಥಾಪನೆ ಮಾಡಿ ಮಾರನೆಯ ದಿನ ಬೆಳಗ್ಗೆ ೯ ಗಂಟೆಗೆ ಅವಭೃಥ ಸ್ನಾನದೊಂದಿಗೆ ಕೊನೆಗೊಂಡಿತು.

[illegible]

[illegible]

[illegible]

ಬೆಂಗಳೂರಿನಲ್ಲಿ ೧೫ [illegible] ನಾಡಿದ್ದಾರೆ.

ಬೆಂಗಳೂರಿನ [illegible] ಮೈಸೂರು [illegible] ಶಿಕ್ಷಣಾಲಯಗಳನ್ನು [illegible] ಭಾರತ ಮುಖ್ಯಮಂತ್ರಿ [illegible] ಉದ್ಘಾಟನ ಮಾಡಿದರು.

ಮೈಸೂರು [illegible] ಶ್ರೀ. ಜಿ. [illegible] ಕೇಂದ್ರ ಸರಕಾರದ ಅಧಿಕಾರಿಗಳು [illegible] ಪ್ರಾಂತಗಳ [illegible] ಇರಬೇಕೆಂದು [illegible] ತಿಳಿದುಬಂದಿದೆ.

ಸೊಲ್ಲಾಪುರ

ಮುಂಬಯಿ ಪ್ರಾಂತಿಕ ಮುದ್ರೋದ್ಯೋಗ [illegible] ಅಧಿವೇಶನ ತಾ. ೨೫—೨೬ ಕ್ಕೆ [illegible] ಪಾಲರಾದ ಎ. ಕೆ. [illegible] ಅಧ್ಯಕ್ಷತೆಯಲ್ಲಿ ನೇರವೇರಿತು. ಮುಂಬಯಿ ಸರಕಾರದ ಶಿಕ್ಷಣ ಸಲಹೆಗಾರರಾದ ಶ್ರೀ ಕೆ. ಜಿ. [illegible] ಅಧಿವೇಶನವನ್ನು ಉದ್ಘಾಟಿಸಿದರು.

ಪಾಂಡೂ ಬ್ರದರ್ಸ ಇವರ
ಅನುಭವಿಸಿದ್ಧ ಔಷಧಗಳು
ಪಾಂಡೂ-ಪ್ರೇಗ ಯುಟೆರೊ
ಗರ್ಭಿಣಿ ಸ್ತ್ರೀ ಮತ್ತು ಗರ್ಭ ಇವುಗಳಿಗೆ ಪೋಷಕ
ಪಾಂಡೂ-ಬಾಳಂತ ಕಾಢಾ
ನಂ.೧ ಮೊದಲನೆಯ ಹತ್ತು ದಿವಸ, ನಂ.೨ ಹತ್ತು ದಿವಸದ ನಂತರ ತಕ್ಕೊಳ್ಳುವದು
ಪಾಂಡೂ-ಬಾಳಕಡು
ಶಿಶು ಜನ್ಮಕ್ಕೆ ಬಂದ ನಂತರ ಕೊಡುವದಕ್ಕೆ ಉತ್ತಮ
ಪಾಂಡೂ-ಕುಮಾರಿಆಸವ ನಂ. ೩
ಮಕ್ಕಳ ಪಿತ್ತಾಶಯದ(ರಕ್ತಪಿತ್ತ) ಮೇಲೆ ಮತ್ತು ರಕ್ತದ ಮೇಲೆ ಉತ್ತಮ
ಪಾಂಡೂ-ಬಾಳಗುಟಿ [illegible]
ಹಸಿವೆಯಾಗಿ ಅನ್ನಪಚನ ಸರಿಯಾಗಿ ಆಗಲು [illegible]
ಒರಿಜನಲ ಧ್ರಿಪ್ರೈಲದ ಒಬ್ಬರೇ ಕಾರಖಾನೆದಾರರು
[illegible] ಪಾಂಡೂ ಬ್ರದರ್ಸ [illegible]
[illegible]
ಹುಬ್ಬಳ್ಳಿ ಶಾಖೆ—ಕೊಪ್ಪೀಕರ ರೋಡ, ಹುಬ್ಬಳ್ಳಿ

ಹಿಂದುಸ್ತಾನ

ಮುಂಬಯಿ

ಕಾರ್ಯನಿರಾಕರ ಶಾಖೆಯೊಂದನ್ನು ಸ್ಥಾಪಿಸುವ ಶಾಖೆಯನ್ನು ಪ್ರತ್ಯೇಕಿಸುವ ಮಸೂದೆಯನ್ನು ಮುಂಬಯಿ ಸರಕಾರವು ಮುಂಬರುವ ಮುಂಗಡ ಪತ್ರಿಕೆಯ ಅಧಿವೇಶನದಲ್ಲಿ ಮಂಡಿಸುವದೆಂದು ತಿಳಿಯುತ್ತದೆ.

ಹಿಂದುಸ್ಥಾನ ಸರಕಾರದ ಇದೇ ಕಡಿಮೆ ದರದ ಒಂದು ಪ್ರಕಟನೆ ಹೊರಡಿಸಿ ಬಟ್ಟೆ ಗಿರಣಿಗಳು ಅನಾವಶ್ಯಕವಾಗಿ ಬೆಲೆಯನ್ನು ಕೊಟ್ಟುಕೊಳ್ಳುವದರಿಂದ ಅವರು ಪುನಃ ಬೇರೊಬ್ಬರಿಗೆ ಬೆಲೆಯನ್ನು ಮಾರುವಾಗ ಅಷ್ಟಕ್ಕೆ ಇಡಬೇಕೆಂದು ವಿಧಿಸಿದ್ದಾರೆ.

ಕೇಂದ್ರ ಆಹಾರ ಮಂತ್ರಿ ಜಯರಾಮದಾಸರು ತಾ. ೮ ರ ಮುಂಜಾನೆ ಮುಂಬಯಿ ನಾಸಿಕ ಪಟ್ಟಣಕ್ಕೆ ಭೆಟ್ಟಿಕೊಟ್ಟು ನಾಸಿಕ ವ್ಯವಸಾಯಗಾರರ ಪರಿಷತ್ತು ಸೇರಿಸಿ ಕಡಮೆ ಬೆಲೆಗೆ ಉತ್ತಮ ಹಾಲು ಹೇಗೆ ಒದಗಿಸಬಹುದೆಂಬುದನ್ನು ವಿಚಾರಿಸಬೇಕೆಂದೂ ಒಕ್ಕಲತನ ಹಾಲು ಮತ್ತು ಪಶುಸಂಗೋಪನ ಶಾಲೆಗಳ ವಿದ್ಯಾರ್ಥಿಗಳು ಹಿಂದುಳಿದ ದನಗಳ ಪೋಷಣೆಯ ವಿಷಯವನ್ನು ಚೆನ್ನಾಗಿ ಅಭ್ಯಾಸ ಮಾಡುವಂತೆ ಏರ್ಪಾಟು ಮಾಡಬೇಕೆಂದೂ ಸೂಚಿಸಿದರು.

ಸಾರ್ವಜನಿಕ ಕಲ್ಯಾಣಕ್ಕಾಗಿ ತೆಗೆದಿಟ್ಟ ನಿಧಿಗಳನ್ನು ದಾನಧರ್ಮ ಕಮೀಶನರರು ತಮಗೆ ಯುಕ್ತ ತೋರಿದಂತೆ ಬೇರೆ ಪರೋಪಕಾರದ ಕಾರ್ಯಗಳಿಗೆ ಉಪಯೋಗಿಸಬಹುದೆಂದು ತೆಂಡೂಲಕರ ಸಮಿತಿಯು ಅಭಿಪ್ರಾಯಪಟ್ಟಿದೆ.

ಸಾಮಾಜಿಕ ಶಾಸ್ತ್ರಗಳ ಟಾಟಾ ಸಂಸ್ಥೆಯ ೨೦ ವಿದ್ಯಾರ್ಥಿಗಳು ಮಾದಕಪೇಯಗಳ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ಅಭ್ಯಸಿಸಲು ಕೊಲ್ಹಾಪುರಕ್ಕೆ ತೆರಳಿದ್ದು ಅವರು ಸೆರೆಸಿಂದಿ ಗಡಂಗಗಳಿಗೆ ಬರುವವರ ಅಂಕಿಸಂಖ್ಯೆಗಳನ್ನೂ ಕುಡುಕರ ಕುಟುಂಬಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳನ್ನೂ ಅಭ್ಯಸಿಸುವರೆಂದು ತಿಳಿಯುತ್ತದೆ. ಮುಂಬಯಿ ಸರಕಾರದ ಸೂಚನೆಯಂತೆ ಈ ವಿದ್ಯಾರ್ಥಿಗಳು ಈ ಸಂಶೋಧನೆಯನ್ನು ಕೈಕೊಂಡಿದ್ದಾರೆ.

ಪುಣೆಯಲ್ಲಿ ತಾ. ೭ ರಂದು ನೀರಾ ಪಾನ ಮಾಡಿದ್ದರ ಪರಿಣಾಮವಾಗಿ ೨೦ ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅವರಲ್ಲಿ ಇಬ್ಬರು ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಅವರು ಕುಡಿದ ನೀರಾದಲ್ಲಿ ಅಕಸ್ಮಾತ್ತಾಗಿ ವಿಷಮಿಶ್ರಣವಾಗಿರಬೇಕೆಂದು ಹೇಳಲಾಗುತ್ತಿದೆ. ಡಾಕ್ಟರರಿಗೆ ಕಾರಣವಿನ್ನೂ ಚೆನ್ನಾಗಿ ತಿಳಿದಿಲ್ಲ. ಈ ರೋಗಿಗಳ ಶೌಚದಲ್ಲಿದ್ದ ಕ್ರಿಮಿಗಳನ್ನು ಪರೀಕ್ಷೆಗಾಗಿ ಹ್ಯಾಫಕಿನ್ಸ ಇನ್ಸ್ಟಿಟ್ಯೂಟಿಗೆ ಕಳಿಸಲಾಗಿದೆ.

ಹಿಂದೀ ರಾಷ್ಟ್ರೀಯ ಮಜದೂರ ಸಂಘದ ಗುಜರಾತ ಶಾಖೆಯ ಸಾಧಾರಣ ಮಂಡಲದವರು ತಾ. ೧೦ ರಂದು ಸಭೆ ಸೇರಿ ಗುಜರಾತ ಅಂಚೆ ಪೇದೆ ಮತ್ತು ಕೆಳವರ್ಗದ ನೌಕರರ ಮಹಾಮಂಡಲದ ಪರಲು ಪರಿಡುಕೊಳ್ಳಲು ಗೊತ್ತುವಳಿ ಮಾಡಿ ಸಂಕಷ್ಟ ನಿವಾರಣೆಯ ಬಗ್ಗೆ ಮಂಡಲವು ಅವಶ್ಯಕ ಉಪಾಯ ಕೈಕೊಳ್ಳುವದೆಂದು ಆಶ್ವಾಸನವಿತ್ತಿದ್ದಾರೆ.

ಮುಂಬಯಿ ಸರಕಾರದವರು "ಫೋರಮ್" ಸಂಪಾದಕರಾದ ಜೋಖಿಮ ಅಳ್ವಾ ಎಂಬ ಕನ್ನಡಿಗರನ್ನು ಡಿಸೆಂಬರ ೨೦ ರಿಂದ ಮುಂಬಯಿಯ ಶರೀಫರನ್ನಾಗಿ ನಿಯಮಿಸಿದ್ದಾರೆ. ಪತ್ರಿಕಾ ವ್ಯವಸಾಯಿಗೆ ಈ ಸ್ಥಾನ ಸಿಕ್ಕದ್ದು ಇದೇ ಮೊದಲು.

ಮಧ್ಯಪ್ರಾಂತ

ಡಾ. ಜೆ. ಸಿ. ಕುಮಾರಪ್ಪನವರು ಮಧ್ಯಪ್ರಾಂತದ ಮಾಧ್ಯಮಿಕ ಶಿಕ್ಷಕರ ಸಂಘದ ತೃತೀಯ ವಾರ್ಷಿಕ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ "ರಾಷ್ಟ್ರದ ಮತ್ತು ಹೊಸ ಪೀಳಿಗೆಯ ನಿರ್ಮಾಪಕರಾದ ಶಿಕ್ಷಕರಿಗೆ ಹೊಟ್ಟೆಗೆ ಬಟ್ಟೆಗೂ ಸಾಕಷ್ಟು ಸಂಬಳ ದೊರೆಯದಿರುವದು ಶೋಚನೀಯ" ವೆಂದು ಉದ್ಗಾರ ತೆಗೆದರು.

ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಡಾ. ಡಿ. ಆರ್. ಗಾಡಗೀಳರು ತಾ. ೧೨ ರಂದು ನಾಸಿಕದ ರೋಟರಿ ಕ್ಲಬ್ಬಿನಲ್ಲಿ ಭಾಷಣಮಾಡುತ್ತ, ಏರಿದ ಬೆಲೆಗಳು ಇಳಿದರೆ ಮಾತ್ರ ಅತಿಪ್ರಸರಣವು ಸರಕಾರದ ಹತೋಟಿಯಲ್ಲಿದೆ ಎಂಬುದಾಗಿ ಜನಸಾಮಾನ್ಯರಿಗೆ ಮನದಟ್ಟಾಗುವದು. ಅದ್ದರಿಂದ ಸರಕಾರವು ಬೆಲೆಗಳು ಇಳಿಯುವಂತೆ ಮಾಡಿ ಜನತೆಯ ವಿಶ್ವಾಸಕ್ಕೆ ಪಾತ್ರವಾಗಬೇಕು ಎಂದೂ ಸರಕಾರವು ಒಂದು ವರ್ಷದ ನೋಟೀಸುಕೊಟ್ಟು ಲಾಭಬಡಕರಿಗೆ ಸಾಕಷ್ಟು ಸಿದ್ಧತೆಯ ಅನುವುಕೊಟ್ಟು ಕ್ರಮೇಣ ನಿಯಂತ್ರಣವನ್ನು ಹೇರುವ ಧೋರಣ ವಹಿಸಿದ್ದರಿಂದ ಈ ನಿಯಂತ್ರಣವು ಯಶಸ್ವಿಯಾಗಲಾರದೆಂದೂ ಯುಕ್ತಿಯುಕ್ತವಾಗಿ ಪ್ರತಿಪಾದಿಸಿದರು.

ಹೊಸದಿಲ್ಲಿ

ಹಿಂದುಸ್ಥಾನದ ಗ. ಜ. ಶ್ರೀ ರಾಜಗೋಪಾಲಾಚಾರ್ಯರಿಗೆ ತಾ. ೧೦ ಕ್ಕೆ ೭೦ ವರ್ಷ ತುಂಬಿದವು. ಆಗ ಒಂದು ಸಂದರ್ಶನದ ಕಾಲಕ್ಕೆ ಅವರು ಜಕ್ಕೆಯು ಕ್ರೈತವಂತೆ ನನಗೂ ನನ್ನ ಜನ್ಮದಿನ ಯಾವುದೋ ಗೊತ್ತಿಲ್ಲ. ಹುಟ್ಟಿಗೆ ಹುಟ್ಟಿದ ಹಬ್ಬವೆಂದರೆ ಹಿಗ್ಗು ಹಿರಿಯರಾದ ನಮಗೆ ಕೆಲಸ ಮಾಡುವದೇ ಆನಂದ ಎಂದು ನೊಡಲಾಗಿ ಹೇಳಿದರು.

ಘಟನಾ ಸಮಿತಿಯ ಸದಸ್ಯರೂ ಮುಖ್ಯ ಪ್ರತೋದರೂ ಆದ ಶ್ರೀ ಸತ್ಯನಾರಾಯಣ ಸಿಂಹರಿಗೆ ಮಂತ್ರಿಪದದ (ಮಿನಿಸ್ಟರ ಆಫ್ ಸ್ಟೇಟ್) ಸ್ಥಾನಮಾನ ಕೊಡಲಾಗಿದೆಯೆಂದು ಮುಖ್ಯ ಮಂತ್ರಿಗಳ ಕಚೇರಿಯಿಂದ ತಾ. ೧೪ ರಂದು ಒಂದು ಪ್ರಕಟನೆ ಹೊರಟಿದೆ.

ಶ್ರೀಮತಿ ಅಮ್ಮು ಸ್ವಾಮಿನಾಥನ್, ಶ್ರೀ. ಎ. ಕೆ. ಮೆನನ್ನರು ಸುದ್ದಿ ಹಾಗು ಆಕಾಶವಾಣಿ ಮಂತ್ರಿಗಳಾದ ಶ್ರೀ ದಿವಾಕರರನ್ನು ಕಂಡು, ಆಕಾಶವಾಣಿ ಕೇಂದ್ರದಿಂದ ಮಲಯಾಳೀ ಭಾಷೆಯಲ್ಲಿಯೂ ಸುದ್ದಿಗಳನ್ನು ಬಿತ್ತರಿಸುವ ವ್ಯವಸ್ಥೆಮಾಡಲು ಬಿನ್ನವಿಸಿದರು. ಶ್ರೀ ದಿವಾಕರರು ಅವರ ಬೇಡಿಕೆಗಳ ಬಗ್ಗೆ ಸಹಾನುಭೂತಿ ಪೂರ್ವಕವಾಗಿ ವಿಚಾರಿಸಲಾಗುವದೆಂದು ಆಶ್ವಾಸನವಿತ್ತರು.

ಕೇಂದ್ರದಲ್ಲಿ ಸುದ್ದಿ ಮತ್ತೂ ಆಕಾಶ ವಾಣಿ ಮಂತ್ರಿ ಶ್ರೀ ರಂಗರಾವ ದಿವಾಕರ ಮತ್ತು ಮೈಸೂರ ಮುಖ್ಯ ಮಂತ್ರಿ ಶ್ರೀ ಕೆ. ಚಂಗಲರಾಯರೆಡ್ಡಿ ಹಾಗು ಮೈಸೂರ ಶಿಷ್ಟಮಂಡಲದ ಸದಸ್ಯರಿಗೆ ತಾ. ೧೨ ರಂದು ದಿಲ್ಲಿಯಲ್ಲಿಯ ಕನ್ನಡಿಗರು ಸತ್ಕಾರ ಸಮಾರಂಭ ಏರ್ಪಡಿಸಿದ್ದರು. ಶ್ರೀ ದಿವಾಕರರೂ ಶ್ರೀ ರೆಡ್ಡಿಯವರೂ ಕರ್ನಾಟಕ ಏಕೀಕರಣದ ಪ್ರತೀಕರಾಗಿದ್ದಾರೆಂದು ಮೊದಲಾಗಿ ಭಾಷಣಕಾರರು ಹೇಳಿದರು. ಕ. ಪ್ರಾಂ. ಕಾ. ಸಮಿತಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಜನರ ಬೆಂಬಲವಿದ್ದುದಾದರೆ ಕರ್ನಾಟಕ ಏಕೀಕರಣದ ಕಾರ್ಯವನ್ನು ಸಾಧಿಸುವ ಆತ್ಮವಿಶ್ವಾಸ ತಮಗಿದೆ ಎಂದು ಮೊದಲಾಗಿ ಶ್ರೀ ದಿವಾಕರರು ಹೇಳಿದರು.

ಅಫಗಾನಿಸ್ತಾನದ ಕಾಬೂಲ ವಿಶ್ವವಿದ್ಯಾಲಯದವರು ಸಂಸ್ಕೃತ ಭಾಷೆಯನ್ನು ಒತ್ತಾಯದಿಂದ ಕಲಿಸಬೇಕೆಂದು ವಿಧಿಸಿದ್ದಾರೆ. ಪರ್ಶಿಯನ್ ಮತ್ತು ಪುಸ್ತು ಭಾಷೆಗಳು ಸಂಸ್ಕೃತದಿಂದಲೇ ಹುಟ್ಟಿದ್ದರಿಂದ ತಮ್ಮ ಭಾಷೆಯ ಬೆಳವಣಿಗೆಗೆ ಸಂಸ್ಕೃತ ಬಿಟ್ಟರಾಗದೆಂದು ಕಾರಣ ಹೇಳಲಾಗಿದೆ.

ಭಾರತದ ಮುಖ್ಯ ಪ್ರಧಾನರಾದ ಪಂ. ಜವಾಹರಲಾಲರು ದಿಲ್ಲಿಯ ಸನಾತನ ಧರ್ಮ ಸಭೆಯ ಪರವಾಗಿ ಬಿರ್ಲಾಭವನದಲ್ಲಿ ಏರ್ಪಡಿಸಿದ ಗೀತಾ ಜಯಂತಿಯ ಸಮಾರಂಭದಲ್ಲಿ ಮಾತನಾಡುತ್ತ ಗೌತಮ ಬುದ್ಧನ ತತ್ವಜ್ಞಾನ, ಮಹಾತ್ಮಾ ಗಾಂಧಿಯವರ ವ್ಯಾವಹಾರಿಕ ರಾಜಕಾರಣ ಮತ್ತು ಗೀತೆಯ ಬೋಧೆ ಇವೇ ಇಂದು ರಾಜಕೀಯ ಚಾರಿತ್ರ್ಯವನ್ನು ರೂಪಿಸಿರುವವೆಂದು ಮೊದಲಾಗಿ ಹೇಳಿದರು.

ದಿಲ್ಲಿಯಲ್ಲಿ ತಾ. ೧೨ ರ ಮುಂಜಾನೆ ನಡೆದ ಒಂದು ಕವಾಯತ ಸಮಾರಂಭದಲ್ಲಿ ದಿಲ್ಲಿ ಪೋಲೀಸರನ್ನು ಕುರಿತು ಭಾಷಣ ಮಾಡುತ್ತ ಭಾರತದ ಉಪಮುಖ್ಯಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು, ಪೋಲೀಸರು ಸೇವಾಭಾವದಿಂದ ತಮ್ಮ ಕೆಲಸ ಮಾಡಬೇಕೆಂದೂ ಈ ಮೂಲಕವೇ ಅವರು ಸಾರ್ವಜನಿಕ ವಿಶ್ವಾಸವನ್ನು ಗಳಿಸಬೇಕೆಂದೂ ನುಡಿದರು.

ಅಂಚೆ ಹಾಗು ತಂತಿ ಸಂಘಗಳ ಸಂಯುಕ್ತ ಶಿಷ್ಟಮಂಡಲದವರು ಅಧ್ಯಕ್ಷರಾದ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ತಾ. ೧೦ ರಂದು ಮುಖ್ಯ ಪ್ರಧಾನರಾದ ಪಂ. ಜವಾಹರಲಾಲರನ್ನು ಕಂಡು ತುಟ್ಟಿಭತ್ತೆ ಹೆಚ್ಚಿಸಬೇಕು, ತಾತ್ಪೂರ್ತಿಕ ಕೆಲಸಗಾರರನ್ನು ಕಾಯಂ ಮಾಡಬೇಕು, ತಜ್ಞ ಸಮಿತಿಯ ವರದಿಯನ್ನು ಪ್ರಸಿದ್ಧಿಸಬೇಕು, ಸಂಪಿನ ಅವಧಿಯ ಸಂಬಳ ಕೊಡಬೇಕು, ಎಂಬಿವೇ ಮೊದಲಾದ ಬೇಡಿಕೆಗಳನ್ನು ಮುಂಡಿಸಿದರು.

ಹಿಂದೀ ಸೈನ್ಯಪಡೆಯು ಕಾರ್ಗಿಲ ಲೇ ವಿಭಾಗದಲ್ಲಿ ತನ್ನ ವಶವಾದ ಸ್ಥಳಗಳನ್ನು ಭದ್ರಪಡಿಸಿಕೊಂಡು ರಾಜಾರಮುಂಧಾರ-ಪೂಂಛ ವಿಭಾಗಗಳಲ್ಲಿ ವೈರಿಗಳನ್ನು ಕೊಟ್ಟಿ ಹಾಕುವಲ್ಲಿ ತೊಡಗಿದ್ದವೆಂದು ತಾ. ೧೧ ರಂದು ಸಂರಕ್ಷಣ ಶಾಖೆಯ ಪ್ರಕಟನೆ ಹೊರಟಿದೆ. ಶತ್ರುಗಳಿಂದ ವಶಪಡಿಸಿಕೊಂಡ ಪ್ರದೇಶದಲ್ಲಿಯ ಜನರಲ್ಲಿ ಶಾಂತತೆ ನೆಲಸುತ್ತಿದೆಯೆಂದೂ ಆ ಪ್ರಕಟನೆಯಲ್ಲಿ ಹೇಳಲಾಗಿದೆ.

ದೇಶದಾದ್ಯಂತವೂ ಆರ್. ಎಸ್. ಎಸ್. ಕಾರ್ಯಕರ್ತರನ್ನೂ ಸ್ವಯಂಸೇವಕರನ್ನೂ ಅವರ ಅಪ್ರಾಸಂಗಿಕ ಸತ್ಯಾಗ್ರಹದ ಘೋಷಣೆಯ ಮೂಲಕವಾಗಿ ಬಂಧಿಸುವದು ನಡೆದಿದ್ದು ಈಗಾಗಲೇ ಸಾವಿರಾರು ಜನರು ಬಂಧಿತರಾಗಿದ್ದಾರೆ. ದಿನವೂ ಈ ಬಂಧನ ಸತ್ರವು ನಡೆವೇ ಇದೆ. ಅ. ಭಾ. ಹಿಂದು ಮಹಾಸಭೆಯ ಕಾರ್ಯ ಸಮಿತಿಯ ಅಧ್ಯಕ್ಷರಾದ ಶ್ರೀ ಭೋಪಟಕರರೇ ಮೊದಲಾದವರು ಒಂದು ಪ್ರಕಟನೆ ಹೊರಡಿಸಿ ಆರ್. ಎಸ್. ಎಸ್. ದ ಮೇಲಿರುವ ನಿರ್ಬಂಧವನ್ನು ತೆಗೆಯಬೇಕೆಂದು ಸರಕಾರಕ್ಕೆ ಬಿನ್ನವಿಸಿದ್ದಾರೆ.

ಇಂಡೋನೇಶಿಯಾ ಪ್ರಜಾರಾಜ್ಯದ ಅಧ್ಯಕ್ಷರಾದ ಡಾ. ಸೊಯೆಕರ್ನೊ ಅವರಿಗೆ ಹಿಂದುಸ್ತಾನಕ್ಕೆ ಸಂದರ್ಶನವೀಯಲು ಭಾರತದ ಮುಖ್ಯಮಂತ್ರಿಗಳಾದ ಪಂ. ಜವಾಹರಲಾಲರು ವಿಶೇಷ ಆಮಂತ್ರಣ ಕೊಟ್ಟಿದ್ದಾರೆಂದೂ ಅದನ್ನು ಡಾ. ಸೊಯೆಕರ್ನೊ ಅವರು ಸ್ವೀಕರಿಸಿದ್ದಾರೆಂದೂ ಸಂದರ್ಶನದ ನಿಶ್ಚಿತ ದಿನಾಂಕ ಮಾತ್ರ ಇನ್ನೂ ಗೊತ್ತಾಗಿಲ್ಲವೆಂದೂ ವಿದೇಶ ಶಾಖೆಯ ಪ್ರಕಟನೆ ಹೊರಟಿದೆ.

೧೯೪೯ ರಲ್ಲಿ ೩೦ ಲಕ್ಷ ಟನ್ನ ಆಹಾರ ಧಾನ್ಯಗಳ ಕೊರತೆಯಾಗುವದೆಂದು ಸರಕಾರಿ ಅಂದಾಜಿದ್ದು ಫೆಬ್ರುವರಿ ಕೊನೆಯ ಒಳಗಾಗಿ ೭ ಕೋಟಿ ನಗರವಾಸಿಗಳಿಗೆ ಸಂಪೂರ್ಣ ನಿಯಂತ್ರಣವು ಜಾರಿಯಲ್ಲಿ ಬರುವದೆಂದೂ ೧೯೪೯ ರಲ್ಲಿ ಹಿಂದುಸ್ತಾನವು ಒಟ್ಟು ೧ ನೂರು ಕೋಟಿ ರೂಪಾಯಿಗಳ ಆಹಾರ ಧಾನ್ಯಗಳನ್ನು ವಿದೇಶಗಳಿಂದ ತರಿಸಬೇಕಾಗುವದೆಂದೂ ತಿಳಿಯುತ್ತದೆ.

ಹಿಂದೀ ಸಂಸ್ಥಾನ

ಜಯಪುರದ ಕಾಂಗ್ರೆಸ ಅಧಿವೇಶನದಲ್ಲಿ ಭಾಗವಹಿಸಲು ಎಲ್ಲ ಸರಕಾರೀ ನೌಕರರಿಗೂ ಅನುಕೂಲವಾಗಲೆಂದು ರಾಜಸ್ಥಾನ ಸರಕಾರದವರು ಡಿಸೆಂಬರ ೧೪ ರಿಂದ ೭ ದಿನಗಳ ವರೆಗೆ ಸಂಸ್ಥಾನದಲ್ಲೆಲ್ಲ ಸಾರ್ವತ್ರಿಕ ಬಿಡುವನ್ನು ಸಾರಿದ್ದಾರೆ. ಇದೇ ಬಗೆಯಾಗಿ ಬಿಕಾನೇರ ಸರಕಾರದವರು ತಮ್ಮ ಸಂಸ್ಥಾನದಲ್ಲಿ ೫ ದಿನಗಳ ಸಾರ್ವತ್ರಿಕ ಬಿಡುವನ್ನು ಕೊಟ್ಟಿದ್ದಾರೆ

ಜಯಪುರದಲ್ಲಿ ಸರ್ವೋದಯ ಪ್ರದರ್ಶನದ ಉದ್ಘಾಟನೆಯು ತಾ. ೧೪ ರಂದು ಮಧ್ಯಾಹ್ನ ಆಚಾರ್ಯ ವಿನೋಬಾ ಭಾವೆಯವರ ಹಸ್ತದಿಂದ ಜರುಗಿತು. ಜಯಪುರದ ಕಾಂಗ್ರೆಸ್ಸಿನಲ್ಲಿ ಇದೊಂದು ಅತ್ಯಂತ ಆಕರ್ಷಕ ಸ್ಥಾನವಾಗಿದೆ.

ಕಳೆದ ಕಾಂಗ್ರೆಸಿನ ಕಾಲಕ್ಕೆ ಮೀರತದಲ್ಲಿ ಹೊತ್ತಿಸಲಾದ ಅಖಂಡ ಜ್ಯೋತಿಯನ್ನು ತಾ. ೧೪ ರಂದು ಮುಂಜಾನೆ ಜಯಪುರಕ್ಕೆ ತರಲಾಯಿತು. ಕಾಂಗ್ರೆಸ ಅಧ್ಯಕ್ಷರ ಮೆರವಣಿಗೆಯ ಮುಂಭಾಗದಲ್ಲಿ ಈ ಅಖಂಡ ಜ್ಯೋತಿಯನ್ನು ಗಾಂಧಿ ನಗರಕ್ಕೆ ಒಯ್ಯಲಾಯಿತು.

ಪಶ್ಚಿಮ ಬಂಗಾಲ

ನಾದಿಯಾ ಜಿಲ್ಲೆಯ ಗಡಿಯಲ್ಲಿ ಪಶ್ಚಿಮ ಬಂಗಾಲ ಮತ್ತು ಪೂರ್ವಪಾಕಿಸ್ತಾನ ಸೈನಿಕರಲ್ಲಿ ಘರ್ಷಣೆಯಾಗಿರುವದಾಗಿ ವರದಿ ಬಂದಿದೆ. ಬತ್ತದ ಬೆಳೆಯನ್ನು ಪಾಕಿಸ್ತಾನಿಗಳು ಕಳ್ಳತನದಿಂದ ಸಾಗಿಸಿದ ಬಗ್ಗೆ ಈ ತಿಕ್ಕಾಟ ಉಂಟಾಯಿತೆಂದು ತಿಳಿಯುತ್ತದೆ.

ಕಲಕತ್ತೆಯಲ್ಲಿ ಖೊಟ್ಟಿ ನೋಟುಗಳನ್ನು ಸಿದ್ಧಪಡಿಸಿ ಪ್ರಾಂತಗಳಲ್ಲೆಲ್ಲ ಹಂಚಲಾಗುತ್ತಿದೆ ಎಂಬ ಒಳಸಂಚೊಂದು ಹೊರಬಿದ್ದಿದೆ. ಇಂತಹ ಖೊಟ್ಟಿ ನೋಟುಗಳನ್ನು ಇಟ್ಟುಕೊಂಡಿದ್ದವನೊಬ್ಬನನ್ನು ಅಮೃತಸರದಲ್ಲಿ ಬಂಧಿಸಲಾಗಿದೆ. ಇವನೇ ಈ ಗುಟ್ಟುಕೊಟ್ಟಿದ್ದಾನೆ. ಈ ಗುಂಪಿನ ಮುಖ್ಯಸ್ಥನನ್ನೂ ಆವನ ಮೂವರು ಸಹಕಾರಿಗಳನ್ನೂ ಕಲಕತ್ತೆಯಲ್ಲಿ ಬಂಧಿಸಲಾಗಿದೆ. ಇವರು ಕೋಟಿಗಟ್ಟಲೆ ನೋಟು ಸಿದ್ಧಮಾಡಿದ್ದಾರೆಂದು ತಿಳಿದು ಬರುತ್ತದೆ.

ಕಲಕತ್ತೆಯಲ್ಲಿ ತಾ. ೯ ರಂದು ಮಾರವಾಡಿ ಸಮಾಜದ ೨೨ ಮದುವೆಗಳು ನಡೆದವು ಆಗ ಇತ್ತೀಚೆಗೆ ಮಾರವಾಡಿ ಮಹಾಮಂಡಲದವರು ನಡೆಸಿದ ಸತ್ಯಾಗ್ರಹದ ಪರಿಣಾಮವಾಗಿ ವಧುಗಳ ಪಾಲಕರು ವಧುಗಳು ಘೋಷಾ ಹಾಕತಕ್ಕದ್ದಲ್ಲವೆಂದು ನಿರ್ಧರಿಸಿದರಾಗಿ ತಿಳಿಯುತ್ತದೆ.

ಗೌಹಾತಿ ಡಾಕಾಗಳಲ್ಲಿ ತಾ. ೮ ರ ಮುಂಜಾನೆ ೪-೫೦ ಕ್ಕೆ ೭ ನಿಮಿಷ ಸೌಮ್ಯಸ್ವರೂಪದ ಭೂಕಂಪ ಸಂಭವಿಸಿತೆಂದು ತಿಳಿಯುತ್ತದೆ.

ಹೈದರಾಬಾದ

ಭಾರತದ ಮುಖ್ಯಮಂತ್ರಿ ಪಂ. ಜವಾಹರಲಾಲರು ಡಿಸೆಂಬರ ತಾ. ೨೪ ಕ್ಕೆ ಹೈದರಾಬಾದಕ್ಕೆ ಅನೌಪಚಾರಿಕ ಭೆಟ್ಟಿಕೊಟ್ಟು ೩ ದಿನ ಇರಲಿದ್ದಾರೆಂದೂ ಆಗ ಸಾರ್ವಜನಿಕ ಭಾಷಣ ಮಾಡುವರಲ್ಲದೆ, ಡೆಕನ್ ರೇಡಿಯೋದಲ್ಲಿಯೂ ಮಾತನಾಡುವರೆಂದೂ ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿಯೂ ಭಾಷಣಮಾಡುವರೆಂದೂ ತಿಳಿಯುತ್ತದೆ ಹೈದರಾಬಾದದಲ್ಲಿ ಅವರು ಮಿಲಿಟರಿ ಗವರ್ನರ ಅತಿಥಿಗಳಾಗಿರುವರು ಹಾಗು ನಿಜಾಮರನ್ನೂ ಇನ್ನುಳಿದ ರಾಜಕೀಯ ಮುಖಂಡರನ್ನೂ ಕಾಣುವರು.

ಅ. ಭಾ. ಆರ್ಥಿಕ ಪರಿಷತ್ತಿನ ೩೧ ನೆಯ ಅಧಿವೇಶನವು ಹೈದರಾಬಾದ ಮಿಲಿಟರಿ ಗವರ್ನರರಾದ ಮೇ. ಜ. ಜೆ ಎನ್. ಚೌಧರಿಯವರಿಂದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಡಿಸೆಂಬರ ೨೭ ಕ್ಕೆ ಉದ್ಘಾಟಿಸಲ್ಪಡುವದು. ಈ ಪರಿಷತ್ತಿಗೆ ೨೦೦ ಕ್ಕಿಂತ ಹೆಚ್ಚು ಪ್ರತಿನಿಧಿಗಳು ಆಗಮಿಸಬಹುದೆಂದು ನಿರೀಕ್ಷಿಸಲಾಗಿದೆ.

ಹೈದರಾಬಾದ ನಿಜಾಮರು ಮಿಲಿಟರಿ ಗವರ್ನರರಾದ ಮೆ. ಜ. ಜೆ ಎನ್. ಚೌಧರಿಯವರಿಗೆ ತಾ. ೧೨ ರಂದು ಒಂದು ಪತ್ರ ಬರೆದು ಸರ್ ಜಾಫರುಲ್ಲಾಖಾನರು ಹೈದರಾಬಾದದ ಬಗ್ಗೆ ಭದ್ರತಾಮಂಡಲದ ಸಭೆಯು ಬೇಗ ಸೇರಬೇಕೆಂದುದನ್ನು ತೀವ್ರವಾಗಿ ಖಂಡಿಸಿದ್ದಾರೆ. ಹಾಗು ಇದು ಅವ್ಯಾಪಾರೇಷು ವ್ಯಾಪಾರವೆಂದೂ ಅಸಂಬದ್ಧ ಪ್ರಲಾಪವೆಂದೂ ಹೇಳಿ ಸಂಸ್ಥಾನದಲ್ಲಿ ಈಗ ಮೊದಲಿಗಿಂತ ಚೆನ್ನಾಗಿ ಶಾಂತಿ ಸುವ್ಯವಸ್ಥೆ ನೆಲೆಸಿರುವದೆಂದು ಉಲ್ಲೇಖಿಸಿದ್ದಾರೆ.

ಮದ್ರಾಸ ಪ್ರಾಂತದಲ್ಲಿ ಕೈಮಗ್ಗದ ಬಟ್ಟೆಯು ಅಧಿಕವಾಗಿ ಉತ್ಪಾದಿತವಾಗಿರುವದರಿಂದ ಇದನ್ನು ಪಾಕಿಸ್ತಾನಕ್ಕೆ ಕಳಿಸಲು ಅಪ್ಪಣೆ ಕೇಳಲಾಗಿದೆ. ಸುಮಾರು ಒಂದು ಲಕ್ಷ ಗಂಟು ಇಂತಹ ಬಟ್ಟೆಯಿದೆ. ಇವು ಹೆಚ್ಚಾಗಿ ಲುಂಗಿಗಳೇ ಇದ್ದು ಲುಂಗಿಗಳಿಗೆ ಪಾಕಿಸ್ತಾನದಲ್ಲಿ ಬೇಡಿಕೆ ಬಹಳ.

ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

— ಶ್ರೀ ರಂಗನಾಥ ದಿವಾಕರರ ಅಮೂಲ್ಯ ಗ್ರಂಥಗಳು —

೧	ಉಪನಿಷತ್ಪ್ರಕಾಶ	೨-೮-೦	೭	ವಚನಶಾಸ್ತ್ರ ರಹಸ್ಯ	೫-೦-೦
೨	ಉಪನಿಷತ್‍ಕಥಾವಲಿ	೦-೧೨-೦	೮	ಅಂತರಾತ್ಮನಿಗೆ	೦-೧೨-೦
೩	ಶ್ರೀರಾಮಕೃಷ್ಣ ಚರಿತಾಮೃತ	೩-೦-೦	೯	ಗೀತೆಯ ಗುಟ್ಟು	೨-೮-೦
			೧೦	ಭಕ್ತಿ ಸೂತ್ರಗಳು	೦-೬-೦
೪	ಸತ್ಯಾಗ್ರಹ	೩-೮-೦	೧೧	ಹರಿಭಕ್ತಿಸುಧೆ	೩-೮-೦
೫	ಸೆರೆಯಮರೆಯಲ್ಲಿ	೨-೮-೦	೧೨	ಬಾಪೂ	ಅಚ್ಚಿನಲ್ಲಿದೆ
೬	ಕರ್ಮಯೋಗ	೧-೮-೦	೧೩	ಮಹಾತ್ಮರ ಮನೋರಂಗ	೪-೮-೦

ಎಲ್ಲ ಪುಸ್ತಕ ವ್ಯಾಪಾರಿಗಳಿಗೂ ರಿಯಾಯಿತಿ ಕಮಿಶನ್ ಕೊಡಲಾಗುವದು. ವ್ಹಿ. ಪಿ. ಮೂಲಕ ಪುಸ್ತಕಗಳನ್ನು ಕಳಿಸಲಾಗುವದಿಲ್ಲ. ಮುಂಗಡ ಹಣ, ಅಂಚೆ ವೆಚ್ಚ ಸಹಿತ ಕಳಿಸಬೇಕು. ವಿವರಗಳಿಗೆ ಬರೆಯಿರಿ.

ವ್ಯವಸ್ಥಾಪಕ
ಅಧ್ಯಾತ್ಮ ಕಾರ್ಯಾಲಯ
ಕೊಪ್ಪೀಕರ ರೋಡ್, ಹುಬ್ಬಳ್ಳಿ

ವಾರದ ಭವಿಷ್ಯ

ಜ್ಯೋತಿಷಿ:- ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯಕಥನ ಆಫೀಸ ಖಡೇಬಝಾರ, ಬೆಳಗಾವಿ

ಡಿಸೆಂಬರ ತಾ. ೨೦ ರಿಂದ ತಾ. ೨೬ ರ ವರೆಗೆ

ಮೇಷ

ಸ್ವಂತ ಪ್ರಕೃತಿ ನೆಟ್ಟಗೆ ಆದರೆ ಹೆಂಡತಿಗೆ ಕುಸು ಅನಾರೋಗ್ಯ. ಪರಸ್ಪರರ ಆದರ ಭಾವದಲ್ಲಿ ಬಹಳ ವ್ಯತ್ಯಯ ತೋರುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಮಕ್ಕಳಿಗೆ ಉನ್ನತಿ. ಪ್ರಿಯ ಜನರ ಸಹವಾಸಯೋಗ. ಸ್ಥಾವರದಲ್ಲಿ ಹೆಚ್ಚಳ ಕಂಡುಬರುವದು. ಜಲಾಶಯಕ್ಕೆ ಸಂಬಂಧಪಟ್ಟ ವಿಷಯದ ಬಗ್ಗೆ ಅನುಕೂಲ ಪಲ್ಲಟಗಳು ಘಟಿಸುವವು. ಹೆಂಡತಿಯ ತವರಿಗೆ ಸಂಬಂಧಪಟ್ಟ ಒಬ್ಬ ಸ್ತ್ರೀ ವಿಷಯಕವಾಗಿ ಅಭಿಲಾಷೆ ಹಾಗೂ ಈ ಬಗ್ಗೆ ಜನರಲ್ಲಿ ಕರ್ಣಾಕರ್ಣಿ. ಉದ್ಯೋಗದಲ್ಲಿ ದೊಡ್ಡ ಪ್ರಗತಿ, ವಿಶೇಷ ಪ್ರತಿಷ್ಠೆ ಮತ್ತು ಸಂಪೂರ್ಣ ಲಾಭ. ಮಿತ್ರರಲ್ಲಿ ಒಬ್ಬರಿಗೆ ಬಹಳ ಕ್ಲೇಶವಿದೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆಯ ಯಶ. ಬೆಟ್ಟಿಗಿಂತ ಪ್ರವಾಸವೂ ಪತ್ರವ್ಯವಹಾರವೂ ಹೆಚ್ಚು ಅನುಕೂಲ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲಿನ ೨ ಚರಣಗಳಿಗೆ ಹೆಚ್ಚು ಉತ್ತಮ. ತಾ. ೨೧, ೨೨, ೨೫, ೨೬ ಇವು ಒಳ್ಳೆಯ ದಿನಗಳು.

ವೃಷಭ

ನಿಮ್ಮ ಆರೋಗ್ಯ ನೆಟ್ಟಗೆ ಆದರೆ ಹೆಂಡರು ಮಕ್ಕಳಿಗೆ ಬಹಳ ಕ್ಲೇಶವಿದೆ. ಉಳಿದ ಸಂಗತಿಗಳಲ್ಲಿ ಪ್ರಾಪಂಚಿಕ ಸುಖವು ಸಾಧಾರಣ ನೆಟ್ಟಗೆ. ದಾಯಾದಿಗಲ್ಲಿ ಉನ್ನತಿ ಕಂಡು ಬರುವದು. ಮಕ್ಕಳಲ್ಲಿ ಒಬ್ಬರ ದೀರ್ಘವಿಯೋಗವಾಗುವ ಸಂಭವ, ಉದ್ಯೋಗದಲ್ಲಿ ಪ್ರಗತಿಯು ಕಡಮೆ. ಲಾಭವೂ ಅಷ್ಟಕ್ಕಷ್ಟೇ. ಆದರೆ ಪ್ರತಿಷ್ಠೆಯು ಉತ್ತಮ. ಅನಿರೀಕ್ಷಿತವಾಗಿ ಕುಸು ಧನಲಾಭವಾಗುವ] ಯೋಗವಿದೆ. ಮಿತ್ರಸುಖ ನೆಟ್ಟಗೆ. ಸ್ಥಾವರದಲ್ಲಿ ಅನುಕೂಲ ಮಾರ್ಪಾಟುಗಳಾಗುವವು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚವೂ ಪ್ರಯಾಸವೂ ಬಹಳವಾದರೂ ಅನುಕೂಲ ಫಲ ಪ್ರಾಪ್ತಿಯು ಖಂಡಿತ ಸಿಕ್ಕುವದು. ಪ್ರವಾಸ ಪತ್ರವ್ಯವಹಾರಗಳಿಂತ ಬೆಟ್ಟಿ ನೆಟ್ಟಗೆ. ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೪, ೨೫ ಇವು ಒಳ್ಳೆಯ ದಿನಗಳು.

ಮಿಥುನ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ನೆಟ್ಟಗೆ, ಆದರೆ ಮಕ್ಕಳಲ್ಲಿ ಒಬ್ಬರಿಗೆ ಬಹಳ ಕ್ಲೇಶವಿದೆ. ಪುತ್ರಿಯು ಮನಸ್ಸಿಗೆ ಬೇಸರವೆನಿಸುವಂತೆ ನಡೆದು ಕೊಳ್ಳುತ್ತಾಳೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಚನ್ನಾಗಿದೆ. ಕೆಲವು ಸಂಗತಿಗಳು ಅತ್ಯಂತ ಉತ್ಸಾಹದಾಯಕವಾಗಿವೆ. ಸಮೀಪದ ಆಪ್ತರಲ್ಲಿ ಮಂಗಲ ಕಾರ್ಯಗಳು ಜರಗುವವು. ಉದ್ಯೋಗದಲ್ಲಿ ಉತ್ತಮ ಪ್ರಗತಿ, ದೊಡ್ಡ ಪ್ರತಿಷ್ಠೆ, ಸಂಪೂರ್ಣ ಲಾಭ ಕಂಡುಬರುತ್ತದೆ. ಮಿತ್ರಸುಖ ನೆಟ್ಟಗಿದೆ ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಬಹಳ ಅನುಕೂಲತೆಯುಂಟು. ಆದರೆ ಓರ್ವಸ್ತ್ರೀಯು ನಿರರ್ಥಕವಾಗಿ ನಿಮ್ಮನ್ನು ನಿಂದಿಸುವಳು ಹಾಗೂ ವೈರಸಾಧಿಸುವಳು. ಪ್ರವಾಸಾದಿ ಕಾರ್ಯಗಳು ಸಾಕಷ್ಟು ಚೆನ್ನಾಗಿವೆ. ಆರ್ದ್ರದ ಕೊನೆಯ ೨ ಮತ್ತು ಪುನರ್ವಸುದ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೨೦, ೨೨, ೨೫, ೨೬ ಇವು ಒಳ್ಳೆಯ ದಿನಗಳು.

ಕರ್ಕ

ನಿಮ್ಮ ಆರೋಗ್ಯವೇನೋ ನೆಟ್ಟಗೆ ಆದರೆ ಹೆಂಡರು ಮಕ್ಕಳದು ಬಹಳ ಕೆಡುವ ಸಂಭವವಿದೆ. ಅಲ್ಲದೆ ಬಗೆಬಗೆಯ ಪ್ರಾಪಂಚಿಕ ತೊಂದರೆಗಳೂ ಬಂದು ಮುತ್ತುವವು. ಇಂಥದರಲ್ಲಿ ಅಪ್ರಿಯ ಅತಿಥಿಯು ಬರುವ ಹೆದರಿಕೆ ಬೇರೆ. ಉದ್ಯೋಗದಲ್ಲಿ ಪ್ರಗತಿಗೂ ಪ್ರತಿಷ್ಠೆಗೂ ಇನ್ನೊಬ್ಬರನ್ನು ಅವಲಂಬಿಸಬೇಕಾಗುವದರಿಂದ ಅದು ದುರ್ಮಿಳವೆನಿಸುವದಾದರೂ ಲಾಭ ಮಾತ್ರ ಪರಿಪೂರ್ಣ ಲಭಿಸುವದು. ನೌಕರದಾರರಿಗೆ ಅಧಿಕಾರ ವರ್ಧನದ ಯೋಗವಿದೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಜಯ ದೊರೆಯುವ ಸಂಭವವಿದ್ದರೂ ಲಾಭ ದೃಷ್ಟಿಯಿಂದ ಅದೆಲ್ಲ ಜೊಳ್ಳೇ. ಮಿತ್ರ ಸುಖ ಉತ್ತಮ. ಮನರಂಜನೆಯ ಒಂದೆರಡು ಯೋಗಗಳು ಕಂಡು ಬರುವವು. ಪತ್ರವ್ಯವಹಾರಕ್ಕಿಂತ ಪ್ರವಾಸವೂ ಭೆಟ್ಟಿಯೂ ಎಷ್ಟೋ ನೆಟ್ಟಗೆ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೧, ೨೨ ಇವು ಒಳ್ಳೆಯ ದಿನಗಳು.

ಸಿಂಹ

ಎಲ್ಲರ ಪ್ರಕೃತಿಯು ಉತ್ತಮ. ಆದರೆ ಮಕ್ಕಳಲ್ಲಿ ಒಬ್ಬರು ಸುಮ್ಮಸುಮ್ಮನೆ ಆರೋಗ್ಯ ಸರಿಯಿಲ್ಲವೆಂದು ದೂರುತ್ತಾರೆ. ಎಲ್ಲ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖವು ನೆಟ್ಟಗಿದೆ. ಉತ್ತಮ ವಾಹನಗಳಲ್ಲಿ ತಿರುಗಾಡುವ ಯೋಗವಿದೆ. ದಾಯಾದಿಗಳಲ್ಲಿ ಒಬ್ಬರದು ಬಹಳ ಉತ್ಕರ್ಷ ಕಂಡು ಬರುವದು. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಲಾಭವೂ ಪರಿಪೂರ್ಣವಾಗಿರುವದು. ವೆಚ್ಚವು ಹೆಚ್ಚಾದರೂ ಉದ್ದೇಶವು ಫಲಿಸುವದು. ಮಿತ್ರ ಸುಖವು ಉತ್ತಮವಾಗಿದೆ. ನಿಮ್ಮಿಂದ ಒಂದು ಧಾರ್ಮಿಕ ಕೃತಿ ಘಟಿಸಿ ಜನರಿಂದ ಹೊಗಳಿಸಿಕೊಳ್ಳುವ ಯೋಗವಿದೆ ಎಲ್ಲ ಸಂಗತಿಗಳೂ ಉತ್ತಮವಾಗಿದ್ದರೂ ಯಾವುದೋ ಒಂದು ಗುಪ್ತ ಚಿಂತೆಯಿಂದ ಮನಸ್ಸು ವ್ಯಗ್ರವಾಗಿರುವದು ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಬಹಳ ಅನುಕೂಲತೆ ಕಂಡು ಬರುವದು. ಪ್ರವಾಸಾದಿ ಕಾರ್ಯಗಳು ಸುಗಮವಾಗಿವೆ. ಮಘಾದ ಕೊನೆಯ ೨ ಮತ್ತು ಪೂರ್ವಾದ ಮೊದಲಿನ ೨ ಚರಣಗಳಿಗೆ ಹೆಚ್ಚು ಉತ್ತಮ. ತಾ. ೨೪, ೨೫, ೨೫, ೨೬, ಇವು ಒಳ್ಳೆಯವು.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ನೆಟ್ಟಗೆ. ಆದರೆ ಮಕ್ಕಳಿಗೆ ಕುಸು ಅನಾರೋಗ್ಯವಿದೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆಯು ಬಹಳ ಆಗುವ ಸಂಭವ. ಆಪ್ತರು ಮತ್ತು ನೆರೆಹೊರೆಯವರೊಡನೆ ಬಹಳ ಅತೃಪ್ತಿಕರ ಸಂಬಂಧ. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಲಾಭವೂ ಬಹಳ ಉತ್ತಮ ಆದರೆ ಬೇಡಾದ ಕಾರ್ಯದಲ್ಲಿ ಬಹಳ ವೆಚ್ಚ ಮಾಡುವ ಪ್ರಸಂಗ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮಸ್ಥಿತಿ. ಪ್ರವಾಸಾದಿ ಕಾರ್ಯಗಳು ಹಿತಾವಹ. ಉತ್ತರೆಯ ಕೊನೆಯ ೨ ಮತ್ತು ಹಸ್ತೆಯ ಮೊದಲಿನ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೦, ೨೪, ೨೫ ಇವು ಒಳ್ಳೆಯ ದಿನಗಳು.

ತುಲಾ

ಎಲ್ಲರ ಪ್ರಕೃತಿಯೂ ಉತ್ತಮ ಆದರೆ ಹೇಗೆ ವರ್ತಿಸಿದರೂ ಹೆಂಡತಿ ಮಕ್ಕಳು ನಿಮ್ಮ ಉಪಹಾಸವನ್ನೇ ಮಾಡುವರು. ಅಪ್ರಿಯರಾದ ಆಪ್ತರು ದೊಡ್ಡ ಪರಿವಾರವನ್ನೇ ಕಟ್ಟಿಕೊಂಡು ಆತಿಥ್ಯಕ್ಕೆ ಅಣಿಯಾಗಿ ಬರುವದರಿಂದ ವಿಪರೀತ ತೊಂದರೆ ಹಾಗು ಎಲ್ಲವೂ ಬುಡಮೇಲಾಗಿ ಹೋಗುವದು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ, ಲಾಭ ಸಕಲವೂ ಬಹಳ ಉತ್ತಮ. ನಿಮ್ಮ ಪ್ರತಿಪಕ್ಷಿಗಳ ಮೇಲೆ ಪರಿಣಾಮಕಾರಕ ಪ್ರಭಾವ ಬೀರುವ ಕೃತಿಗಳು ನಿಮ್ಮಿಂದ ಘಟಿಸುವವು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶ ಹಾಗೂ ಉತ್ತಮ ಅನುಕೂಲತೆ, ಮಿತ್ರಸುಖ ಚನ್ನಾಗಿದೆ. ಪ್ರವಾಸಾದಿಕಾರ್ಯಗಳು ತೃಪ್ತಿಕ ವಾಗಿವೆ. ಸ್ವಾತಿಯ ಕೊನೆಯ ೨ ಮತ್ತು ವಿಶಾಖೆಯ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶ. ತಾ. ೨೦, ೨೧, ೨೨, ೨೫ ಇವುಗಳು ಒಳ್ಳೆಯ ದಿನಗಳು.

ವೃಶ್ಚಿಕ

ಎಲ್ಲರ ಆರೋಗ್ಯವೂ ಉತ್ತಮ. ಆದರೆ [illegible] ಪರಸ್ಪರರ ಬಗ್ಗೆ [illegible] ಮಾಡಿಕೊಳ್ಳುವದರಿಂದ [illegible] ಕುಸು [illegible] ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ಪರಿಪೂರ್ಣ ಲಾಭವಿದೆ. ಆದರೆ ಪ್ರತಿಷ್ಠೆಗೆ ಕುಸು ಕುಂದುಂಟಾಗುವ ಹೆದರಿಕೆಯಿದೆ. ಶತ್ರು ಮಿತ್ರರೆಲ್ಲರೂ ನಿಂದಿಸತೊಡಗುವರು. ದಾಯಾದಿಗಳು ಉಪಕಾರ ಮಾಡುವದರಲ್ಲಿ ಅತ್ಯಂತ ಉದಾಸರಾಗುವರು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ [illegible] ಸಮಾನ ಸ್ಥಿತಿ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರಗಳು ಹೆಚ್ಚು ಅನುಕೂಲ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೧, ೨೫ ಇವು ಒಳ್ಳೆಯವು.

ಧನು

ಎಲ್ಲರ ಆರೋಗ್ಯವೂ ನೆಟ್ಟಗಿದೆ. ಆದರೆ ನಿಮ್ಮ ನಿಮ್ಮೊಳಗೆ ಪರಸ್ಪರರ ಬಗ್ಗೆ ಅಸಾದರ ಕೆಲೆದೋರಿ ಕಲಹವು ಹೆಚ್ಚುವದು. ಸ್ಥಾವರದಲ್ಲಿ ಹೆಚ್ಚಳ. ದಾಯಾದಿಗಳ ಪರಿವಾರವು ಮನಬಲ್ಲಂತೆ ವರ್ತಿಸುವದು. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಚೆನ್ನಾಗಿದೆ. ಆದರೆ ಲಾಭ ಮಾತ್ರ ಕಡಮೆ. ಇಲ್ಲದ ವೆಚ್ಚವು ಅಳವು ಮೀರಿ ಹೋಗುವದರಿಂದ ಸಾಲಿಗರ ಎದುರಿಗೆ ತಲೆ ತಗ್ಗಿಸಿ ನಿಲ್ಲುವ ಹೊತ್ತು ಬರುವದು. ಮಿತ್ರರಲ್ಲಿ ಕೆಲವರು ಶತ್ರುಗಳಿಗೆ ನಿಮ್ಮ ಗುಟ್ಟುಕೊಟ್ಟ ಸಂಗತಿ ತಿಳಿದು ಮನಸ್ಸಿಗೆ ತಳಮಳವಾಗುವದು. ಪ್ರವಾಸವು ತೊಂದರೆಯದು. ಆದರೆ ಪತ್ರವ್ಯವಹಾರವೂ ಭೆಟ್ಟಿಯೂ ಉತ್ತಮ. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೪, ೨೫, ೨೫ ಇವು ಒಳ್ಳೆಯವು.

ಮಕರ

ಎಲ್ಲರ ಆರೋಗ್ಯಕ್ಕೂ ಕುಸು ಕಿರುಕುಳ ಕಂಡು ಬರುತ್ತದೆ. ಆದರೆ ಮಕ್ಕಳಲ್ಲಿ ಒಬ್ಬರ ಉತ್ಕರ್ಷವು ವಿಶೇಷವಾಗಿ ಕಂಡು ಬರುವದರಿಂದ ಎಲ್ಲರ ಮನಸ್ಸು ಪ್ರಫುಲ್ಲಿತವಾಗಿರುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಕುಸು ತೊಂದರೆಯದೇ. ಉದ್ಯೋಗದಲ್ಲಿ ಪ್ರಗತಿ ಕಡಮೆ ಆದರೆ ಪ್ರತಿಷ್ಠೆಯೂ ಲಾಭವೂ ಚೆನ್ನಾಗುಂಟು. ವೆಚ್ಚ ಮಾತ್ರ ಮಿತಿಮೀರುವದು. ಮಿತ್ರಸುಖ ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಪ್ರತಿಪಕ್ಷಕ್ಕೆ ಹೆಚ್ಚು ಬಲವಿದ್ದುದು ಕಂಡು ಬರುವದು. ಆಪ್ತರು ಕುಚೇಷ್ಟೆ ಮಾಡುವರು ಹಾಗೂ ಇಲ್ಲದ ಆತಂಕ ತಂದೊಡ್ಡುವರು. ಪ್ರವಾಸ ಪತ್ರವ್ಯವಹಾರಗಳಿಗಿಂತ ಬೆಟ್ಟಿಯು ಉತ್ತಮ. ಉತ್ತರಾಷಾಢದ ಕೊನೆಯ ೨ ಮತ್ತು ಶ್ರವಣಾ ನಕ್ಷತ್ರದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೦, ೨೫, ೨೬ ಇವು ಒಳ್ಳೆಯ ದಿನಗಳು.

ಕುಂಭ

ಪ್ರಕೃತಿಯು ಉತ್ತಮ. ಪ್ರಾಪಂಚಿಕ ಸುಖವು ಮನಸ್ಸಿನಂತೆ. ಎಲ್ಲದರಲ್ಲಿಯೂ ಅಲ್ಪಾಯಾಸದಿಂದಲೇ ಜಯ ಪ್ರಾಪ್ತಿ. ಆದರೆ ಇನ್ನೊಬ್ಬರ ಉತ್ಕರ್ಷದ ಬಗ್ಗೆ ಉಪಹಾಸ ಮಾಡುವ ಪ್ರವೃತ್ತಿ ತಲೆದೋರುವದು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಲಾಭ ಎಲ್ಲವೂ ಅಮೋಘವಾಗಿವೆ. ಶುಭ ಸ್ವಪ್ನಗಳು ಬಿದ್ದು ಮುಂದೆ ಆಗುವ ಸಂಗತಿಗಳನ್ನು ಸೂಚಿಸುವವು. ಮಿತ್ರ ಸುಖವು ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಉತ್ತಮ ಯಶ. ಆದರೆ ಶತ್ರುಗಳ ಹಾರಾಟ ಮಾತ್ರ ಹಾಗೇ ಸಾಗುವದು. ಪ್ರವಾಸಾದಿ ಕಾರ್ಯಗಳು ಹಿತಾವಹವಾಗಿವೆ. ಶತತಾರಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದಲಿನ ೨ ಚರಣಗಳಿಗೆ ತೊಂದರೆಯಿಂದಲೇ ಯಶ ಪ್ರಾಪ್ತಿ. ತಾ. ೨೧, ೨೨, ೨೫, ೨೬ ಇವು ಒಳ್ಳೆಯವು.

ಮೀನ

ಎಲ್ಲರ]ಆರೋಗ್ಯವೂ ನೆಟ್ಟಗೆ. ಎಲ್ಲರ ನಡೆವಳಿಯೂ ಮನಸ್ಸಿನಂತೆ. ಆದರೆ ಇದರಿಂದ ಮಿತ್ರರಲ್ಲಿ ಹೇವವು ತಲೆದೋರುವದು. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಉತ್ತಮ. ಸಣ್ಣವರಿಂದಲೂ ದೊಡ್ಡವರಿಂದಲೂ ಕೂಡಿಯೇ ಗೌರವ ದೊರಕುವದು. ಲಾಭ ಚೆನ್ನಾಗಿದೆ. ಆದರೆ ಅದರಂತೆ ವೆಚ್ಚವೂ ಹೆಚ್ಚು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶ. ಪ್ರವಾಸಾದಿ ಕಾರ್ಯಗಳು ಅತ್ಯಂತ ಹಿತಕಾರಿಯಾಗಿವೆ. ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲಿನ ೨ ಚರಣಗಳಿಗೆ ಹೆಚ್ಚು ಉತ್ತಮ. ತಾ. ೨೦, ೨೪, ೨೫ ಇವು ಒಳ್ಳೆಯ ದಿನಗಳು.

ಕಾವ್ಯ ವಿಹಾರ

ಗೀತಾ [illegible]

೧

[illegible]
[illegible]
[illegible]
[illegible]

೨

[illegible]
[illegible]
[illegible]
[illegible]

೩

[illegible]
[illegible]
[illegible]
[illegible]

೪

[illegible]
[illegible]
[illegible]
[illegible]

— [illegible]

ಪ್ರಾರ್ಥನೆ

ಕನಸಿನಲ್ಲಿ

ಹೊಳೆಯು ದಾಟಿ ದೋಣಿಯಲ್ಲಿ
ದಂಡೆಯ ಮರಗಳ ಮೇಲೆ
ದೇವಳದ ಗುಡಿಗಳ ಜತೆ
ಕಂಡೆ ಸುತ್ತ ಸುಳಿಯುವ
ಚರಾಚರದ ಕ್ಷೇತ್ರ ಯಾತ್ರೆ ಮುಗಿಲು
ಪಾತ್ರೆ ಹೊಳೆಯುವ
ಮುಗಿಲು ಚಿತ್ತ ವೇದದಲ್ಲಿ ಹಿಲಾ
ಚಿಗುರು ಹೊಳೆಯುವ

ಮನಸಿನಲ್ಲಿ

ಬಣ್ಣ ಪಡೆದ ಬಯಕೆ ಹೂವು ಗಾಳಿಗೆ
ತನಿವಸಿಸಿತು,
ಎದುರು ತೋಳ ಮುಚ್ಚಿರುವ ದಾರಿ
ವಿಧಿವಿಧಾನ ತೆರೆಸಿತು.
ಅಭಿವ್ಯಕ್ತಿಯ ಮಧ್ಯದಲ್ಲಿ ಮುಕ್ತಿ
ಮಂತ್ರ ಸ್ಪರ್ಶಿಸಿತು,
ದೀನಮನದ ಬಯಕೆಗೊಲಿದು
ದೇವಳದೆಡೆ ಹರಿಸಿತು.

ನೋಡಿದೆನು

ಕುಸಿದು ಬಿದ್ದ ಕಲ್ಲು ಮುಚ್ಚು ಗೋಡೆ
ಹಾಳು ದೇಗುಲ
ಮುರಿದು ಬಿದ್ದ ಕಂಬದ ಗೆರೆ
ಮುಚ್ಚಿದ ಕೆಚ್ಚಾಗಿಲು.
ಗರ್ಭಗುಡಿಯ ಗರ್ಭದಲ್ಲಿ
ಹೊಳೆಯುತಿತ್ತು ಜ್ಯೋತಿಯು.
ಹಾಳು! ಹಾಳು ಬಿದ್ದರೇನು!
ಹಾಳು ಬಿತ್ತೆ ಪ್ರೀತಿಯು?

ಬೇಡಿದೆನು

ಮನದ ಹಣತೆಯಲ್ಲಿ ಹೊಳೆಯು-
ತಿರಲಿ ಪರಂಜ್ಯೋತಿಯು!
ದೇವಳದ ಗುಡಿಗಳ ಪರಿಸರದಲಿ
ಅಡಿಮಾತೆಯು.

— ಸು. ರಂ. ಎಕ್ಕುಂಡಿ


ದಿ ನೂತನ ಆಯುರ್ವೇದ ಕಾರ್ಯಾಲಯ ಲಿ. ವಿಜಾಪುರ

ಪರಮಾರೋಗದ ಮೇಲೆ
(Gonorrhoea)
ಪ್ರಾಯಮೇಹಾರಿ

ಕಟ್ಟಸಿ- ನೋವಾಗಿ ಉರಿಮೂತ್ರ ಮೂತ್ರದಲ್ಲಿ ಕೀವು. ಸಂಧಿವಾತ ವಳೆ ನೆರಗು, ಧಾತುಕ್ಷೀಣತೆಗಳನ್ನು ಗುಣಪಡಿಸುತ್ತದೆ.

ಹುಬ್ಬಳ್ಳಿ ಶಾಖೆ: ಕೊಪ್ಪೀಕರ ರೋಡ, ಹುಬ್ಬಳ್ಳಿ

ಪುಸ್ತಕ ಪರಿಚಯ



ಕಟ್ಟುವೆವು ನಾವು

ಲೇಖಕರು: ಶ್ರೀ ಎಂ. ಗೋಪಾಲಕೃಷ್ಣ ಅಡಿಗ ಪ್ರಕಾಶಕರು: ಕಾವ್ಯಾಲಯ, ಮೈಸೂರು. ೭೭ ಪುಟ. ಸಾದಾ ಪ್ರತಿ ರೂ. ೧೪. ಲೈಬ್ರರಿ ಪ್ರತಿ ರೂ. ೨೪.

ಭಾವಗೀತಗಳೆಂಬ ತಲೆಪಟ್ಟಿ ಧರಿಸಿ, ಈಚೆಗೆ ಪ್ರಕಟವಾಗುತ್ತಿರುವ ಕಗ್ಗಗಳ ರಾಶಿಯ ನಡುವೆ ನಿಜವಾಗಿ ಕವಿತ್ವಸಾಮರ್ಥ್ಯವನ್ನು ಪ್ರದರ್ಶಿಸುವ ಪುಸ್ತಕ ಎಲ್ಲಾದರೊಮ್ಮೆ ಬಂದರೆ ವಿಮರ್ಶಕನಿಗೆ ದೊಡ್ಡ ನಿಧಿಯೇ ದೊರೆತ ಆನಂದವಾಗುತ್ತದೆ. ಶ್ರೀ ಅಡಿಗರ ಈ ಪುಸ್ತಕ ಅಂಥ ಸುಂದರ ಕೃತಿಗಳಲ್ಲೊಳಗೊಂದಿದೆಯೆಂದು ಎದೆತಟ್ಟಿ ಹೇಳಬಹುದು. ೩೬ ಕವಿತೆಗಳನ್ನೊಳಗೊಂಡಿದ ಈ ಸಂಗ್ರಹವನ್ನು ಕುರಿತು ಮುನ್ನುಡಿಕಾರರಾದ ಶ್ರೀ ವಿ. ಸೀ. ನರಸಿಂಹಾಚಾರ್ಯರು ವ್ಯಕ್ತಗೊಳಿಸಿದ ಮೆಚ್ಚಿಗೆ ಅತ್ಯಂತ ಉಚಿತವಾಗಿಯೆ ಇದೆ.

ಈ ಕವಿತೆಗಳಲ್ಲಿ ಹೆಚ್ಚಿನವು "ಪ್ರಗತಿಶೀಲ" ವೆಂದು ಕರೆಯಲ್ಪಡಬಹುದು.

ಜಗದ ಜನವು ಕತ್ತಲಿನ ಹೊರೆ ಹೊರೆ
ತಾಳಲಾರದೆಯೆ ಕುಸಿದು ಬೀಳುತಿರೆ,
ನೀನು . . . . . ನಿನ್ನುಡಿಯ ದೀವಿಗೆ
ಹಿಡಿದು ನಡೆವೆನೆಂದೆನುವೆಯ ಸಗ್ಗಕೆ ?
ಹರಿ ನೀ ಹೊರ ಜಗಕೆ . . . .
ಎಲ್ಲ ಜನದ ಎದೆ ತಣಿಸುವ ಹಣವೇ
ಜೀವನನಿಜಗತಿಯು

ಎಂದು ಕವಿಯನ್ನು ಜನಜೀವನದ ಕಡೆಗೆ ಹೊರಳಲು ನಿಮಂತ್ರಿಸಿ, ಇಂದಿನ ಜಾತಿ ಮತ ಭೇದ, ಪೌರುಷಹೀನತೆ, ಸಂಕುಚಿತ ಹೃದಯ, ದೈವವಾದ ಮೊದಲಾದವನ್ನು ಜರೆದು, ಐಕ್ಯ ಸಾಹಸಗಳನ್ನು ನೆಮ್ಮುವ ಭಾವನೆಗಳು ಇಲ್ಲಿಯ ಅನೇಕ ಕವಿತೆಗಳಲ್ಲಿ ಪ್ರಬಲ ಪ್ರವಾಹವಾಗಿ ಹರಿದಿವೆ. "ದಿವವನಿಲ್ಲಿ ಈ ನೆಲಕೇ ಎಳೆದು ಸೆಳೆದು ತರುವೆವು. ನಾವು ಸದಾ ತರುಣರು!" ಎಂಬ ದಿಟ್ಟತನ, "ನರಲೋಕಕೆಲ್ಲ ಇದೆ, ಇಲ್ಲ ಇರುವುದನು ಹಂಚಿಕೊಂಬ ನಯವು; ಮೂಢಲಿಲ್ಲ ಧೀಮಂತರಲ್ಲು ಇನಿತೊಂದುದಾರ ದಯವು" ಎಂಬ ವಿಷಾದ. "ಪ್ರತಿಭೆಯ ಮಿಂಚನು, ಬುದ್ಧಿಯ ಹೊಂಚನು ವಿಜ್ಞಾನದ ಬಲವ, ಕಂಡು ಉಂಡವರು ಹತ್ತು ಮಂದಿ, ಉಳಿದವರು ಲಕ್ಷಲಕ್ಷ ನರ ಕುರಿಗಳು, ಅರಸಿಕರು, ಕುತ್ಸಿತರು" ಎಂಬ ನಮ್ಮ ಸಂಸ್ಕೃತಿಯನ್ನು ಕುರಿತ ಅತೃಪ್ತಿ ಇವು ಅನೇಕ ಕವಿತೆಗಳಲ್ಲಿ ಓತಪ್ರೋತವಾಗಿವೆ. ಆದರೆ ಈ ಮಾದರಿಯಲ್ಲಿ ಅವರು ಗಳಿಸಿದ ಸಿದ್ಧಿಯು ಹದಿ೧೦ ಪುಟಗಳನ್ನು ದಾಟಿದ ಮೇಲೆಯೆ ನಮಗೆ ಕಾಣದೊರೆಯುವದು.

"ಹಸಿದಿರುವವಗೆ ಹೊಟ್ಟೆ, ಕೊಡು ಅನ್ನವನು.
ನನ್ನ ತನು
ಕೋರುತಿದೆ ಚಳಿಗೆ, ಕೊಡು ಬಟ್ಟೆಗಳನು..
ಇದು ಮೊದಲು ಆ ಮೇಲೆ ಉಳಿದುದೆಲ್ಲ!"

ಬಡವನ ಈ ಭಯಂಕರವಾದ ಕೂಗು, ಕವಿಯಾಗಿ, ನೀತಿವಿದನಾಗಿ, ಧರ್ಮಶಾಸ್ತ್ರಿಯಾಗಿ ಇರುವವನನ್ನು ತರುಬಿ, "ಒಡೆಯುತಿರೆ ಹಣತೆ ಹೊಸ ಬತ್ತಿ ಹೊಸೆಯು"ವ ಅವನ ಹುಚ್ಚನ್ನು ಕಂಡು ನಗುತ್ತದೆ:

"ನ್ಯಾಯ ಅನ್ಯಾಯ ಸತ್ಯಾಸತ್ಯಗಳ ಅರಿವು
ಸುಟ್ಟು ಹೋಗಿದೆ, ನೋಡು, ಹಸಿವೆಯುಲ್ಲಿ!
ನಾನು ಪಶು, ಶುದ್ಧ ಪಶು !"

ಎಂದು ಬಡವ ಅರಚುತ್ತಾನೆ. ಈ ಮಾತಿನ ಕಠೋರ ಸತ್ಯತೆ ನಮ್ಮನ್ನು ಬೆಚ್ಚಿಸುತ್ತದೆ.

ಕಲಕತ್ತೆಯ ಮಹಾ ಸಂಹಾರದ ನಂತರ ಹೆಣಗಳನ್ನು ತಿಂದು ತೇಗಿದ —

ನಾಯಿಗೂ ಕಾಗೆಗೂ ಹದ್ದಿಗೂ ಈ ವಣಿಗು
ಕೊಲುವ ನರ ಕೊಂದುದನು ತಿನ್ನಲೊಲ್ಲ
ನಿದೇಕೆ
ಎಂಬ ಸಂಶಯ ಹರಿಯಲಿಲ್ಲ. "ನರ
ನಿಸ್ವಾರ್ಥಿ,
ಕೊಲ್ಲುವನು ನಮಗಾಗಿ!" ಎಂದು
ಕಂಠವೆತ್ತಿ ಉಗ್ಗಳಿಗೆ
ನಿರ್ಧರಿಸಿ . . . ಹಾಡಿವವು ನರವಿಜಯ
ಗೀತೆಯನು !

ಇದು ವಿಡಂಬನಶೈಲಿಯ ಮೇಲೆ ಕವಿ ಹತೆದ ಪ್ರಭುತ್ವದ ಹೆಗ್ಗುರುತೇ ಸರಿ.

ಆದರೆ ಸಂದರ್ಭಕವಿತೆಗಳಲ್ಲಿ ಮತ್ತು "ಪ್ರಗತಿಶೀಲ" ಕವಿತೆಗಳಲ್ಲಿ ಅವರು ಗಡೆದುದನ್ನು ಮಿಗಿಸುವ ಸಿದ್ಧಿ ಹಲವು ಭಾವಗೀತಗಳಲ್ಲಿ, ಸ್ವಾಭಾವಿಕವಾಗಿಯೆ ಎನ್ನಿರಿ,— ವ್ಯಕ್ತವಾಗಿವೆ.

"ಮೋಹನ ಮುರಲಿ" ಯೆಂಬ ಮೋಹಕ ಕವಿತೆಗೆ ಮುನ್ನುಡಿಕಾರರು ಮೆಚ್ಚಿದ್ದು ಸಹಜವೇ. "ಸಿಗರೇಟಿನ ಹೊಗೆ— ವರ್ತುಳ, ವರ್ತುಳ, ಧೂಪ ಧೂಮಮಾಲೆ" ಯನ್ನು ಬಣ್ಣಿಸುವ "ಧೂಮಲೀಲೆ", "ಹಸಿವಾದರೆ ಎದೆಯನ್ನೇ ತಿಂದೆ", ಕುಳಿತು ಕುಳಿತೆ ಬಾನೆಡೆಗೇ ಏರಬಲ್ಲೆ" ನೆಂಬ "ಅಲಸನ ಹಾಡು", ಮನದ ನಾಡಿಗೆ ಬಂದು ಕೆಲ ಕಾಲ ಉಳಿದು ತಿರುಗಿ "ವಿಜನ ವಿಜನ ವನ" ವನ್ನು "ಶೂನ್ಯ ಶೂನ್ಯ ದಿನ"ವನ್ನು ಬಿಟ್ಟು ಹೋಗುವ "ಅತಿಥಿಗಳ"ನ್ನು ಕುರಿತ ಅರ್ಥ—ಗೂಢ ಶೈಲಿಯ ಗೀತ, ಇವು ಕವಿಯ ಭಾವಾವೇಗ, ಅಭಿವ್ಯಂಜನಸಾಮರ್ಥ್ಯಗಳಿಗೆ ಸಾಕ್ಷ್ಯವಾಗಿವೆ.

ಕೊನೆಯದಾಗಿ ಗಾಂಧೀಜಿಯ ಮೃತ್ಯುವಿನ ನಂತರ ಬರೆದ "ಭಾರತದ ತಂದೆ ಗಾಂಧಿ" ಕನ್ನಡ ಭಾಷೆಯ ಅತ್ಯುತ್ತಮ ಶೋಕಗೀತಗಳಲ್ಲೊಂದಾಗಿ ಬಾಳುವವರಲ್ಲಿ ಸಂದೇಹವಿಲ್ಲ.

ಇವು ಕೆಲ ಸುಂದರ ಪಂಕ್ತಿಗಳು —

". . . ಕಲಕಲಗಳ ಮೇಳಕೂ
ತಂದೆನೀನು ತಂದೆಯೊಂದು ಶ್ರುತಿ ಶುದ್ಧಿಯ
ಸೊಬಗನು"

. . . . .

"ನಿನ್ನ ಕಂಡು ಬೆರಗಾದರು, ನಿನಗೆ
ನಮೋ ನಮ ಎಂದರು
ನಿನ್ನ ಹೊಗಳಿ ಹಾಡಿದರು, ಹಣ್ಣುಕಾಯಿ
ತಂದರು,
ನಿನ್ನ ಪಥವ ಮರೆತು ನಿನ್ನ ಪದಕೆ ಬಿದ್ದ
ಅಂಧರು
ನಿನಗೆ ಗುಡಿಯ ಕಟ್ಟಿ ತಾವು ಬಚ್ಚಲಲ್ಲೆ
ನಿಂದರು."

. . . .

"ನೀನು—ಎಲ್ಲೊ ಒಮ್ಮೆ ನೆಲದ ತಪದ
ಪುಣ್ಯಪಾಕಕೆ
ಮೊಳೆತು ಬರುವ ದೈವಬೀಜ; ಯುಗ
ಯುಗಗಳ ಶೋಕಕೆ
ಬರುವ ಶಾಂತಿತೇಜ; ಬುದ್ಧ ಕ್ರಿಸ್ತ
ರತ್ನಮಾಲೆಗೆ ಸೇರಿದಂಥ ರತ್ನರಾಜ . . ."

ಈ ಸುಂದರ ಗೀತ ಕೊನೆಗೊಳ್ಳುವದು ಹೀಗೆ:

ಏಳುವವರೆ ಏಳಿ; ಎದ್ದು ಹಿಡಿಯಿರವನ
ಪಥವನು,
ಬಾಳುವವರೆ, ಇದ್ದು ಬಾಳಿ ಅವನ ವೀರ
ವ್ರತವನು
ಏರುವವರೆ, ಏಳಿ ಅವನು ಏರಿದಂಥ
ರಥವನು
ಮುಟ್ಟುವವರೆ, ಮುಟ್ಟಿ ಅವನ ತೋರಿ
ದಂಥ ಗುರಿಯನು
ಪಡೆಯುವವರೆ, ಪಡೆಯಿರವನ ಆತ್ಮ
ದಮರಸಿರಿಯನು,
ಅವನ ದಾರಿಯೊಂದೆ ದಾರಿ; ಉಳಿದುದೆಲ್ಲ
ಹಳುವವು
ಅವನ ಗುರಿಯೆ ಗುರಿಯು, ಉಳಿದುದೆಲ್ಲ
ವಿಫಲ ಚಪಲವು!"

ನೂರಿಪ್ಪತ್ತು ಪಂಕ್ತಿಗೂ ಮೀರಿದ ಈ ಶೋಕಗೀತದಲ್ಲೆಲ್ಲ ಅತ್ಯಂತ ತೀವ್ರವಾದ ಆವೇಗ ರಭಸದಿಂದ ಹರಿಯುತಿದ್ದರೂ ಒಂದು ಔಚಿತ್ಯಮೀರಿದ ಪಂಕ್ತಿಯಾದರೂ ಸಿಗದು.

"ಭಾವತರಂಗ"ದಲ್ಲಿ ಹೊಳೆದ ಶ್ರೀ ಅಡಿಗರ ಪ್ರತಿಭೆಯ ಮಿಂಚು ಈ ಸಂಗ್ರಹದಲ್ಲಿ ಶುಕ್ರತಾರೆಯಂತೆ ಸತತ ಪ್ರಭೆಯಿಂದ ಹೊಳಗಿದೆ. ಈ ಸಂಗ್ರಹದಲ್ಲಿ ಅವರು ಹೆಚ್ಚಾಗಿ ವಿಷಮಗಣ (irregalar) ಛಂದಸ್ಸುಗಳನ್ನೇ ಉಪಯೋಗಿಸಿದ್ದಾರೆ. ಆದರೂ ಅದರಲ್ಲಿ ಅವರಿಗೆ ಅಪೂರ್ವ ಸಾಫಲ್ಯ ದೊರಕಿದೆ. ಛಂದೋಲಯ, ಭಾವಲಯಗಳ ಮಧುರ ಮೈತ್ರಿ, ಶಬ್ದಶಕ್ತಿ, ಭಾವನೆಗಳ ಸ್ಫುಟತೆ, ವೇಗ ಈ ಮೊದಲಾದ ಗುಣಗಳಿಂದ ಶ್ರೀ ಅಡಿಗರು ಕನ್ನಡ ಕಾವ್ಯಪ್ರಪಂಚದಲ್ಲಿ ಶಾಶ್ವತಸ್ಥಾನಕ್ಕೆ ಅರ್ಹರಾಗಿದ್ದಾರೆ.

ಮುನ್ನುಡಿಕಾರರೆಂಬಂತೆ ಶ್ರೀ ಅಡಿಗರು ಶ್ರೀ ಬೇಂದ್ರೆ, ಪುಟ್ಟಪ್ಪನವರ ಪ್ರಭಾವದಿಂದ ಸರ್ವಥಾ ನಿರ್ಲಿಪ್ತರಾಗಿದ್ದಾರೆನ್ನುವ ಸಾಹಸ ಪ್ರಸ್ತುತವಿಮರ್ಶಕನದಲ್ಲ. ಏಕೆಂದರೆ ಆ ಪ್ರಭಾವದ ಝಲಕು ಈ ಸಂಗ್ರಹದಲ್ಲಿ ಅನೇಕ ಕಡೆಗಳಲ್ಲಿ ಕಾಣುತ್ತವೆ. ಆದರೆ ಈ ಪ್ರಭಾವದಿಂದ ಕವಿಯ ಸಹಜಪ್ರತಿಭೆಗೆ ಎಲ್ಲಿಯೂ ಗ್ರಹಣ ಹಿಡಿದಿಲ್ಲ. ಇದೀಗ ಮುಖ್ಯವಾದುದು. ಅಡಿಗರು ಎಲ್ಲೆಲ್ಲಿಯೂ ಔಚಿತ್ಯದ ಮುದ್ದೆಯೇ ಆಗಿರುವರೆಂದೂ ನಮ್ಮ ಹೇಳಿಕೆಯಲ್ಲ. "ರಣಕ್ರಂದನ," "ಚಿರ ಉದಾರ," ಮೊದಲಾದ ಅನುಚಿತ ಪ್ರಯೋಗಗಳು, ಕೆಲವೆಡೆ ಅತಿ ಸಾಮಾನ್ಯತೆ, ಗದ್ಯಗಂಧಿತ್ವವೂ ಕಾಣಬರುತ್ತದೆ. ಕವಿಯ ಹಿರಿಮೆಯನ್ನು ಅವನ ಪರಮೋನ್ನತಾವಸ್ಥೆಯಲ್ಲಿ ಅಳೆದು ಹೇಳಬೇಕಲ್ಲದೆ "ಓತಪ್ರೋತಕಟಿಪ್ರಮಾಣ" ದಿಂದಲ್ಲ, ಶ್ರೀ ಅಡಿಗರು ಉನ್ನತಾವಸ್ಥೆಯಲ್ಲಿ ಸಾಕಷ್ಟು ಎತ್ತರವಾಗಿ ಹಾರಿದ್ದಾರೆ.

ಹರಿಯಪ್ಪನ ಅದೃಷ್ಟ

[೩ನೆಯ ಪುಟದಿಂದ]

ಕೇಳಿದ. ಮೈಸೂರುಪಾಕ್‌ಗೆ ಆ ಹೆಸರು ಏಕೆ ಬಂತು? ಎಂದ.

ಅವನ ಪ್ರತಿಯೊಂದು ಪ್ರಶ್ನೆಗೂ ಸರಸು ಚಕಿತಳಾದಳು. ಬಟ್ಟಲುಗಣ್ಣುಗಳಿಂದ ಅವಳು ಅವನನ್ನೇ ಹೆದರಿದ ಜಿಂಕೆಯಂತೆ ನೋಡಿದಳು ಉತ್ತರಗಳ ಧ್ವನಿ ಬರಬರುತ್ತ ಕೃಶವಾಗುತ್ತ ಬಂತು. ಮೈಸೂರುಪಾಕ್ ಪ್ರಶ್ನೆಯ ಹೊತ್ತಿಗೆ ತುಟಿಯಲ್ಲಿ ಕಿರುನಗೆ ಮಿನುಗಿತು, ಕಣ್ಣಲ್ಲಿ ತುಸು ನೀರು ತುಂಬಿತು. ಹರಿಯಪ್ಪ ಬೆಪ್ಪಾಗಿ ಕುಳಿತಿದ್ದ. ಅವನಿಗಿದೊಂದೂ ಬೇಕಿರಲಿಲ್ಲ. ಅದೃಷ್ಟದೇವತೆಯನ್ನು ಅವನು ಅಂತರಂಗದಲ್ಲೇ ಅಂಗಲಾಚುತಿದ್ದ, ಅಷ್ಟೆ.

"ಲಗ್ನ ಗೊತ್ತು ಮಾಡಿ ಕಾಗದ ಬರೆಯಿರಿ! ನಾನು ನಮ್ಮ ತಂದೆಗೆ ಎಲ್ಲವನ್ನೂ ಹೇಳುತ್ತೇನೆ. ವರದಕ್ಷಿಣೆ ವರೋಪಚಾರದ ಮಾತೇ ಎತ್ತುವುದಿಲ್ಲ ನಾವು, ಯಾವಾಗ ಅಂದರೆ, ಆಗ, ನಾವು ಸಿದ್ಧ" ಎಂದು ಹರಿಯಪ್ಪ ಮಾವನವರ ಹತ್ತಿರ ಹೇಳಿದ, ತಲೆತಗ್ಗಿಸಿಕೊಂಡು, ದೇವರಿಗೆ ಮೊರೆಯಿಡುತ್ತಲೇ ಹೇಳಿದ. ತನ್ನ ಆಕಾರ, ತನ್ನ ಬಣ್ಣ, ತನ್ನ ಮುಖದಲ್ಲಿನ ಬೆಪ್ಪು ಇವುಗಳಿಗೆ ಹೆದರಿ, ಎಲ್ಲಿ ಅವರು ನುಸುಳಿಕೊಂಡು ಬಿಡುತ್ತಾರೊ ಎಂಬುದು ಅವನ ಹೆದರಿಕೆ.

ಸರಿ! ಊರಿಗೆ ಹಿಂತಿರುಗಿದರು. ದಾರಿಯುದ್ದಕ್ಕೂ ಗೋಪಾಲ ಅವರ ಮನೆ ಆತಿಥ್ಯ ಆ ಮನೆಯ ಯಜಮಾನರ ಸಭ್ಯತೆ, ವಿಶಾಲಮನಸು ಸರಸುವಿನ ಸಾಮರ್ಥ್ಯ, ಅವಳ ಕೋಗಿಲೆಕಂಠ, ಶ್ಯಾಮಲ ಬಣ್ಣ – ಇವುಗಳನ್ನೇ ಹೊಗಳುತ್ತಿದ್ದ. ಹರಿಯಪ್ಪ ಕಂಡ ಕಂಡ ದೇವರಿಗೆಲ್ಲ ಕೈಮುಗಿಯುತ್ತಲೇ ಬಂದ.

ಚಿತ್ರದುರ್ಗದಿಂದ ಮೊನ್ನೆ ಒಂದು ಪತ್ರ ಬಂತಂತೆ ಗೋಪಾಲನ ಪತ್ತೆಗೆ, ಹರಿಯಪ್ಪನ ದಕ್ಕಲ್ಲ ಅದರಲ್ಲಿ ಹರಿಯಪ್ಪನ ಮದುವೆಯ ವಿಷಯವೇ ಪ್ರಸ್ತಾಪಿತವಾಗಿರಲಿಲ್ಲ! ಆದರೆ ಸರಸು ಮದುವೆಯ ವಿಷಯ ಇತ್ತು. ಅವಳನ್ನು ಮದುವೆಯಾಗಲು ದಯವಿಟ್ಟು ಒಪ್ಪುತ್ತೀರಾ? ಎಂದು ಅವರು ಗೋಪಾಲನನ್ನು ಕೇಳಿದ್ದರು. ಆ ಕಾಗದವನ್ನು ಅವನು ತನ್ನ ಹೆಂಡತಿಗೆ ತೋರಿಸಿ, ಕಿಲಕಿಲನೆ ನಕ್ಕ.

ದಮ್ಮು ನೆಟ್ಟಗಾದೀತು ಆದರೆ

ಪುರೋಹಿತ ಶ್ವಾಸಹಾರಿಯಿಂದಲೇ

ಬರೇ ನಿಮಿಷದಲ್ಲಿ, ಒಂದೇ ರಾತ್ರಿಯಲ್ಲಿ ದಮ್ಮು ಬಿಟ್ಟಿಗೆ ಮಾಡೇವು ಎಂಬ ಉಪಾಯಗಳಿಂದ ದಮ್ಮು ಗುಣಪಡದೆ ಹೆಚ್ಚುವುದು. ಪುರೋಹಿತ ಶ್ವಾಸಹಾರಿಯು ಮಾತ್ರ ಇಂಥ ಔಷಧವಿದೆ; ಅದನ್ನು ತೆಗೆದುಕೊಳ್ಳಲು ಹತ್ತಿದ ಕೂಡಲೇ ಕೆಮ್ಮು ಕಡಿದು ರೋಗಿ ಕೇಳು ಕಡಿಮೆ ಆಗುವುದು. ಪಚನಕ್ರಿಯೆ ಹೆಚ್ಚುವುದು. ಶ್ವಾಸ ಗಟ್ಟಿಮುಟ್ಟಾಗಿ ದಮ್ಮು ಖಂಡಿತವಾಗಿ ಬಿಟ್ಟು ಹೋಗುವುದು.

೬-೮, ೬ ಮತ್ತು ೧೦ ರೂ. ಪ್ಯಾಕಿಂಗದಲ್ಲಿ ಎಲ್ಲ ಕಡೆಗೂ ಸಿಗುವದು. ಇಲ್ಲವೆ ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ, ಇವರಿಂದ ತರಿಸಿಕೊಳ್ಳಬೇಕು.

ಗೂರಲನ್ನು ಮತ್ತೂ ಶ್ವಾಸಕೋಶ ಕಾಯಿಲೆಗಳನ್ನು ಗುಣಪಡಿಸಲು ಇದೊಂದೇ ವೈದ್ಯರ ಔಷಧ

SHWASHARI

ಪುರೋಹಿತ ಶ್ವಾಸಹಾರೀ

DR. PUROHIT PHARMACY, KOLHAPUR

ಹುಬ್ಬಳ್ಳಿ ಸ್ಟಾಕಿಸ್ಟರು – ಹುಬಳಿ ಫಾರ್ಮಸಿ

ಕಾಲರಾ

ಭಾರತದಲ್ಲಿ ಸಾವಿರಾರು ಜನರು ಕಾಲರಾ ಬೇನೆ ಬಡೆದು ಸಾವಿನ ಬಾಯಿಗೆ ತುತ್ತಾಗುವರು. ಊರೂರಿಗೆ ಯಾತ್ರೆಗೆ ಹೋಗುವವರಿಗೆ ಈ ಬೇನೆ ಯಾವಾಗ ಬಡೆದೀತು ಎಂಬುದರ ಗೊತ್ತೆ ಇಲ್ಲ. ಕಾಲರಾದ ಸಂಶಯ ಬಂದ ಕೂಡಲೇ ಜವೇರಿಯನ್ ಜೀವನ ಮಿಕ್ಶ್ಚರದ ಒಂದೆರಡು ಹನಿ ನೀರಲ್ಲಿ ಹಾಕಿ ಕುಡಿದರೆ ಜೀವ ಉಳಿಯುವದು. ಅತಿಸಾರ, ಮಕ್ಕಳ ಅಜೀರ್ಣ, ಹೊಟ್ಟೆ ಉಬ್ಬುವದು, ಶೀತ, ನೆಗಡಿ, ಹಲ್ಲು ನೋವು, ಹೊಟ್ಟೆ ನೋವು ಮುಂತಾದ ಸಣ್ಣ ದೊಡ್ಡ ಬೇನೆಗಳಿಗಾಗಿ ಬಹಳೇ ಗುಣಕಾರಿಯಾದ್ದರಿಂದ ಮನೆಯಲ್ಲಿಯೂ, ಪ್ರವಾಸಮಾಡುವಾಗಲೂ ಹತ್ತಿರ ಈ ಔಷಧದ ಒಂದು ಬಾಟಲಿ ಇಟ್ಟುಕೊಂಡರೆ ಬೇನೆಯ ಭಯವೂ ಹೋಗುವದು ಮತ್ತೂ ಡಾಕ್ಟರರಿಗೆ ಕೊಡಬೇಕಾದ ಹಣವೂ ಉಳಿಯುವದು. ಕೆಮಿಸ್ಟರಲ್ಲಿಯೂ ಹಳ್ಳಿ ಹಳ್ಳಿಗಳಲ್ಲಿಯ ಅಂಗಡಿಗಳಲ್ಲಿಯೂ ಸಿಗುವುದು.

ಎಮ್. ಎಚ್. ಜವೇರಿಯನ್ ಮತ್ತು ಕಂ. ಪ್ರಿನ್ಸೆಸ್ ಸ್ಟ್ರೀಟ, ಮುಂಬಾಯಿ ೨

ಬಳಲುವ ಅಬಲೆಯರಿಗಾಗಿ

ಶೀಲಧಾ

ಅಶೋಕಾ-ಎಲಿಟ್ರಿಸ ಕಂಪೌಂಡ ಗುಳಿಗೆಗಳು

(ಪ್ರವಾಳಯುಕ್ತ)

ಹೆಂಗಸರ ಗರ್ಭಾಶಯದ ಎಲ್ಲ ರೋಗಗಳ ಮೇಲೆ ಅಮೌಲ್ಯ ಮದ್ದು. ಗರ್ಭಸ್ರಾವ ನಡುನೋವು, ಬಹಳ ರಕ್ತಸ್ರಾವ, ಪ್ರದರ, ಅನಿಯಮಿತ ಮುಟ್ಟು, ಅಗ್ನಿಮಾಂದ್ಯ, ತೇಜಹೀನತೆ ಮುಂತಾದ ಹೆಂಗಸರ ಅನೇಕ ಬೇನೆಗಳನ್ನು ಖಾತ್ರಿಯಾಗಿ ನಾಶ ಮಾಡುತ್ತದೆ. ನಿಜವಾಗಿಯೂ ಇದು ನರಳುವ "ಅಬಲೆಯರ ತಪ್ಪಲಾರದ ಮಿತ್ರ".

೫೦ ಗುಳಿಗೆಯ ಬಾಟ್ಲಿಗೆ ರೂ. ೨-೦-೦ ವ್ಹಿ. ಪಿ. ಖರ್ಚ ಬೇರೆ

ಶೀಲಧಾ ಕೆಮಿಕಲ್ ಕಂ. ಸಿರಸಿ (ಕ್ಯಾನರಾ)

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರವರು ಮುದ್ರಿಸಿ ಪ್ರಕಟಿಸಿದರು.